Committee on Petitions—Nomination of Members.

Under sub-rule (2) of rule 248 I nominate the following persons to be members on the Committee on Petitions:

Sriyuts :—
R. S. Hegde
K. P. Gadag
Andaniah
M. N. Naghnoor

The Deputy Speaker will be ex-officio Chairman.

PAPERS LAID ON THE TABLE.

Sri ALUR HANUMANTHAPPA (Minister for Minor Irrigation).—Sir, I beg to lay on the Table the second and third annual reports for 1961-62 and 1962-63 respectively of the Tungabhadra Steel Products Limited as required under sub-section (2) of section 639 of the Companies Act, 1956 (Central Act No. 1 of 1956).

Sri H. R. KESHAVAMURTHY (Gandasi).—Sir, point of order. Can the Hon'ble Deputy Minister lay on the table the report when he is occupying a different seat?

Mr. SPEAKER.—There is no merit in the point of order.

Sri ALUR HANUMANTHAPPA.—Sir, as promised by the Minister for Revenue, I beg to lay on the Table copies of extracts from letters and other papers relating to the amendments suggested by the Government of India to the Land Reforms in Mysore.

Mr. SPEAKER.—The other day it was pointed out that extracts of letters relating to the amendments contained in the Act might be placed on the Table of the House and the Hon'ble Minister was pleased to agree to it.

I wish to know from the Hon'ble members whether they have Mysore Land Reforms Bill, 1965. I do not want anybody to say that he has not received it. I am emphasising because it is going to be taken up before we adopt the Resolution. Now we will go to the debate.

LAND REFORMS, BILL, 1965.

Motion to Consider.

† Sri S. SIVAPPA.—Sir, I request the Hon'ble Minister in charge of this Bill to furnish information on two or three important points so that it may help the discussion on this Bill :

1. I want to know from the Government what would be the extent of surplus land available for distribution if this Act comes into force to-day ;

2. I want to know how many transfers have been made on 18th November 1961. Now they want to amend Section 16 to see that that

(SRI S. SIVAPPA)

the transfers after 18th November 1961 be made invalid. I want to know the number of transfers and also the extent of land involved in such transfers. This is very important ;

3. What would be the amount of compensation the State Government has to pay for the surplus land acquired by the Government and the land that is going to be acquired.

Mr. SPEAKER.—Acquired from where ?

Sri S. SIVAPPA.—They must be having some data. Now they want to reduce the amount of compensation paid in cash from Rs. 10,000 to Rs. 2,000. I want to know what would be the amount payable by the Government if Rs. 10,000 limit is retained. I do not know why they want to change this limit. I want to know what is the present amount on Rs. 10,000 limit and what would be the amount when it is changed to Rs. 2,000.

Mr. SPEAKER.—Why has there been so much delay in asking for the information ?

Sri S. SIVAPPA.—This information will facilitate us to participate in the Debate. No figures are available. What would be the extent of surplus land available ? We want to know the effect of this Bill on the people.

Mr. SPEAKER.—I wish the Leader of the Opposition thinks about these things in time. The other day he was absent and he sends a letter saying that this work must be done to-day. After the Debate is over partially, he wakes up and says : 'I want this information'. Why not write to them and get the information ? Please write and give it to me and I will pass it on. Weapons must be ready in time.

I call upon Sri H. D. Deve Gowda.

(Hon'ble Member Sri H D. Deve Gowda was absent).

As the Member is absent, he loses his chance. I call upon Sri T. N. Madappa Gowda to speak for ten minutes.

Sri T. N. MADAPPA GOWDA (Nagamangala).—I shall try to finish as early as possible.

Mr. SPEAKER.—The Member has to finish in ten minutes, because we have to finish it to-day. What time have we ?

Sri C. J. MUCKANNAPPA (Sira).—Sir, you yourself said that if necessary we will have to sit on Tuesday morning.

Mr. SPEAKER.—I appeal to the Hon'ble Members even now ; let me have some collective opinion to-day.

Sri C. J. MUCKANNAPPA.—It was agreed day-before yesterday.

Mr. SPEAKER.—I don't think any of you, either the Treasury Benches or the Whips met together to come to some understanding.

Sri C. J. MUCKANNAPPA.—Sir, this is a very important Bill. Let the Member express his views clearly. Even if there are a few more Members desirous of participating, let them have their full say.

Mr. SPEAKER.—I think, I allotted one hour for the reply by the Hon'ble Minister.

Sri C. J. MUCKANNAPPA.—Let the reply be to-morrow, not to-day. Let us sit in the morning to-morrow, if necessary.

Mr. SPEAKER.—If I analyse the proceedings for the last three days, this kind of request has come at a late hour.

Sri C. J. MUCKANNAPPA.—Sir, you yourself said that if necessary we have to sit on Tuesday morning.

Mr. SPEAKER.—I said, to-morrow is a Holiday ; let Members come to some understanding and inform me. Why don't the Hon'ble Whips meet and finalise ? What are the Whips doing ? Don't make requests on the Floor of the House if you cannot meet. Please retire and meet in the Lounge or in my Ante-Chamber. I will get a cup of Coffee for all of you.

ಶ್ರೀ ಟಿ. ಎನ್. ಮಾದಪ್ಪಗೌಡ.—ಸ್ವಾಮೀ, ನಮ್ಮ ಮುಂದೆ ತಂದಿರತಕ್ಕ ಮೈಸೂರು ಲ್ಯಾಂಡ್ ರಿಫಾರಂಸ್ ಬಿಲ್‌ಗೆ ನಾವು ಒಪ್ಪಿಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು ವಿಷಾದದಿಂದ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ರಾಜಕೀಯ ಪಕ್ಷಗಳು ತಾರಾ ತಿಕ್ಕಡಿ ಆಟದಿಂದ ಎಲೆಕ್ಷನ್ನು ಕಾಲದಲ್ಲಿ ಬಡವರನ್ನು ಮೋಸ ಮಾಡುವುದಕ್ಕೆ ಇಂತಹ ಒಂದು ದೊಡ್ಡ ಉಪಾಯವನ್ನು ಹೂಡಿದ್ದಾರೆ. ಇಂತಹ ಒಂದು ಸ್ಲೋಗನ್‌ನನ್ನು ಎಲೆಕ್ಷನ್ನು ಕಾಲಕ್ಕೆ ಹೆಚ್ಚು ಹೆಚ್ಚಾಗಿ ಜನಗಳ ಮುಂದೆ ತಂದು ಅವರಿಗೆ ಟೋಪಿ ಹಾಕಿ ತಾವು ಚುನಾವಣೆಯಾಗಿ ಇಂತಹ ಸಭೆಗಳಿಗೆ ಬಂದು ಅವರ ಮೇಲೆ ಇರುವಂತಹ ಹೊರೆಗಳನ್ನು ಇನ್ನೂ ಹೆಚ್ಚೆಚ್ಚಾಗಿ ಹೊರಿಸತಕ್ಕ ಪ್ರಯತ್ನ ಮಾಡುತ್ತಿದ್ದಾರೆ. ಇದು ಕಾಂಗ್ರೆಸ್ಸು ಒಂದು ಪಕ್ಷವೇ ಅಲ್ಲ, ನಮ್ಮ ದೇಶದಲ್ಲಿರುವ ಎಲ್ಲ ಪಕ್ಷಗಳೂ ಅದರಲ್ಲಿ ಸ್ವತಂತ್ರ ಪಕ್ಷ ಒಂದನ್ನು ಬಿಟ್ಟು, ಬಾಕಿ ಎಲ್ಲ ಪಕ್ಷಗಳೂ ಲ್ಯಾಂಡು ರಿಫಾರಂಸ್‌ನ್ನು ತರಬೇಕು ಎಂದು ಹೇಳುತ್ತಿದ್ದಾರೆ. ಆದರೆ ಶ್ರೀಮಾನ್ ಗೋಪಾಲ ಗೌಡರ ಪಕ್ಷದವರು ಇದನ್ನು ಬಹಳ ತೀವ್ರವಾಗಿ ಯೋಚನೆ ಮಾಡುತ್ತಿದ್ದಾರೆ, ಕೆಲವರು ಸ್ವಲ್ಪ ಕಡಮೆಯಾಗಿ ಯೋಚನೆ ಮಾಡುತ್ತಾರೆ ಅಷ್ಟೆ. ಇದರಲ್ಲಿ ಏನೋ ಒಂದು ತರಹದ ಮೋಸ ಇದೆ ಎನ್ನುವುದು ಕಾಣುತ್ತಿದೆ. ಹೇಗೆಂದರೆ ಒಬ್ಬ ಹಿಡುವಳಿದಾರನಿಗೆ 27 ಸ್ಟಾಂಡರ್ಡು ಎಕರೆಗಳನ್ನು ಬಿಡಬೇಕು ಮತ್ತು ಮುಂದೆ ಬರುವವರಿಗೆ 18 ಸ್ಟಾಂಡರ್ಡು ಎಕರೆಗಳಷ್ಟು ಬಿಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ದೇಶದಲ್ಲಿ ಶೇಕಡಾ 80 ಭಾಗದಷ್ಟು ವ್ಯವಸಾಯದಲ್ಲೇ ಜೀವನ ಮಾಡತಕ್ಕ ಜನರಿದ್ದಾರೆ ಎಂದು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಹೇಳುತ್ತಿದ್ದಾರೆ ಮತ್ತು ಎಲ್ಲರಿಗೂ ಜಮೀನು ಹಂಚಬೇಕೆಂದು ಹೊರಟರೆ ಒಬ್ಬರಿಗೆ ಅರ್ಧ ಎಕರೆಯಷ್ಟು ಭೂಮಿ ಕೊಡುವುದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಈಗ ಶೇಕಡಾ 80 ರಷ್ಟು ಜನ ವ್ಯವಸಾಯದಲ್ಲೇ ಇದ್ದುಕೊಂಡು ಜಮೀನು ಇಟ್ಟುಕೊಂಡೋ ಕೂಲಿಯೋ ನಾಲಿಯೋ ಮಾಡಿಕೊಂಡೋ ಜೀವನ ನಡೆಸಬೇಕು, ಇವರಿಗೆ ಹಂಚಿ ಕೊಡಬೇಕಾದರೆ ಒಂದು ಸಂಸಾರದಲ್ಲಿ ವ್ಯವಸಾಯದಿಂದ ಜೀವನ ಮಾಡಬೇಕಾದರೆ, ಎಲ್ಲರಿಗೂ ನೀವು ಈಗ ನಿಗದಿ ಮಾಡಿರತಕ್ಕ 18 ಅಥವಾ 27 ಸ್ಟಾಂಡರ್ಡು ಎಕರೆಗಳಷ್ಟು ಜಮೀನನ್ನು ಬಿಟ್ಟು ಎಲ್ಲಿಂದ ತಂದು ಕೊಡುವುದಕ್ಕೆ ಸಾಧ್ಯ ? ಎಲ್ಲರಿಗೂ ಜೀವನಕ್ಕೆ ಸಾಕಾಗುವಷ್ಟು ಜಮೀನು ಎಲ್ಲಿಂದ ಬರುತ್ತದೆ ? ಇದರಲ್ಲಿ ಎಲ್ಲ ಬಡವರಿಗೂ ಅನುಕೂಲವಾಗುವ ಹಾಗೆ ಮಾಡುತ್ತೇವೆಂದು ಹೇಳುತ್ತಾರೆ. ಇದು ಹೇಗಿದೆ ಎಂದರೆ ಬಿಸಿಲ್ಗುದುರೆಯಂತೆ ಆಗಿದೆ. ಮರಳು ಕಾಡಿನಲ್ಲಿ ನೀರು ಎಲ್ಲೆಲ್ಲಿಯೂ ಕಾಣುತ್ತದೆ ಎಂದು, ಅಲ್ಲಿ ನೀರು ಇದೆ ಎಂದು ಹೇಳಿದರೆ ಅಲ್ಲಿ ನೀರೇ ಸಿಗುವುದಿಲ್ಲ. ಹಾಗೆ ಬಡವರಿಗೆ ಎಲೆಕ್ಷನ್ನು ಕಾಲದಲ್ಲ ಇಂತಹ ತೀರ್ಮಾನಗಳನ್ನು ನಾವು ಮಾಡಿದ್ದೇವೆ ಎಂದು ಒಂದು ತರಹದ ವಂಚನೆ ಮಾಡುತ್ತಿದ್ದಾರೆಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

2.30 P. M.

ಇದಲ್ಲದೆ ವ್ಯವಸಾಯಗಾರನ ಮೇಲೆ ಏತಕ್ಕೆ ಎಲ್ಲರ ಕಣ್ಣು ? ಮೈಸೂರು ಬೆಂಗಳೂರು ದೊಡ್ಡ ಪಟ್ಟಣಗಳಲ್ಲಿ 20 ಸಾವಿರ, 30 ಸಾವಿರ ; 50 ಸಾವಿರ ಮನೆ ಬಾಡಿಗೆ ತೆಗೆದುಕೊಳ್ಳುವ ಪುಣ್ಯ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ವಂತರು ಇರುವಾಗ್ಗೆ ಅವರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಧೈರ್ಯವಿಲ್ಲ. ಅಂಥವರನ್ನು ಕೇಳುವುದಕ್ಕೆ ಆಗುವುದಿಲ್ಲ. ಬಡತನದಿಂದ ಜೀವನ ಮಾಡಲು ಅಲ್ಪ ಜಮೀನು ನೆಚ್ಚಿಕೊಂಡು ಇರುವ ರೈತನ ಮೇಲೆ ಭಾರ ಹಾಕುತ್ತಿರುವಿರಿ. ರೀಸೆಟ್ಲಮೆಂಟ್ ಮಾಡಿ ನಾಲ್ಕು ಪರ್ಸೆಂಟ್ ಜಾಸ್ತಿ ಮಾಡಿದ್ದು ನಮಗೆ ತಲೆಗೆ ಹಿಡಿಯುತ್ತಿಲ್ಲ. ಇಂದು ದೇಶದಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತಿದೆ ಆದರೆ ವ್ಯವಸಾಯಗಾರನ ಮೇಲೆ ಏತಕ್ಕೆ ತೆರಿಗೆ ಭಾರ ಹಾಕುವುದು ನನಗಂತೂ ಅರ್ಥವಾಗುವುದಿಲ್ಲ. ನಮ್ಮ ಮೈಸೂರು ಸಂಸ್ಥಾನದಲ್ಲಿ ಸ್ಟ್ಯಾಂಡರ್ಡ್ ಎಕರೆಗಿಂತ ಹೆಚ್ಚಿಗೆ ಜಮೀನು ಇಟ್ಟುಕೊಂಡಿರತಕ್ಕಂಥ ರೈತರು ಎಷ್ಟು ಜನ ಇದ್ದಾರೆ ಎಂಬುದಕ್ಕೆ ಅಂಕಿ ಅಂಶಗಳನ್ನು ಕೊಡುತ್ತೀರಾ ? ನಮ್ಮ ಹಳೇ ಮೈಸೂರು ಭಾಗದಲ್ಲಿ, ಅದರಲ್ಲಿಯೂ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಅಂಥ ಒಬ್ಬಿಬ್ಬರು ರೈತರು ಸಹ ಇಲ್ಲ. ಹಾಗಾದರೆ ಟೆನೆಂಟ್ಸ್‌ಗಳಿಗೆ ಜಮೀನು ಎಲ್ಲಿಂದ ಕೊಡುತ್ತೀರಾ ? ಇದು ವಂಚನೆ, ಮೋಸ ಅಲ್ಲವೇ ? ಎಂದು ನಾನು ಪ್ರಶ್ನೆ ಕೇಳುತ್ತೇನೆ. ನವಕರಿಯಲ್ಲಿರತಕ್ಕಂಥವರು ಒಂದೆರಡು ಎಕರೆ ಜಮೀನು ಇಟ್ಟುಕೊಂಡು ಬೇರೆ ಕಸಬು ಮಾಡಿ ಹೊಟ್ಟೆ ತುಂಬಿಕೊಳ್ಳುವ ಜನ ಯಾವುದನ್ನೂ ನಂಬಿಕೊಂಡು ಇರುವುದಕ್ಕಾಗುವುದಿಲ್ಲ. ಜಮೀನು ನಂಬಿಕೊಂಡು ಇರತಕ್ಕಂಥವರ ಗತಿ ಏನು ? ಅವನಿಗೆ ಬೇರೆ ಕೆಲಸ ಕೊಡುವ ಗ್ಯಾರಂಟೀ ಕೊಡುತ್ತೀರಾ ? ಅವರ ಮಕ್ಕಳು ಮರಿ ಬದುಕುವುದು ಹೇಗೆ ? ವ್ಯವಸಾಯ ಮಾಡುವುದು ಬಹಳ ಸುಲಭವಾಗಿದೆ ಎಂದು ತಿಳಿದುಕೊಂಡಿದ್ದಾರೆ. ನಾನು ದೊಡ್ಡ ಜಮೀನುದಾರನಲ್ಲ. ಮಧ್ಯಮ ವರ್ಗದ ಕೆಳದರ್ಜೆಯ ಒಬ್ಬ ವ್ಯವಸಾಯಗಾರನೆಂದು ನನ್ನ ಮಟ್ಟಿಗೆ ಹೇಳಬಹುದು. ಐದು ಹತ್ತು ಎಕರೆ ಜಮೀನು ಇಟ್ಟುಕೊಂಡಿರುವವರು ಕಷ್ಟಪಟ್ಟು ದುಡಿದು ಬೆಳೆಯ ಬೇಕಾದರೆ ವ್ಯವಸಾಯ ಕಾಲದಲ್ಲಿ ಮೂರು ನಾಲ್ಕು ಸಾವಿರ ಬಂಡವಾಳ ಇಟ್ಟು ಕೊಂಡಿರಬೇಕಾಗುತ್ತದೆ. ಗೊಬ್ಬರ, ಬೀಜ ಕೊಂಡುಕೊಳ್ಳಬೇಕಾಗುತ್ತದೆ. ಕೆಲಸಗಾರರಿಗೆ ಕೂಲಿ ಕೊಡಬೇಕಾಗುತ್ತದೆ. ಇಂದು ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟು ಆಗಿದೆ ಎನ್ನುವುದು ಯಾರೂ ಅರ್ಥ ಮಾಡಿಕೊಂಡಿಲ್ಲ. ಕಾಸ್ಟ್ ಆಫ್ ಪ್ರೊಡಕ್ಷನ್ ಹೆಚ್ಚಾಗಿದೆ ಎಂಬುದನ್ನು ಇಂಥ ಸಮಯದಲ್ಲಿ ಮರೆತು ಬಿಡಬಾರದು. ಜಮೀನನ್ನು ಹರಿದು ಹಂಚಿ ಹಾಳು ಮಾಡಿದರೆ ರೈತನು ತನ್ನ ಮಕ್ಕಳನ್ನು ಓದಿಸುತ್ತಾನೆಯೆ ? ಇಂದು ರೈತನನ್ನು ನಿರ್ನಾಮ ಮಾಡತಕ್ಕಂಥ ರೀತಿ ನೀತಿಯಲ್ಲಿ ನಮ್ಮ ದೇಶ ಮುಂದೆ ಹೋಗುತ್ತಿದೆ. ರೈತ ತಲೆ ಎತ್ತಬಾರದು, ಜಮೀನು ನಂಬಿಕೊಂಡವನಿಗೆ ಹೊಟ್ಟೆಗಿಲ್ಲ ಬಟ್ಟೆಗಿಲ್ಲ ಎಂದು ಮಾಡಿ ನಿರ್ನಾಮವಾಗುವ ಹಾಗೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಮಾಡುತ್ತಿದೆ ಎಂದು ನಾನು ಘಂಟಾಘೋಷವಾಗಿ ಹೇಳಲು ಇಷ್ಟಪಡುತ್ತೇನೆ. ಈ ಕಾನೂನಿನ ಉದ್ದೇಶ ಒಳ್ಳೆಯದು. ಆದರೆ ಅನೀತಿ, ಅಸತ್ಯತೆ, ದಗಲಬಾಜಿ ಜಾಸ್ತಿಯಾಗಿರುವುದು ಕಾರಣವಾಗಿದೆ. ನಾವೂ ಸಹ ಪ್ರವಾಹದ ಜೊತೆಯಲ್ಲಿ ಹೋಗಬೇಕಾಗಿದೆ. ನಿಮ್ಮ ಈ ರೀತಿ ನೀತಿಯಿಂದ 1967ನೇ ಇಸವಿಯಲ್ಲಿ ಜನತೆ ನಿಮಗೆ ಚೆನ್ನಾಗಿ ಪಾಠ ಕಲಿಸುತ್ತಾರೆ. ಇಂಥ ಎಲ್ಲ ಕಾನೂನುಗಳ ಪರಿಣಾಮವನ್ನು 1967ರಲ್ಲಿ ನೀವು ಅನುಭವಿಸುತ್ತೀರಿ ಎಂದು ನಾನು ಇವತ್ತೇ ನಿಮಗೆ ಭವಿಷ್ಯ ಹೇಳುತ್ತೇನೆ. ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟ ದೇವಸ್ಥಾನಗಳ ಗೇಣಿದಾರರಿಗೆ ಈ ಕಾನೂನು ಅನ್ವಯಿಸುವುದಿಲ್ಲ ಎಂದು ಮಾನ್ಯ ಸಚಿವರು ಹೇಳಿದರು. ಇಂದು ನಮ್ಮ ರಾಷ್ಟ್ರ ಜಾತ್ಯತೀತ ರಾಷ್ಟ್ರ ಎಂದು ಬಾಯಲ್ಲಿ ಮಾತ್ರ ಹೇಳುತ್ತಾರೆ. ಆದರೆ ಪ್ರತಿಯೊಂದರಲ್ಲೂ ಜಾತೀಯತೆ ಕಂಡು ಬರುತ್ತದೆ. ಈ ರೀತಿ ಹೇಳುವುದು ಎಲ್ಲರಿಗೂ ಅನುಮಾನ. ನಮ್ಮ ದೇಶದಲ್ಲಿ ಪೂರ್ವಿಕರು ಗಟ್ಟಿಯಾದ ಧರ್ಮದ ತಳಹದಿಯ ಮೇಲೆ ಸಮಾಜ ಕಟ್ಟಿದ್ದಾರೆ. ಧರ್ಮ ಸರಿಯಾಗಿ ಉಳಿದುಕೊಂಡು ಬರುವುದಕ್ಕೆ ಅಲ್ಲಲ್ಲಿ ಮಠಗಳನ್ನು ಸ್ಥಾಪನೆ ಮಾಡಿದ್ದಾರೆ. ಇವುಗಳ ಮೂಲಕ ಜನರಲ್ಲಿ ನಂಬಿಕೆ ಬೆಳೆದು ಧರ್ಮ ಶ್ರದ್ಧೆ ಧಾರ್ಮಿಕ ಭಾವನೆ ಹೆಚ್ಚಾಗುವುದಕ್ಕೆ ಒಂದು ಒಳ್ಳೇ ಏರ್ಪಾಡು ಮಾಡಿದ್ದಾರೆ. ದೇವಸ್ಥಾನದಲ್ಲಿರುವ ಕಲ್ಲು ದೇವರು ಮಾತನಾಡುವುದಿಲ್ಲ. ದೇವಸ್ಥಾನ ಮಠ ಇವುಗಳ ಮೂಲಕ ಜನರಲ್ಲಿ ಧಾರ್ಮಿಕ ಭಾವನೆ ಬೆಳೆಯುತ್ತದೆ. ಶ್ರೀರಂಗಪಟ್ಟಣದಲ್ಲಿರುವ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ಹಾಗೆ ನಮ್ಮ ಊರಿನಲ್ಲಿ ಕೇಶವಮೂರ್ತಿ ದೇವಸ್ಥಾನ ಇದೆ. ಸಾವಿರಾರು ಪಲ್ಲ ಬೆಳೆಯತಕ್ಕಂಥ ಜಮೀನು ಒಬ್ಬ ಪುಡಾರಿಯ ಕೈಯಲ್ಲಿದೆ. ಈ ಪುಡಾರಿಯು 30 ರೂಪಾಯಿ ಕೊಡುತ್ತಾನೆ. ಈ ಜಮೀನು ಅವನಿಗೇ ಆಗುತ್ತದೆ. ಈ ರೀತಿ ದೇವರ ಆಸ್ತಿಯನ್ನು ಪುಢಾರಿಗಳು ಎತ್ತಿ ಹಾಕಿ ಬಿಟ್ಟಿದ್ದಾರೆ. ಆದುದರಿಂದ ಮುಜರಾಯಿ ಇಲಾಖೆಯ ಲ್ಯಾಂಡ್ಸನ್ನು ಸರಕಾರದವರು ತಾವೇ ವಹಿಸಿಕೊಂಡು ಒಳ್ಳೇ ಉತ್ಪತ್ತಿ ಬರುವ ರೀತಿಯಲ್ಲಿ ಪೈಪೋಟಿಯಲ್ಲಿ ಹರಾಜು ಹಾಕಿ ಉತ್ಪತ್ತಿ ಬರತಕ್ಕಂಥಾದ್ದನ್ನು ನಮ್ಮ ಧರ್ಮ ಸಂಸ್ಕೃತಿ ಬೆಳವಣಿಗೆಗೆ ಉಪಯೋಗಿಸುವ ಹಾಗೆ ಏರ್ಪಾಡು ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಮ್ಮ ಸರಕಾರ ಕಮ್ಯುನಿಷ್ಟರ ಕಮ್ಯುನಿಜಂ ಏನು ಇದೆಯೋ ಆ ದಾರಿಯಲ್ಲಿ ಹೋಗುತ್ತಾ ಇದೆ. ಇದನ್ನು ಬಹಳ ವಿಷಾದದಿಂದ ಹೇಳುತ್ತೇನೆ

ಕಮ್ಯೂನಿಜಂ ಬಹಳ ಅನಾಹುತ ಮಾಡಬಲ್ಲದು ಎಂದು ನಾನು ತಿಳಿದುಕೊಂಡಿದ್ದೇನೆ. ಅಳುವ ಮಗುವಿಗೆ ಚೂರು ಬೆಲ್ಲ, ಪೆಪ್ಪರಮೆಂಟು ಕೊಟ್ಟು ತಾಯಿ ಮಗುವನ್ನು ಒಂದು ಅರ್ಧ ಗಂಟೆ ಕಾಲ ಸುಮ್ಮನೆ ಕೂಡ್ರಿಸಬಹುದು. ಹಾಗೆ ಈ ಲ್ಯಾಂಡ್ ರಿಫಾರ್ಮ್ಸ್ ಮಾಡುತ್ತಿದ್ದೀರಿ. ಜನರಿಗೆ ತುಂಬಾ ವಂಚನೆ ಮಾಡತಕ್ಕ ರೀತಿಯಲ್ಲಿ ಕರೆದುಕೊಂಡು ಹೋಗುತ್ತಿದ್ದೀರಿ. ಕಲ್ಲು ಇರತಕ್ಕಂಥ ಬಂಜರು ಭೂಮಿಯನ್ನು ಒಂದೆರಡು ಎಕರೆ ನೀವು ಕೊಡಬಹುದು. ಬಂಡವಾಳವಿಲ್ಲದೆ ಒಂದೆರಡು ಎಕರೆ ಭೂಮಿಯಲ್ಲಿ ರೈತ ಏನು ಬೆಳೆಯಬಹುದು ! ಅದರಲ್ಲಿ ಅವನು ಜೀವನ ಮಾಡುವುದು ಹೇಗೆ? ಅವನಿಗೆ ತೃಪ್ತಿಯುಂಟಾಗುತ್ತದೆಯೇ ? ಹೀಗೆ ಮಾಡಬೇಡಿ. ಏನಾದರೂ ಕೇಳಿದರೆ ಇಂಗ್ಲೆಂಡ್ ಅಮೇರಿಕಾ ಉದಾಹರಣೆ ಕೊಡುತ್ತೀರಿ. ಫ್ರಾಗ್ಮೆಂಟೇಷನ್ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳುತ್ತೀರಿ. 100 ಅಥವಾ 500 ಎಕರೆ ಸಾವಿರಾರು ಎಕರೆ ಇರುವ ಕಡೆ ಸೀಲಿಂಗ್ ಹಾಕುವುದಕ್ಕೆ ಅವಕಾಶವಿರುವ ಏರ್ಪಾಡು ಮಾಡಬಹುದು. ಅಂದರೆ ರೈತ ಬದುಕಿಕೊಳ್ಳುತ್ತಾನೆ. ನಮ್ಮ ದೇಶದ ದುರಾದೃಷ್ಟದಿಂದ ದೇಶದಲ್ಲಿ ಜನಸಂಖ್ಯೆ ವಿಪರೀತ ಏರಿ ಹೋಗಿದೆ.

ಜನರಿಗೆ ಹೀಗೆಲ್ಲಾ ತೃಪ್ತಿಪಡಿಸುತ್ತೇವೆ ಎಂಬುದಾಗಿ ಜಮೀನಿನ ಕಡೆಗೆ ಸುಮ್ಮನೆ ತೋರಿಸಬೇಡಿ. ಇನ್ನೂ ಹೀಗೆ ಮಾಡುವುದರ ಬದಲು ಅವರಿಗೆ ದೇಶದಲ್ಲಿ ನಾನಾ ಕೈಗಾರಿಕೆಗಳನ್ನು ಪ್ರಾರಂಭಮಾಡಿ ಆ ಮೂಲಕ ಜನರಿಗೆ ಉದ್ಯೋಗಗಳನ್ನೊದಗಿಸಿ. ಈ ದಿವಸ ಆ ಜಪಾನ್ ದೇಶದಲ್ಲಿ ಮಾಡಿರುವಂತೆ ಮನೆಗಳಲ್ಲೇ ಯಾವುದಾದರೊಂದು ಕೈಗಾರಿಕೆಯನ್ನು ಬೆಳೆಸುವುದಕ್ಕೆ ಉತ್ತೇಜನ ಕೊಡಿ. ಈ ದಿವಸ ಆ ಜಪಾನ್ ದೇಶದಲ್ಲಿ ಅವರು ಮನೆಗಳಲ್ಲೇ ತಯಾರಿಸಿದಂಥ ವಸ್ತುಗಳನ್ನು ಪ್ರಪಂಚದ ನಾನಾ ಭಾಗಗಳಿಗೆ ಕಳುಹಿಸಿ ಜೀವನ ಮಾಡುತ್ತಿದ್ದಾರೆ. ಹಾಗೇ ಇಲ್ಲಿಯೂ ತಾವು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅದನ್ನು ಬಿಟ್ಟು ಹೀಗೆ ಜನರಿಗೆ ಸುಮ್ಮನೆ ಒಂದು ಕಣ್ಣು ಒರೆಸುವುದನ್ನು ಮಾತ್ರ ಮಾಡಬೇಡಿ ಎಂದು ಹೇಳುತ್ತೇನೆ. ಹೀಗೆ ಮಾಡುವುದು ನ್ಯಾಯವೂ ಅಲ್ಲ. ನಾನು ಈ ಮಾತುಗಳನ್ನಾಡುತ್ತಿರುವುದರಿಂದ ನನಗೆ ಆ ರೈತರ ವಿಚಾರದಲ್ಲಿ ದಯೆ ಇಲ್ಲ ಎಂದು ತಿಳಿಯಬಾರದು. ಅವರ ಬಗ್ಗೆ ನನಗೆ ನಿಮಗಿಂತ 100 ಪಾಲು ಕನಿಕರವಿದೆ. ಆದರೆ ನಾನು ತಮಗೆ ಹೇಳುತ್ತಿರುವುದು ಅವರನ್ನು ಹೀಗೊಂದು ಅಡ್ಡದಾರಿಗೆ ಎಳೆಯಬೇಡಿ ಎಂದು ಮಾತ್ರ ಹೇಳುತ್ತಿದ್ದೇನೆ. ಇದನ್ನು ನಾನು ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ.

ಇನ್ನು ನಮ್ಮ ಹಳೇ ಮೈಸೂರಿನಲ್ಲಿ ಈ ಸೀಲಿಂಗ್ ಲಿಮಿಟ್‌ನಲ್ಲಿ ಬರತಕ್ಕ ಜನ ಒಂದೆರಡು ಪರ್ಸೆಂಟಿದ್ದರೆ ಹೆಚ್ಚಾಯಿತು. ಆದರೆ ಇಲ್ಲಿ ಅಮೆಂಡಿಂಗ್ ಬಿಲ್ಲಿನಲ್ಲಿ ಅಡಕೆ ಮತ್ತು ತೆಂಗಿನ ತೋಟಗಳಿಗೂ ಸೀಲಿಂಗನ್ನು ತರಬೇಕೆಂದು ಹೇಳಿದ್ದಾರೆ. ಆದರೆ ಆ ತೋಟವನ್ನು ಬೆಳೆಸತಕ್ಕ ಕಷ್ಟ ಕಾರುಗಳಲ್ಲಿ ಓಡಾಡತಕ್ಕ ಮಂತ್ರಿಗಳಿಗೇನು ಗೊತ್ತಾಗುತ್ತದೆ ? ಶ್ರೀ ಪುಟ್ಟಸ್ವಾಮಿಯವರು ರೈತನ ಮಗನಾಗಿದ್ದರೂ ಅವರೂ ಸಹಾ ಕಾರಿನಲ್ಲಿ ಓಡಾಡುವುದಕ್ಕೆ ಪ್ರಾರಂಭಿಸಿದ ನಂತರ ಅವರು ಅದೆಲ್ಲವನ್ನೂ ಮರೆತಿದ್ದಾರೆ. ಅಡಕೆ ಮತ್ತು ತೆಂಗಿನ ತೋಟಗಳನ್ನು ಬೆಳೆಸಬೇಕಾದರೆ ಬಹಳ ಕಷ್ಟವಿದೆ. ಆದರೆ ಕಾಫೀ ತೋಟಕ್ಕೆ ವಿನಾಯಿತಿ ಇರಬೇಕು ಇವುಗಳಿಗೆ ಬೇಡ ಎನ್ನುವುದು ಸರಿಯಾದ್ದಲ್ಲ.

ನಾನು ತಮಗೆ ಈ ವಿಚಾರದಲ್ಲಿ ಇಷ್ಟನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ : ಕಾಫಿ ತೋಟಗಳಿಗೆ ಹೇಗೆ ಸೀಲಿಂಗ್ ವಿನಾಯಿತಿಯನ್ನು ತೋರಿಸಲಾಗಿದೆಯೋ ಹಾಗೇ ಈ ಅಡಕೆ ಮತ್ತು ತೆಂಗಿನ ತೋಟಗಳಿಗೂ ವಿನಾಯಿತಿ ತೋರಿಸಬೇಕೆಂದು ಹೇಳುತ್ತೇನೆ. ಗಾರ್ಡನ್ ಲ್ಯಾಂಡುಗಳಿಗೆ ಈ ಸೀಲಿಂಗ್ ಹಾಕುವುದು ಬೇಡ ಎಂದು ಹೇಳುತ್ತೇನೆ.

ಈಗ ನಮ್ಮಲ್ಲೇ ಅನೇಕರಿದ್ದಾರೆ ; ಹೇಳಿಕೊಳ್ಳುವುದಕ್ಕೆ ಬರುವುದಿಲ್ಲ, ನಾವು ಈ ರಾಜಕೀಯಕ್ಕಿಳಿದ ಮೇಲೆ ನಮಗೆಲ್ಲಾ ಜಮೀನು ವಗೈರೆ ಮಾಡುವುದು ಸ್ವಲ್ಪ ಕಷ್ಟಕ್ಕೇ ಬಂದಿದೆ. ದಿನಬೆಳಗಾದರೆ ನಾವು ಒಂದಲ್ಲಾ ಒಂದರಲ್ಲಿ ತೊಡಗಿಕೊಂಡಿರುತ್ತೇವೆ. ನಮ್ಮಲ್ಲಿ ಕೆಲವರಿಗೆ ಈ ಸ್ಟಾಂಡರ್ಡ್ ಎಕರೆಗಳಿಗಿಂತ ಕಡಿಮೆಯಾಗಿದ್ದರೂ ನಮಗೆ ಅದನ್ನು ಮಾಡುವುದಕ್ಕೆ ವಿರಾಮವಿರುವುದಿಲ್ಲ. ಆದ್ದರಿಂದ ಆ ಜಮೀನನ್ನು ಗುತ್ತಿಗೇ ಕೊಡಬೇಕಾಗುವುದು. ಇನ್ನು ನಮ್ಮ ಹಾಗೇ ನೌಕರಿಯಲ್ಲಿರತಕ್ಕ ಜನರು ಗುಮಾಸ್ತರಿಂದ ಹಿಡಿದು ಸೆಕ್ರೆಟರಿಗಳ ಲೆವೆಲ್‌ವರೆಗೂ ಇರತಕ್ಕ ಜನರೆಲ್ಲರೂ 30 ವರ್ಷ ಕಾಲ ಕೆಲಸ ಮಾಡಿದನಂತರ ಅವರು ತಮ್ಮ ಮನೆಗಳಿಗೆ ವಾಪಸ್ಸು ಹೋಗಬೇಕು. ಅಂಥವರ ಜಮೀನನ್ನು ಕಿತ್ತುಕೊಳ್ಳುವುದು ಬೇಡ ಎಂದು ಹೇಳುತ್ತೇನೆ. ಏಕೆಂದರೆ, ಜಮೀನನ್ನು ಸುಧಾರಣೆ ಮಾಡುವುದು ಬಹಳ ಕಷ್ಟ. ಅದಕ್ಕೆ ಖರ್ಚು ವಿಪರೀತ ಇರುತ್ತೆ. ನಮ್ಮಲ್ಲಂತೂ ಬರೀ ಸಣ್ಣ ಹಿಡುವಳೀದಾರರೇ ಜಾಸ್ತಿ. ಬೊಂಬಾಯಿ ಕರ್ನಾಟಕದಲ್ಲೇನೋ ದೊಡ್ಡ ದೊಡ್ಡ ಜಮೀನ್ದಾರರಿದ್ದಾರೆಂದು ಕೇಳುತ್ತೇನೆ, ಇರಲಿ ಬಹಳ ಸಂತೋಷ. ಈ ದಿವಸ ಒಬ್ಬ ರೈತನಾದವನು ಒಂದು ಜೊತೆ ಎತ್ತು ಒಂದು ಗಾಡಿಯನ್ನು ಕೊಳ್ಳಬೇಕಾದರೆ 1,500 ರೂಪಾಯಿ ಮೇಲೆ ಕೊಡಬೇಕು. ಇಂಥ ಕಾಲದಲ್ಲಿ ಊರಿಗೆಲ್ಲಾ ಜಮೀನು ಕೊಟ್ಟು ಜನರನ್ನು ಬಡತನದಿಂದ ಪಾರುಮಾಡುತ್ತೇವೆಂದರೆ ಅದು ಸಾಧ್ಯವಿಲ್ಲದ ಮಾತು. ಬಡತನದಲ್ಲಿರತಕ್ಕ ಜನರನ್ನು ಜಮೀನು ಕೊಟ್ಟು ಅವರನ್ನು ತೃಪ್ತಿಪಡಿಸುತ್ತೇ

(ಶ್ರೀ ಟಿ. ಎನ್. ಮಾದಪ್ಪಗೌಡ)

ವೆಂದರೆ ಅದು ಸಾಧ್ಯವಿಲ್ಲದ ಮಾತು. ಆದುದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ : ಜಪಾನ್ ದೇಶದಲ್ಲಿ ಬೇರೆ ಬೇರೆ ವಿಧವಾದ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ಜೀವನಕ್ಕೊಂದು ದಾರಿ ಮಾಡಿರುವಂತೆ ಇಲ್ಲಿಯೂ ಕೂಡ ದೇಶಾದ್ಯಂತವೂ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ಜೀವನಕ್ಕೆ ದಾರಿಕಲ್ಪಿಸುವುದು ಸೂಕ್ತವಾದ ಮಾರ್ಗವೇ ವಿನಾ ಅದನ್ನು ಬಿಟ್ಟು ನ್ಯಾಯ ಮತ್ತು ಧರ್ಮಕ್ಕೆ ವಿರುದ್ಧವಾದ ಕಾನೂನನ್ನು ದೇಶದಲ್ಲಿ ಖಂಡಿತ ಜಾರಿಗೆ ತರಬಾರದೆಂದು ಅತಿ ವಿನಯದಿಂದ ಪ್ರಾರ್ಥಿಸಿಕೊಂಡು ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri R. S. HEGDE (Honnavar).—Mr. Speaker, Sir, I congratulate the Hon'ble Minister for Revenue for bringing this amendment which will enable him to enforce the old Act which was passed in 1962 Sir, the delay on the part of the Government can be easily understood. This delay was due to constitutional amendment, Amendment No. 17.

[MR. DEPUTY SPEAKER in the Chair]

While welcoming the amendment Bill, Sir, I want to make certain suggestions as far as certain sections of the Amending Bill is concerned. At page 3 of the Amending Bill, I suggest that Section (34) (ii) should be deleted. We have got the original definition of the word 'tenant' in section 2(34). Section 2(34) says that a tenant means an agriculturist who holds land on lease from a landlord and includes a person who is deemed to be a tenant under Section 4 and a person who is a permanent tenant or a protected tenant. Now while retaining the original definition a new clause has been added in the amending Bill ;

"Tenant" means an agriculturist who holds land on lease from a landlord and includes,—

(i) a person who is deemed to be a tenant under section 4 ;

(ii) a person who was protected from eviction from any land by the Mysore Tenants (Temporary Protection from Eviction) Act, 1961."

I suggest that this clause should be deleted on many grounds. Ground No. 1 is that it may be appreciated by the House that many landlords and tenants took action under the original Bombay Act which came into force on 1st August 1956. Now after the new Bombay Act came into force on 1st August 1956 and after the reorganisation of the States, some sections were suspended by an Act of this Legislature, that is, in 1961. Now, those cases are suspended on account of the protection given by the temporary Eviction Act. Now, if the temporary Eviction Act is to enable those litigants to claim the right under it my, submission is, it will create greatest hardships on the landlords. Sir, I want to make it very clear that I am neither a landlord nor a tenant and I can speak with an unbiassed mind. This additional clause for protected tenants under the Temporary Protection Act is bound to land many agriculturists in trouble because thousands of suits in Bombay Karnatak are kept suspended. So, if this temporary protection from Eviction

Act gives certain statutory right even to a trespasser who is declared to be a trespasser by a civil court, then my sub-mission is it will create a great hardship on the landlords who have already secured a decree for possession on the ground that the particular person is a trespasser. Therefore, I again request the Government to re-examine this definition as far as inclusion of sub-clause 34 (ii) is concerned. If this is not deleted or if it is not considered in its proper perspective, I am quite sure that many litigants who have been litigating for the last 11 years, he may be a tenant or he may be a landlord—will have to again begin proceedings for the resumption of land under the new Act which may take further 10 to 11 years to get possession of the land even under the admissible limit. And therefore this requires a thorough reconsideration, a re-examination in the light of the fact that thousands of suits are pending which have been stayed under this Act.

Secondly, Sir, this clause (34) sub-clause (2) must be deleted because temporary protection Act gives a statutory right to become a tenant under any particular landlord without any contract and who is dubbed as a trespasser, it gives him a statutory protection despite any decree of the court—he becomes a tenant. Therefore, this will be mischievous clause which will create a lot of trouble both to the tenant and the landlord. Many landlords will be frustrated because they have been litigating right from 1956 to get possession of land and after litigating for 10—11 years, if this amending Act is to give them some right, then my submission is that many of the landlords will be frustrated and they will develop a sort of nausea to the development of agriculture as such.

Thirdly, Sir, I submit that section 8—amending clause 16 should be deleted—10A, 10B 10C. My submission is if section 10A is to nullify a particular transaction which was perfectly legal under a particular Act, it will amount to a certain discrimination. Expert opinion has been given that it amounts to permissible discrimination. But I would like to invite the attention of the House that discrimination under section 10A has to be viewed from a particular angle in so far as Government issued an ordinance or notification by which certain provisions of the Bombay Tenancy and Agricultural Lands Act were suspended, *i.e.*, section 31. The Government issued immediately after the Re-organisation, a notification suspending, by virtue of an Act of Legislature that section 31 of the Bombay Tenancy and Agricultural Lands Act, 1938 as it was amended which came into force in Bombay on 1st August 1956 should be suspended. Section 8 which deals with resumption. But Government did not suspend other sections of the Bombay Tenancy Act. Under any other provision of the Bombay Tenancy Act for a transaction which was perfectly legal and for which he was perfectly competent, I do not think the landlord or the tenants should be penalised, by inserting section 10A. If the Government wanted to suspend all the sections of that law and allow the matter to be dealt with under the Transfer of Property Act or any of the provisions of any other Act, one could really

(SRI R. S. HEGDE)

understand. The Government gave scope to certain thinking as far as agriculturists are concerned that they suspend only one section—section 31, which deals with resumption of land by the landlords for personal cultivation. The Government did not suspend the other provisions of the Bombay Act.

Mr. DEPUTY SPEAKER.—Did the Government act on its own or with the sanction of the Legislature ?

Sri R. S. HEGDE.—Government acted on the strength of approval of the Legislature. They acted under Act 31 of 1957. Under that piece of legislation, by a notification, they suspended certain provisions of the Bombay Tenancy Act. If after suspending a particular section of the Bombay Act, the agriculturists were led to believe or Government acted in such a way so as to give an impression to the agriculturists that the other provisions of the Bombay Act are not suspended, and therefore they could act under the other provisions of the Act, When the Government gave a *bona fide* impression to the agriculturists that the other provisions of the Tenancy Act are not suspended—after having given that impression, will it now be in the interest of justice, will it now be in the interest of natural justice, to insert now section 10A that if after 1961 we have entered into a particular transaction, this transaction will be taken into consideration for fixing the resumable limit

> "10A If any person has after the 18th November 1961 and before the appointed day transferred any land, then in calculating the extent of land owned by such person for purposes of the preceding clauses, the area so transferred shall be taken into consideration, and land exceeding the resumable area so calculated shall be deemed to be non-resumable land, and such person shall not be entitled to resume such non-resumable land."

So Sir, whatever action a particular agriculturist has taken under the Bombay Act which was perfectly valid, which was perfectly legal, and for which sufficient competency was there between the parties, now that action is sought to be penalised under the provisions of this Act; and therefore my submission is that section 10A is to be entirely deleted because if it is not deleted, it will create, it will only result in punishing the particular person who entered into transaction in a period when that particular enactment was in force.

Sri H. R. KESHAVA MURTHY.—If it goes to High Court, will it stand ?

Sri R. S. HEGDE.—Personally, I have my own apprehensions, but the expert opinion is given that it is a permissible discrimination-a discrimination which is allowed under the provisions of the Constitution—of India. But I go a step further in appreciating the discrimination the action of the Government has to be taken into consideration. The

Government acted in such a way in suspending only one section of the Act. If the Government had suspended all the provisions, no question would have arisen. In suspending one provision of the Act, Government gave a *bona fide* impression .....

Sri SANJEEVANATH AIKALA (Surathkal).—On a point of order, Sir. When the Hon'ble Member is addressing the House, can the Hon'ble Minister be engaged in looking into files and in talking to the other members and can the other Members draw attention of the Hon'ble Minister ?

Sri M. V. KRISHNAPPA (Minister for Revenue).—This is a file concerned with the Land Reforms Act that is being discussed now.

Sri SANJEEVANATH AIKALA.—Not only that, two other Members are disturbing his attention including one Deputy Minister.

Sri M. V. KRISHNAPPA.—They are discussing with me some of the amendments to the Land Reforms Act.

Sri SANJEEVANATH AIKALA.—Then how the Minister can listen to the arguments advanced by the Hon'ble Member who is addressing the House ?

Sri M. V. KRISHNAPPA.—I can do both.

Mr. DEPUTY SPEAKER.—The House will now rise and meet after half an hour.

The House adjourned at Three of the Clock and re-assembled at Thirty Minutes past Three of the Clock.

[Mr. Speaker in the Chair.]

Sri R. S. HEGDE.—Mr Speaker, Sir, I was stating that section 10A offends the principle of natural justice in the peculiar circumstances in the passing of a legislation suspending certain provisions of the Bombay Act. Even if the Government wanted that other provisions of the Bombay Tenency Act should not become operative, then such a directive would have been there and because the directive was not there, my submission is, the Section offends the legitimate actions, legal actions, perfectly competent actions entered by agriculturists as far as alienation is concerned. Sri M. R. Patil has very forceable argued regarding the traceability of the records. Even if the records are traced, then we are to be guided by the Bombay Act which stands repealed under the present Act. So, a land-lord who goes to a court of law for resumption has not to prove that his case falls under the four corners or of the logal frame-work of the Mysore Land Reforms Act but he has to prove the principles in the Bombay Act which stands repealed. This anamolous position must be removed from the provisions of this Act.

(SRI R. S. HEGDE)

Incidentally, I will take section 32 (2) (*a*) regarding king of ceiling. My submision is, when the land lord or the tenant has legitimately acted under the provisions of a particular piece of legislation then in existance, then to penalise him for entering into such transactions will offend the provisions of the constitution and the natural justice. In this connection my submission is that it is not the fault of the agriculturist that a particular piece of legislation which was to come into force in 1962 is proposed to be given effect to in the year 1965. The reasons may be many. But, if the Government wanted they could have got an enactment passed suspending the other provisions of the Bombay Tenancy Act. Even if the section is deleted or even if the transaction entered into by agriculturists or tenants are to be ignored, my submission is, it will not affect the land policy of Government, it will not affect the ceiling. If I have got 500 acres, I will retain only the ceiling area and sell the rest of it. If I sell to others, whatever property I sell to others will be available for calculating the ceiling as far as the transferee is concerned. So, section 30 (2) (*a*) will not come in the way of land ceiling. Even if Government were to take the surplus land, it will have to distribute it to others. Therefore, private persons, keeping the ceiling limit, have themselves distributed to others taking proper saleprice.

Then, Sir, the word archard is defined in section 63 (5). There was a decision of Madras High Court in 1937 and decision of the Supreme Court in 1962 where it is stated that betel-nut and coconut come within the meaning of fruits. The same definition should be retained in respect of coconut and betel-nut and I visualise a great future for coconut which is going to be a multi-purpose industry in this State. Now, Sir, Kerala is the largest coconut growing area in our country. Then, comes Mysore and third is Madras. Madras Government has given exemption ; Kerala and West Bengal have also given exemption as far as coconut is concerned. Therefore, I would request the Government to re-examine the inclusion of coconut and betel-nut for the purpose of ceiling. Sir, recently I had an occasion to go to Ceylon. There, I found coconut has become a multi-purpose industry. Oil is used for manufacture of soap ; coconut shell is sent to foreign countries for the purpose of manufacturing bacholite and for the purpose of making carbo-hydrates. Dry husk is used for manufacturing bristle and mattress fibre. All these could be done in Mysore also and from that point of view, if a ceiling is placed, it will affect the industry which is a foreign exchange earning industry. To rear a coconut garden one has to wait for 15 years and after having invested lot of funds, if this land is to be taken away from the agriculturists and distributed, it clearly visualises a situation where production in the entire agricultural sphere will vanish. Even if one person wants to invest money to grow more coconuts, the Act will come in the way. Therefore, Government should re-examine the whole position in the light of developing an important industry in the State.

Thank you, Sir.

†ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಇರತಕ್ಕ ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸಿ ಒಂದೆರಡು ಬದಲಾವಣೆಗಳನ್ನು ಸೂಚಿಸಲು ಇಷ್ಟಪಡುತ್ತೇನೆ.

ಕಳೆದ ನಾಲ್ಕು ವರ್ಷಗಳಿಂದಲೂ ಜಮೀನ್ದಾರರಾದವರು ಭೂಸುಧಾರಣೆ ಜಾರಿಗೆ ಬರುವುದಾದರೆ ನಾವು ಭೂಮಿಯನ್ನು ಅಭಿವೃದ್ಧಿಪಡಿಸಿದರೆ ನಮಗೆ ಬರತಕ್ಕ ಸೀಲಿಂಗ್ ಬಹಳ ಕಡಮೆ ಇರುತ್ತದೆ ಎಂದು ಬೇಜಾರು ಪಟ್ಟುಕೊಂಡು ಭೂಮಿಯನ್ನು ಅಭಿವೃದ್ಧಿಪಡಿಸದೆ ಹಾಗೆಯೇ ಬಿಟ್ಟರು. ಇನ್ನೊಂದು ಕಡೆ ಹಿಡುವಳಿದಾರರು ನಾವು ಎಷ್ಟು ಮಾಡಿದರೂ ಅದರಿಂದ ಪೂರ್ತಿ ಲಾಭ ನಮಗೆ ದೊರೆಯುವುದಿಲ್ಲ. ಭೂಮಿಯನ್ನು ಅಭಿವೃದ್ಧಿ ಪಡಿಸಿದರೆ ಅಥವಾ ಚೆನ್ನಾಗಿ ಬೇಸಾಯ ಮಾಡಿದರೆ ನಮಗೆ ಬರತಕ್ಕ ಲಾಭವೇನು ಎಂದು ಬೇಜಾರು ಪಟ್ಟುಕೊಂಡು ಹೆಚ್ಚು ಪ್ರತಿಫಲವನ್ನು ಭೂಮಿಯಿಂದ ಪಡೆಯಲು ಪ್ರಯತ್ನ ಮಾಡಲಿಲ್ಲ. ಈ ಎರಡು ರೀತಿಯಿಂದ ದೇಶದಲ್ಲಿ ಆಹಾರದ ಉತ್ಪತ್ತಿ ಸರಿಯಾಗಿ ಆಗದೆ ತೊಂದರೆಯಾಗಿದೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ತಂದಿರತಕ್ಕ ಎಷ್ಟೋ ಸುಧಾರಣೆಗಳಂತೆಯೇ ಈ ಸುಧಾರಣೆಯೂ ವಿಫಲವಾಗಿದೆ ಎಂದರೆ ತಪ್ಪಾಗಲಾರದು. ಈ ಸುಧಾರಣೆಯನ್ನು ತರಬೇಕು ಎಂದು ಇಷ್ಟಪಟ್ಟಿದ್ದು ಒಂದು ಅದೃಷ್ಟ ಎಂದು ಕಾಣುತ್ತದೆ. ಆದರೆ ಈಗಲೂ ನಮಗೆ ಒಂದು ಸಂಶಯವಿದೆ; ಇದು ಬರುತ್ತದೆಯೋ ಇಲ್ಲವೋ ಎನ್ನುವ ಸಂಶಯವಿದೆ. ಎಷ್ಟೋ ಜನ ಕಾಫಿ ಪ್ಲಾಂಟರುಗಳು ಸರ್ಕಾರವನ್ನು ಹಿಂಬಾಲಿಸಿದ್ದಾರೆ, ಎಷ್ಟೋ ಜನ ತೆಂಗಿನ ತೋಟ ಮತ್ತು ಅಡಕೆ ತೋಟದ ಮಾಲೀಕರು ಸರ್ಕಾರವನ್ನು ಹಿಂಬಾಲಿಸುತ್ತಿದ್ದಾರೆ. ಇದರಿಂದ ಈ ಕಾನೂನು ಜಾರಿಗೆ ಬರುತ್ತದೆಯೋ ಇಲ್ಲವೋ ಎನ್ನುವ ಸಂಶಯ ಈಗಲೂ ಇದೆ. ಆದುದರಿಂದ ಇದನ್ನು ಕಾರ್ಯರೂಪಕ್ಕೆ ತಂದರೆ ಏನೊಂದು ಆಸೆ ಸಾಮಾನ್ಯ ಜನರಿಗೆ ಇದೆಯೋ ಅದು ನೆರವೇರಿ ಅವರಿಗೆ ಸಂತೋಷವುಂಟಾಗಿ ದೇಶದಲ್ಲಿ ಆಹಾರೋತ್ಪನ್ನ ಹೆಚ್ಚಾಗುತ್ತದೆ ಎನ್ನುವ ನಂಬಿಕೆ ನನಗಿದೆ.

ಜಮೀನುಗಳಲ್ಲಿ ಬಹಳಮಟ್ಟಿಗೆ ಅಭಿವೃದ್ಧಿಯಾಗತಕ್ಕ ಜಮೀನುಗಳಿವೆ. ಆದರೆ ನಾವು ಅದನ್ನು ನಿರ್ಧರ ಮಾಡುವಾಗ ಮಳೆ ನೀರಿನ ಮೇಲೆ ಅವಲಂಬಿಸಿ ನೀರಾವರಿಯಿಂದ ಅಭಿವೃದ್ಧಿ ಪಡಿಸಿರತಕ್ಕ, ಬಾವಿ ಮುಂತಾದ ಇತರ ನೀರಿನ ಸೌಕರ್ಯಗಳ ಮೇಲೆ ಅವಲಂಬಿಸಿ ಅಭಿವೃದ್ಧಿ ಪಡಿಸಿರತಕ್ಕ, ಭೂಮಿಗಳನ್ನು ತೀರ್ಮಾನ ಮಾಡತಕ್ಕದ್ದು ಬಹಳ ಕಷ್ಟತರವಾದದ್ದು. ಮುಂದೆ ಈ ಸೀಲಿಂಗನ್ನು ಗೊತ್ತು ಮಾಡುವಾಗ ನಮ್ಮ ರೈತರು ಎಷ್ಟೋ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಜಮೀನಿನ ಆಬಾದಿನ ಮೇಲೆ ವಿಂಗಡಣೆ ಮಾಡಿದರೆ ಎಷ್ಟೋ ಅನುಕೂಲವಾದೀತು.

ಜಮೀನ್ದಾರರಿಗೆ ಪರಿಹಾರ ಧನವನ್ನು ಕೊಡುವಾಗ ಹತ್ತು ಸಾವಿರ ರೂಪಾಯಿವರೆಗೂ ನಗದಾಗಿ ಕೊಡಬೇಕು ಎಂದು ಇದ್ದುದನ್ನು ಇದರಲ್ಲಿ ಎರಡು ಸಾವಿರಕ್ಕೆ ಇಳಿಸಿದ್ದಾರೆ. ಇದು ಬಹಳ ಅನ್ಯಾಯ. ನೂರಾರು ವರ್ಷಗಳಿಂದ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬಂದ ಜಮೀನಿನಿಂದ ಬೇರೆಯಾಗುವುದಲ್ಲದೆ ನಗದುರೂಪದಲ್ಲಿ ಕೊಡತಕ್ಕ ಪರಿಹಾರ ಧನವನ್ನು 10 ಸಾವಿರದಿಂದ 2 ಸಾವಿರಕ್ಕೆ ಇಳಿಸಿರುವುದು ಬಹಳ ವಿಷಾದಕರವಾದ ವಿಚಾರ. ಆತನಿಗೆ ಏನು ಕೊಡಬೇಕೋ ಅದನ್ನು ಕೊಟ್ಟು ಆತನಿಗೆ ಸಮಾಧಾನ ಮಾಡತಕ್ಕದ್ದು ದೊಡ್ಡ ವಿಚಾರ. ಇದು ನಮ್ಮ ಸರ್ಕಾರದಲ್ಲಿ ದೊಡ್ಡ ನೀತಿಯಾಗಬೇಕೆಂದು ನನ್ನ ಅಭಿಪ್ರಾಯ. ಇದು ಜಮೀನು ಕಳೆದುಕೊಳ್ಳುವವರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟು ಮಾಡುವುದರಿಂದ ಮೂಲ ಕಾನೂನಿನಲ್ಲಿರುವಂತೆ 10 ಸಾವಿರ ರೂಪಾಯಿಗಳನ್ನು ನಗದಾಗಿ ಕೊಡುವಂತೆ ಉಳಿಸಿಕೊಂಡು ಮಿಕ್ಕದ್ದನ್ನು ಬಾಂಡುಗಳ ರೂಪದಲ್ಲಾಗಲೀ ಅಥವಾ ಬೇರೆ ರೂಪದಲ್ಲಾಗಲೀ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಎರಡು ಸಾವಿರರೂಪಾಯಿಗಳ ಪ್ರಕಾರಕೊಡುವುದಕ್ಕೂ ಹಣ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳಲು ಬಹಳ ಕಷ್ಟವಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರು ನಮ್ಮಲ್ಲಿ ಎಷ್ಟು ಭೂಮಿ ಉಳಿಯುತ್ತದೆ, ಅದನ್ನು ಎಷ್ಟು ಜನಗಳಿಗೆ ಕೊಡಬಹುದು, ಅದರ ಬೆಲೆ ಏನಾಗುತ್ತದೆ, ಎಷ್ಟು ಕೋಟಿ ರೂಪಾಯಿ ನಮ್ಮಲ್ಲಿದೆ ಎಂದು ಕೇಳಿದರು. ಆ ವಿವರಗಳನ್ನೆಲ್ಲ ನಮಗೆ ಒದಗಿಸಿದ್ದರೆ ಹತ್ತು ಸಾವಿರದಿಂದ ಎರಡು ಸಾವಿರರೂಪಾಯಿಗೆ ಇಳಿಸಿದ್ದು ಸರಿಯೇ, ಯಾವ ಆಧಾರದ ಮೇಲೆ ಹೀಗೆ ಮಾಡಲಾಗಿದೆ ಎಂದು ನಮಗೆ ತಿಳಿಯುತ್ತಿತ್ತು. ಇದಲ್ಲದೆ ಜಮೀನ್ದಾರರಿಗೆ ಕೊಡಬೇಕಾಗುವ ಹಣವನ್ನು ಎಷ್ಟು ವರ್ಷಗಳಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಎನ್ನುವುದನ್ನು ಇದರಲ್ಲಿ ಹೇಳಿಲ್ಲ. ರೈತನಿಂದ 20 ವರ್ಷಗಳ ಕಾಲದಲ್ಲಿ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಜಮೀನ್ದಾರನ ವಿಷಯದಲ್ಲಿ ಯಾವುದನ್ನೂ ಹೇಳಿಲ್ಲ. ಯಾವ ವಿಷಯದಲ್ಲಾಗಲೀ ಒಂದು ಗೊತ್ತಾದ ನೀತಿಯನ್ನಿಟ್ಟುಕೊಂಡು ತೀರ್ಮಾನಕ್ಕೆ ಬರಬೇಕು. 10 ಸಾವಿರ ರೂಪಾಯಿಗಳು ಎಂದು ಮೂಲ ಕಾನೂನಿನಲ್ಲಿ ಇರುವುದನ್ನು 2 ಸಾವಿರ ರೂಪಾಯಿಗಳಿಗೆ ತಗ್ಗಿಸದೆ ಮೊದಲು ಇದ್ದ ಹಾಗೆಯೇ ಉಳಿಸಿಕೊಂಡರೆ ಒಳ್ಳೆಯದು ಎಂದು ನಾನು ಅಭಿಪ್ರಾಯಪಡುತ್ತೇನೆ.

(ಶ್ರೀ ಜಿ. ರಾಮೇಗೌಡ)

ಈಗ ತಂದಿರುವ ಕೆಲವು ತಿದ್ದುಪಡಿಗಳಲ್ಲಿ ತೆಂಗಿನ ತೋಟ ಮತ್ತು ಅಡಕೆ ತೋಟಗಳಿಗೆ ಒಂದು ಮಿತಿಯನ್ನು ಹಾಕುವುದನ್ನು ಸೂಚಿಸಿದ್ದಾರೆ. ಮೂಲ ಕಾನೂನು ಈ ಸಭೆಯಲ್ಲಿ ಅಂಗೀಕಾರವಾಗಿ ನಾಲ್ಕು ವರ್ಷವಾಯಿತು. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮೊದಲೇ ಸರ್ಕಾರದ ಮನಸ್ಸು ಪರಿವರ್ತನೆಯಾಗಿ ಅವಕ್ಕೆ ಸೀಲಿಂಗ್ ತಂದಿಟ್ಟಿದ್ದಾರೆ. ಹೀಗಿರುವಾಗ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆಯೇ ಇನ್ನೂ ಏನೇನು ಬದಲಾವಣೆಗಳನ್ನು ತರಬೇಕಾಗುತ್ತದೆಯೊ ಎನ್ನುವ ಅನುಮಾನ ಎಲ್ಲರಲ್ಲಿಯೂ ಇದೆ. ಆದುದರಿಂದ ಈ ತೋಟಗಳಿಗೆ ಸೀಲಿಂಗ್ ಇಲ್ಲದಂತೆ ಮಾಡಬೇಕು ಇದು ಒಳ್ಳೆಯ ಕೈಗಾರಿಕೆ ಮತ್ತು ರೈತರಿಗೆ ಲಾಭ ತರತಕ್ಕ ಅಥವಾ ಡಾಲರ್ ಸಂಪಾದನೆ ಮಾಡತಕ್ಕ ಉದ್ಯಮವಾದುದರಿಂದ ಇವೆರಡಕ್ಕೂ ಮಿತಿಯನ್ನು ಇಡುವುದು ಸರಿಯಲ್ಲ ಎಂದು ನಾನು ಸಲಹೆ ಮಾಡುತ್ತೇನೆ.

ಒಂದು ತಿದ್ದುಪಡಿಯಲ್ಲಿ 1961ನೆ ಇಸವಿಯಿಂದೀಚೆಗೆ ಏನು ಬದಲಾವಣೆಯನ್ನು ಮಾಡಿದ್ದರೂ ಅದು ಬದಲಾವಣೆಯಾಗಿಲ್ಲ ಎಂದು ಭಾವಿಸಿ ಸೀಲಿಂಗ್ ಗೊತ್ತು ಮಾಡುವಾಗ ಪರಿಗಣಣೆಗಾಗುತ್ತದೆ ಎಂದು ಹೇಳಿದ್ದಾರೆ. ಇದು ಖಂಡಿತ ಸರಿಯಲ್ಲ. ನಾವು ಏನು ನುಡಿದಿದ್ದೇವೆ ಅದರಂತೆ ನಡೆದು ಕೊಳ್ಳಬೇಕು. ಯಾರಾದರೂ ಬರೀ ದುರುದ್ದೇಶದಿಂದ ಸ್ವಂತ ಆಸ್ತಿಯನ್ನು ಭೂಸುಧಾರಣೆ ಜಾರಿಗೆ ಬಂದರೆ ರೈತನಿಗೆ, ಬಡವನಿಗೆ ಕೊಡಬೇಕಾಗುತ್ತದೆ ಎಂದು ಮಾರಿದ್ದರೆ ಅಂಥದ್ದಕ್ಕೆ, ಈ ಕಾನೂನು ಅನ್ವಯಿಸುತ್ತದೆ. ಆದರೆ ತಾವು ಸಂಪಾದಿಸಿರುವ ಆಸ್ತಿಯನ್ನು ತಮ್ಮ ಕಷ್ಟವನ್ನು ನೀಗಿಸಿಕೊಳ್ಳಲು ಬದಲಾವಣೆ ಮಾಡಿಕೊಳ್ಳುವ ರೀತಿಯಲ್ಲಿ ಈ ಕಾನೂನು ಅನ್ವಯವಾಗಬಾರದು. ಇದಕ್ಕೆ ಸೂಕ್ತವಾದ ಬದಲಾವಣೆಯನ್ನು ಸರ್ಕಾರ ಸೂಚಿಸಿ, ಲಾ ಇಲಾಖೆಯೊಂದಿಗೆ ಆಲೋಚನೆ ಮಾಡಿ ಇದನ್ನು ಸರಿಪಡಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಈಗ ಪ್ಲಾಂಟೇಷನ್‌ಗಳಲ್ಲಿ ಬೆಳೆಯುವವರ ಕಷ್ಟಗಳನ್ನು ತಿಳಿದುಕೊಳ್ಳಬೇಕು. ಕಾಫಿ ಪ್ಲಾಂಟೇಷನ್ನುಗಳಲ್ಲಿ ಮಧ್ಯೆ 200-300-400 ಎಕರೆಗಳಷ್ಟು ಭೂಮಿಯಲ್ಲಿ ಬತ್ತ ಬೆಳೆದರೂ ಅಲ್ಲಿ ಒಂದು ಮಿತಿಯನ್ನು ನಿಗದಿ ಮಾಡಿಲ್ಲ. ಆದರೆ, ಅವಿಭಕ್ತ ಕುಟುಂಬದಲ್ಲಿ ಭ್ರಾತೃಪ್ರೇಮದಿಂದ ಹಗಲಿರುಳೂ ದುಡಿಯುವ ಜನರು ಒಂದು ಸಹಕಾರ ತತ್ವದ ಮೇಲೆ ಸುಮಾರು 100 ವರ್ಷಗಳ ಹಿಂದಿನಿಂದಲೂ ಒಗ್ಗಟ್ಟಿನಿಂದ ಬಾಳಿ ದೇಶಕ್ಕಾಗಿ ಚೆನ್ನಾಗಿ ದುಡಿದು ಇರುವಂತಹ ಸಂಸಾರಗಳಿಗೆ ಸರಿಯಾದ ಹೆಚ್ಚಿನ ಮಿತಿಯನ್ನು ನಿಗದಿಮಾಡುವ ಆಲೋಚನೆಯನ್ನು ಸರ್ಕಾರ ಮಾಡಲಿಲ್ಲ. 5 ಜನರಿದ್ದರೆ ಒಂದು ಸೀಲಿಂಗ್, 10 ಜನರಿದ್ದರೆ 2 ರಷ್ಟು ಸೀಲಿಂಗ್, ಇನ್ನು 20 ರಷ್ಟು ಅಥವಾ 30ರಷ್ಟು ಜನರಿದ್ದರೆ 2 ರಷ್ಟು ಸೀಲಿಂಗ್ ಎಂಬುದಾಗಿ ಹೇಳುವುದು ಬಹಳ ಅನ್ಯಾಯ. ಅಂತಹ ದೊಡ್ಡ ಸಂಸಾರಗಳು ನಮ್ಮ ದೇಶದಲ್ಲಿ ಎಷ್ಟೋ ಇವೆ. ಇದರಿಂದಾಗಿ ಭ್ರಾತೃಪ್ರೇಮಕ್ಕೆ ಧಕ್ಕೆ ಬರುತ್ತದೆ. ಸಹಕಾರ ತತ್ವದ ಮೇಲೆ ವ್ಯವಸಾಯ ಮಾಡತಕ್ಕ ವ್ಯವಸಾಯಗಾರರಿಗೆ ತುಂಬಾ ಅನ್ಯಾಯ ಮಾಡಿದಂತಾಗುತ್ತದೆ. ಹೆಚ್ಚು ಆಹಾರ ಬೆಳೆಯತಕ್ಕ ಒಂದು ಸಂಸಾರವನ್ನು ನಾವಾಗಿಯೇ ವಿಚ್ಛೇದನ ಮಾಡಿ ಅನ್ಯಾಯಮಾಡಿದಂತಾಗುತ್ತದೆ. ದುರುದ್ದೇಶವಿಲ್ಲದೆ ಒಗ್ಗಟ್ಟಿನಿಂದ ಜೀವನಮಾಡಿ ಸಂಸಾರವನ್ನು ಬೆಳೆಸಿ ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡುವಂತಹವರಿಗೆ ಹೆಚ್ಚು ಮಿತಿಯನ್ನು ಗೊತ್ತುಮಾಡುವುದು ಅಗತ್ಯ. ಸ್ವಂತವಾಗಿ ವ್ಯವಸಾಯ ಮಾಡುವವರಿಗೆ ಈಗಿನ ಎರಡರಷ್ಟು ಕೊಡಬೇಕೆಂದು ಹೇಳುವುದು ಸೂಕ್ತವೇ ? ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕೆಂದು ನನ್ನ ಪ್ರಾರ್ಥನೆ.

ಇನ್ನು ಸೆಕ್ಷನ್ 125 ರಲ್ಲಿ ಅಫೆನ್ಸಸ್ ಮತ್ತು ಪೆನಲ್ಟೀಸ್ ವಿಷಯವಾಗಿ ಹೇಳಿದ್ದಾರೆ. 250 ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೆ ಜುಲ್ಮಾನೆ ವಿಧಿಸುವುದು ಖಂಡಿತವಾಗಿ ಬಹಳ ಕಠಿಣವಾದುದಾಗಿದೆ. ಈ ರೀತಿಯಾಗಿ ಫೈನ್ ಹಾಕತಕ್ಕದ್ದು ಸರಿಯಲ್ಲ. ಕಾನೂನಿಗೆ ವಿರೋಧವಾಗಿದ್ದರೆ, ಅಂತಹವರಿಂದ ಜಮೀನನ್ನು ಕಡ್ಡಾಯವಾಗಿ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಿ. ಆದರೆ ಕನ್ವಿಕ್ಷನ್ ಮತ್ತು ಜುಲ್ಮಾನೆ ಹಾಕುವ ಏರ್ಪಾಡು ಸರಿಯಾಗಿಲ್ಲ. ಸಮಾಜದಲ್ಲಿ ಜನಸೇವೆ ಮಾಡುವಂತಹ ಜನಗಳಿಗೆ ಕೊಡುವ ಶಿಕ್ಷೆ ಇದರಲ್ಲಿ ಬಹಳ ಅಧಿಕವಾಗಿದೆ. ಅದನ್ನು ಸಡಿಲಗೊಳಿಸಬೇಕು.

ಇನ್ನು ಸೆಕ್ಷನ್ 136 ರಲ್ಲಿ ಸರ್ಕಾರಕ್ಕೆ ಒಳ್ಳೆಯ ಅವಕಾಶವಿದೆ. ರೂಲ್ಸು ಮಾಡುವಾಗ ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಎಂಬುದಾಗಿ ರೂಲ್ಸ್ ಮಾಡುವ ಪದ್ಧತಿಯನ್ನು ಸರ್ಕಾರ ಬಿಡಬೇಕು. ಯಾರೋ ಒಬ್ಬರ ಅನುಭವದ ಮೇಲೆ ಇನ್ನೊಬ್ಬರಿಗೆ ಅನ್ಯಾಯ ಮಾಡುವುದು ಹೇಗೆ ? ಇಂಥಾದ್ದನ್ನೆಲ್ಲಾ ಮುಂದೆ ಜಾರಿಯಲ್ಲಿ ತರಬೇಕೇ ವಿನಾ ಹಿಂದಿನಿಂದ ಶಿಕ್ಷೆ ಅನುಭವಿಸಬೇಕು ಎಂಬುದಾಗಿ ಹೇಳುವುದು ಬಹಳ ತಪ್ಪು. ಇದಕ್ಕೆ ಮದ್ರಾಸ್ ರಾಜ್ಯದಲ್ಲಿ ಇತರ ರಾಜ್ಯಗಳಲ್ಲಿ ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ. ಆದರೆ ನಮ್ಮ ಸರ್ಕಾರದವರು ಇನ್ನು ಹಾಗೆಯೇ ಮುಂದು

ವರಿಸುತ್ತಿದ್ದಾರೆ. ಸರ್ಕಾರೀ ಅಧಿಕಾರಿಗಳು ಈ ರೂಲ್ಸ್ ಮಾಡುತ್ತಿದ್ದಾರೆ. ಇವನ್ನು ಪ್ರಜಾ ಪ್ರತಿನಿಧಿಗಳಾದ ಲೆಜಿಸ್ಲೇಟರ್ಸ್ ಮಾಡಿಲ್ಲ. ಅವರಿಗೆ ಬರೀ ನೋಟಿಫಿಕೇಷನ್ಸ್ ಪ್ರತಿಗಳನ್ನು ಕಳುಹಿಸುತ್ತಾರೆ. ಆ ರೂಲ್ಸ್‌ಗಳನ್ನು ಫ್ರೇಂ ಮಾಡುವ ಅವಕಾಶ ನಮ್ಮ ಲೆಜಿಸ್ಲೇಟರುಗಳಿಗಿಲ್ಲ. ರೂಲ್ಸ್ ಮಾಡತಕ್ಕ ಸರ್ವಾಧಿಕಾರ ಸರ್ಕಾರೀ ಅಧಿಕಾರಿಗಳಿಗೆ ಇದೆ. ಅಂತಹ ಅಧಿಕಾರವನ್ನು ಅವರಿಗೆ ಕೊಟ್ಟು ಈಗ ಅದನ್ನು ನಾವು ಖಂಡಿಸಬೇಕಾಗುತ್ತದೆ, ವಿರೋಧಿಸಬೇಕಾಗುತ್ತದೆ. ಈ ಆಕ್ಟ್‌ನಲ್ಲಿ ಯಾವುದು ಒಂದು ಸದುದ್ದೇಶವಾಗಿರುತ್ತದೋ ಆ ಉದ್ದೇಶವೇನಾದರೂ ಕಾರ್ಯ ರೂಪಕ್ಕೆ ಬರಬೇಕಾಗಿದ್ದರೆ ಅದು ರೂಲ್ಸ್‌ನಲ್ಲಿರಬೇಕು ಎಂಬುದಾಗಿ ಹೇಳುತ್ತಾರೆ. ಆದರೆ ಈ ಆಕ್ಟಿಗೆ ಸಂಬಂಧಪಟ್ಟುದು ಇದ್ದರೆ ಅದಕ್ಕೆ ತಿದ್ದುಪಡಿಯಾಗಿ ಈ ಮಾನ್ಯ ಸಭೆಯ ಒಪ್ಪಿಗೆಪಡೆದು ಮಾಡಬೇಕು. ರೂಲ್ಸ್‌ನಲ್ಲಿ ಫೈನ್ ಹಾಕುತ್ತೇವೆ, ಕನ್‌ವಿಕ್ಷನ್ ಮಾಡುತ್ತೇವೆ ಎಂದು ಮಾಡಕೂಡದು. ರೂಲ್ಸ್ ಮೇಕಿಂಗಿನಲ್ಲಿ ಅಧಿಕಾರ ಶಿಕ್ಷೆ ಮಾಡುವುದು ಧರ್ಮವಲ್ಲ, ಶ್ರೇಷ್ಠವಾದುದಲ್ಲ. ಏನಾದರೂ ನಿಯಮ, ರೀತಿ ಅಲ್ಲಿ ಹೇಳಬೇಕೇ ಹೊರತು ಇಷ್ಟೇ ಶಿಕ್ಷೆ ವಿಧಿಸಬೇಕು ಎಂದು ಕಡ್ಡಾಯವಾಗಿ ರೂಲ್ಸ್‌ನಲ್ಲಿ ಹೇಳುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ನಾನು ಬಹಳವಾಗಿ ವಿರೋಧಿಸುತ್ತೇನೆ. ರೂಲ್ಸ್‌ನಲ್ಲಿ ಈ ಅವಕಾಶವನ್ನು ತಪ್ಪಿಸುವುದು ಸೂಕ್ತ. ಈಗ ಭೂಸುಧಾರಣೆಯನ್ನು ನಾನು ಬಹಳವಾಗಿ ಸ್ವಾಗತಿಸುತ್ತೇನೆ. ಆ ರೀತಿ ಸ್ವಾಗತಿಸುವಾಗ ರೈತರಿಗೆ ಇರತಕ್ಕ ಕಷ್ಟ ನಿಷ್ಠೂರಗಳನ್ನು ಬಗೆಹರಿಸಬೇಕು. ಈ ಭೂಸುಧಾರಣೆಯಾದನಂತರ ದೇಶದಲ್ಲಿ ಹೆಚ್ಚಿಗೆ ಆಹಾರೋತ್ಪನ್ನವಾಗುತ್ತದೆಂದು ಹೇಳುವುದನ್ನು ನಾನು ಖಂಡಿತವಾಗಿ ಒಪ್ಪಿಕೊಳ್ಳುವುದಿಲ್ಲ. ಇದರಲ್ಲಿ ಅವರಿಗೆ ಏನೇನು ಅನುಕೂಲತೆಗಳು ಬೇಕೋ ಅವನ್ನು ಕಲ್ಪಿಸಿಕೊಡಬೇಕು. ಭೂಮಿ ಸಾಕಷ್ಟು ಇಲ್ಲದೇ ಇರುವವರು ಹೆಚ್ಚಿಗೆ ಬೆಳೆಯಲಿಲ್ಲವೆಂದು ಹೇಳುವುದು ಅನ್ಯಾಯ. ಇದು ಅರಿವಿಲ್ಲದ ಮಾತು. ಅಲ್ಲದೇ ಭೂಮಿ ಒಂದೇ ಇದ್ದರೆ ಸಾಲದು. ಪ್ರಕೃತಿ ಸಂಪತ್ತು, ಪ್ರಗತಿ ಸಾಧಿಸುವ ಬಗ್ಗೆ ಹಣಕಾಸಿನ ವ್ಯವಸ್ಥೆ, ಮಳೆ ಸಕಾಲಕ್ಕೆ ಸರಿಯಾಗಿ ಬರುವುದು ಮುಖ್ಯ. ಹಣ ಒದಗಿಸುವ ವ್ಯವಸ್ಥೆ ಇದರಲ್ಲಿಲ್ಲ. ಆದ್ದರಿಂದ ಅತಿ ಜಾಗ್ರತೆಯಾಗಿ ಈ ಭೂಸುಧಾರಣೆಯನ್ನು ನಮಗೆ ಒದಗಿಸಿ. ಆದರೆ ನಂಬಿದ ಕೋಣ ಕರು ಹಾಕಿದರೆ ಎಷ್ಟು ಫಲವಿದೆಯೋ ಹಾಗೆ ಇದರಲ್ಲಿ ಏನೂ ಫಲವಿಲ್ಲವೆಂಬುದು ಸರ್ಕಾರದವರಿಗೇ ಅರ್ಥವಾಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಬಂದಂದಿನಿಂದ ಈ ಭೂಸುಧಾರಣೆ ಸಂಬಂಧ ಜರುಗಿದ ಘಟನೆಗಳನ್ನು ಅವಲೋಕಿಸಿದರೆ, ಜನಸಾಮಾನ್ಯರ ಹಿತದೃಷ್ಟಿಯಿಂದ ಕಾನೂನು ಮಾಡುವುದು ಕಷ್ಟ. ಮತ್ತು ಅವುಗಳನ್ನು ಜಾರಿಗೆ ಕೊಡುವುದೂ ಸಹ ಬಹಳ ಕಷ್ಟವೆಂಬುದು ನಮಗೆ ಮನವರಿಕೆಯಾಗಿದೆ. ಮೈಸೂರು ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಿಂದ ಭೂಸುಧಾರಣೆಯ ವಿಷಯದಲ್ಲಿ ಅನಾವಶ್ಯಕವಾದ ಗುಲ್ಲು, ಅನಾವಶ್ಯಕವಾದ ಗಡಿಬಿಡಿ; ಅನಾವಶ್ಯಕವಾದ ಕೆಲವು ಘರ್ಷಣೆಗಳು ನಡೆದಿವೆ. ಇದರ ಪರಿಣಾಮವೇನಾಗಿದೆಯೆಂಬುದನ್ನು ನಾವು ಈಗ ಯೋಚನೆಮಾಡಬೇಕಾಗಿದೆ. ಈಗ ನಮ್ಮ ಮುಂದಿರತಕ್ಕ ವಿಧೇಯಕ ಕಾನೂನಾಗಿ ಭೂಸುಧಾರಣೆ ಕಾನೂನು ಜಾರಿಗೆ ಬಂದನಂತರ ಭೂಮಿ ಇದ್ದವರಿಗೆ ಹೆಚ್ಚಿಗೆ ತೊಂದರೆಯಾಗುವುದಿಲ್ಲ. ಭೂಮಿ ಇಲ್ಲದ ಗೇಣಿದಾರರಿಗೆ, ಕೂಲಿಗಾರರಿಗೆ ಪ್ರಯೋಜನವಾಗುವುದೂ ಅಷ್ಟೆ. ವಿಷಯಗಳನ್ನು ವಿಮರ್ಶೆಮಾಡದೆ, ತಿಳಿಯಬೇಕಾದ ವಿಷಯಗಳನ್ನು ಚೆನ್ನಾಗಿ ತಿಳಿದುಕೊಳ್ಳದೆಯೇ ಅನೇಕ ವಾದ ವಿವಾದಗಳು ನಡೆದಿವೆ. ನನ್ನ ಮೇಲೆ ಕೆಲವು ಭೂಮಾಲೀಕರು ಬಹಳ ಸಿಟ್ಟಾಗಿ ನನ್ನನ್ನು ಶಪಿಸಿದ್ದಾರೆ. ಹಿಂದೆ ಈ ಭೂಸುಧಾರಣೆಗೆ ಸಂಬಂಧಪಟ್ಟ ವಿಧೇಯಕವನ್ನು ನಾನೇ ಈ ಶಾಸನ ಸಭೆಯ ಮುಂದೆ ಮಂಡಿಸಿದವನು. ಈ ವಿಧೇಯಕ ಕಾಂಗ್ರೆಸ್ ಪಕ್ಷದ ಆದೇಶದಂತೆ, ಪ್ಲಾನಿಂಗ್ ಕಮಿಷನ್ನಿನವರ ಸಲಹೆಯಂತೆ ಮತ್ತು ಜತ್ತಿ ಸಮಿತಿಯವರ ವರದಿಗನುಗುಣವಾಗಿ ರಚಿಸಲ್ಪಟ್ಟು ಅನಂತರ 46 ಸದಸ್ಯರನ್ನೊಳಗೊಂಡ ಚುನಾಯಿತ ಸಂಯುಕ್ತ ಸಮಿತಿ ಮುಂದೆ ದೀರ್ಘವಾಗಿ ಪರಿಶೀಲನೆಯಾಗಿ ಅನಂತರ ಆ ಸಮಿತಿ ವರದಿ ಕೂಡ ಈ ಸಭೆಯಲ್ಲಿ ಚರ್ವಿತ ಚರ್ವಣವಾಗಿ ಚರ್ಚೆಯಾಗಿ ಪರಿಶೀಲನೆಯಾಗಿ ಒಂದು ಕಾನೂನು ಆಯಿತು. ಇದನ್ನು ಮರೆತು ವೈಯಕ್ತಿಕವಾಗಿ ಕೆಲವು ಭೂಮಾಲೀಕರು ಮತ್ತು ರಾಜಕಾರಣಿಗಳು ನನ್ನನ್ನು ಆಕ್ಷೇಪಿಸುತ್ತಾರೆ. ಬಹುಶಃ ಅವರು ನನ್ನನ್ನೇ ಸರ್ವಾಧಿಕಾರಿಯೆಂದು ತಿಳಿದಿರಬೇಕೆಂದು ತೋರುತ್ತದೆ.

Sri C. J. MUCKANNAPPA.—Is it to satisfy the Congress Party only that you are doing this ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಈ ವಿಧೇಯಕ ಜಾರಿಗೆ ಬಂದರೆ ಏನಾಗುತ್ತದೆಂಬುದನ್ನು ಸ್ವಲ್ಪಮಟ್ಟಿಗೆ ವಿಚಾರ ಮಾಡೋಣ. ಕಾಫಿ, ಟೀ, ರಬ್ಬರ್ ಏಲಕ್ಕಿ, ತೋಟದ ಮಾಲೀಕರಿಗೆ ಈ ವಿಧೇಯಕದಿಂದ ಎಳ್ಳಷ್ಟೂ ಬಾಧಕವಾಗುವುದಿಲ್ಲ.

(ಶ್ರೀ ಕಡಿದಾಳ್ ಮಂಜಪ್ಪ)

4-00 P.M.

ಸ್ವಂತ ಸಾಗುವಳಿ ಮಾಡತಕ್ಕ ಭೂಮಾಲೀಕರಿಗೆ ಇದರಿಂದ ತೊಂದರೆಯಾಗುವುದಿಲ್ಲ. ಸ್ಪೆಷಲೈಜ್ಡ್ ಫಾರಮ್ಸ್ ಇಟ್ಟುಕೊಂಡಿರತಕ್ಕವರಿಗೆ, ಸಕ್ಕರೆ ಕಾರ್ಖಾನೆಯನ್ನು ಇಟ್ಟುಕೊಂಡಿರತಕ್ಕವರಿಗೆ ಆರ್ಚರ್ಡ್ಸ್ ಮತ್ತು ಕಾಂಪ್ಯಾಕ್ಟ್ ಏರಿಯಾ ಇವುಗಳನ್ನು ಇಟ್ಟುಕೊಂಡಿರತಕ್ಕ ಭೂಮಾಲೀಕರಿಗೆ ಇದರಿಂದ ತೊಂದರೆಯಾಗುವುದಿಲ್ಲ. ಅವಿವಾಹಿತ ಮಹಿಳೆಯರು, ವಿಧವೆಯರು, ಅಪ್ರಾಪ್ತ ವಯಸ್ಕರು, ದೈಹಿಕ ಮತ್ತು ಮಾನಸಿಕ ರೋಗಿಗಳು ಇತ್ಯಾದಿ ಸಾಗುವಳಿ ಮಾಡಲು ಆಗದೇ ಇರುವವರು ಭೂಮಿಯನ್ನು ಗೇಣಿಗೆ ಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ. ಇದರಿಂದ ಪ್ರಯೋಜನ ಏನಾಗಿದೆ ಎಂದರೆ ಎಲ್ಲೋ ಅಲ್ಲಿ ಇಲ್ಲಿ ಕೆಲವು ರೈತರಿಗೆ ಗೇಣಿದಾರರಿಗೆ ಅಲ್ಪಸ್ವಲ್ಪ ರಕ್ಷಣೆ ದೊರೆತಿದೆ. ಈಗ ಕೆಲವರು ಮಾಡುವಂತಹ ವಾದವನ್ನು ನೋಡಿದರೆ ಅದೂಬೇಡ ಎಂದು ವಾದ ಮಾಡುವಂತೆ ತೋರುತ್ತದೆ. ಇವೊತ್ತು ನಮ್ಮ ಮುಂದಿರತಕ್ಕ ವಿಧೇಯಕದಲ್ಲಿ ಸರ್ಕಾರದವರು ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಅದರಲ್ಲಿ ಒಂದೆರಡು ವಿನಾ ಉಳಿದವುಗಳೆಲ್ಲವೂ ಸಾಧು ವಾದುವುಗಳು. ಅವುಗಳು ರೈತನ ಹಿತದೃಷ್ಟಿಯಿಂದ ತಂದಂತಹ ತಿದ್ದುಪಡಿಗಳಾಗಿವೆ. ಈ ಸಂದರ್ಭದಲ್ಲಿ ಒಂದಂಶವನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದು ಕ್ಲಾಜ್ 35ಕ್ಕೆ ಸಂಬಂಧಪಟ್ಟ ವಿಚಾರ. ಕ್ಲಾಜ್ 35ರಲ್ಲಿ ಸರ್ಕಾರದ ಅಳ್ವಿಕೆಗೆ ಒಳಗಾಗಿರತಕ್ಕ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಭೂಮಿಗಳಿಗೆ ವಿನಾಯಿತಿಯನ್ನು ಕೊಡಬೇಕೆಂದು ಸರ್ಕಾರದವರು ಸೂಚನೆ ಮಾಡಿದ್ದಾರೆ. ಈ ಕಾನೂನನ್ನು ಮಾಡುವುದು ಭೂಸುಧಾರಣಾ ಕಾನೂನನ್ನು ಜಾರಿಗೆ ತರತಕ್ಕದ್ದು ಧಾರ್ಮಿಕ ಸಂಸ್ಥೆಗಳ ಸುಧಾರಣೆಗೆ ಅಲ್ಲ. ರೈತನ ಸುಧಾರಣೆಗೋಸ್ಕರವಾಗಿ. ಆದ್ದರಿಂದ ರೈತನ ಹಿತದೃಷ್ಟಿಯನ್ನು ಗಮನಿಸುವುದಾದರೆ ಧಾರ್ಮಿಕ ಸಂಸ್ಥೆಗಳಿಗಾಗಲೀ ಬೇರೆ ಯಾವ ಸಂಸ್ಥೆಗಾಗಲೀ ಅಥವಾ ಯಾರಿಗೇ ಆಗಲೀ ವಿನಾಯಿತಿಯನ್ನು ಕೊಡತಕ್ಕದ್ದು ಅನಾವಶ್ಯಕ ಎಂದು ನನ್ನ ಅಭಿಪ್ರಾಯ. ಮಲೆನಾಡಿನಲ್ಲಿ ಅನೇಕ ಕಡೆಗಳಲ್ಲಿ ಸಾವಿರಾರು ಜನ ರೈತರು ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಭೂಮಿಯನ್ನು ಅನೇಕ ವರ್ಷಗಳಿಂದ ಸಾಗು ಮಾಡಿಕೊಂಡು ಬಂದಿದ್ದಾರೆ. ಮತ್ತು ಕೆಲವು ಸಂದರ್ಭಗಳಲ್ಲಿ ಪಾಳು ಬಿದ್ದಿದು ಜಮೀನು ಬಹಳ ಹಿಂದಿನಿಂದ ಸಾಗು ಮಾಡಿಕೊಂಡು ಬಂದು ಆ ಜಮೀನುಗಳನ್ನು ಬಹಳ ಉತ್ತಮ ಸ್ಥಿತಿಗೆತಂದಿದ್ದಾರೆ. ಕೆಲವು ಮೂಲ ಗೇಣಿದಾರರು ಆ ಭೂಮಿಯನ್ನು ನೂರಾರು ವರ್ಷಗಳಿಂದ ಒಂದೇ ಮನೆತನದವರು ಸಾಗು ಮಾಡುತ್ತಿದ್ದಾರೆ. ಆದ್ದರಿಂದ ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪಿಕೊಳ್ಳುವು ದಾದರೆ ಧಾರ್ಮಿಕ ಸಂಸ್ಥೆಗಳ, ಹಾಗೂ ದೇವಾಲಯಗಳ ಜಮೀನುಗಳನ್ನು ಅವಲಂಭಿಸಿ ಕೊಂಡಿರತಕ್ಕ ಸಾವಿರಾರು ಜನ ರೈತರು ಮಲೆನಾಡಿನಲ್ಲಿ ಬೀದಿಯ ಭಿಕಾರಿಗಳಾಗುತ್ತಾರೆ. ಅವರಿಗೆ ಯಾರಿಗೂ ಗೇಣಿದಾರನಿಗೆ ದೊರಕತಕ್ಕ ರಕ್ಷಣೆ ದೊರಕುವುದಿಲ್ಲ. ಆದ್ದರಿಂದ ಸರ್ಕಾರದವರು ಈ ವಿಚಾರವನ್ನು ಪುನರ್ ವಿಮರ್ಶೆ ಮಾಡಬೇಕೆಂದು ಹೇಳಿ ನಾನು ಅತ್ಯಂತ ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಒಬ್ಬರು ದಘೂತಿ ಕುಳಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾನೂನನ್ನು ಮಾಡುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಕೆಲವು ದಘೂತಿ ಜನರು ದೇವಾಲಯಗಳಿಗೆ ಸೇರಿದ ಜಮೀನುಗಳನ್ನು ಹರಾಜಿನಲ್ಲಿ ಅಲ್ಪಗೇಣಿಗೆ ವಹಿಸಿಕೊಂಡು ಅವರು ಬೇರೆ ಯವರಿಗೆ ಗೇಣಿಗೆ ಕೊಟ್ಟಿದ್ದಾರೆ. ಅದಕ್ಕೋಸ್ಕರವಾಗಿ ನಾವು ಮೂಲ ವಿಧೇಯಕದಲ್ಲಿ ಏನು ಮಾಡಿದ್ದೆವು ಎಂದರೆ ಯಾರು ವಾಸ್ತವಿಕವಾಗಿ ಸಾಗ ಮಾಡುತ್ತಾನೆಯೋ ಅವನಿಗೇ ಭೂಮಿ ದೊರೆಯುವಂತೆ ಮಾಡಬೇಕು ಎಂದು ಹೇಳಿ ನಿಭಂದನೆಗಳನ್ನು ರಚಿಸಿದ್ದೆವು.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭಧ್ರಾವತಿ).—ಕೆಲವು ಧಾರ್ಮಿಕ ಸಂಸ್ಥೆಗಳು ಮಿಡಲ್ ಸ್ಕೂಲುಗಳು, ಹೈಸ್ಕೂಲುಗಳು ಮತ್ತು ಕಾಲೇಜುಗಳನ್ನು ನಡೆಸುತ್ತಿವೆ. ಈ ರೀತಿಯಾಗಿ ವಿದ್ಯಾಸಂಸ್ಥೆಗಳನ್ನು ನಡೆಸತಕ್ಕ ಧಾರ್ಮಿಕ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಇವೆ. ಅಂಥವುಗಳ ಬಗ್ಗೆ ತಾವು ತಮ್ಮ ಅಭಿಪ್ರಾಯವನ್ನು ಸೂಚಿಸಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಸ್ಪಷ್ಟವಾದ ಅಭಿಪ್ರಾಯ ರೈತನ ಹಿತದೃಷ್ಟಿಯಿಂದ ಈ ಕಾನೂನನ್ನು ಮಾಡತಕ್ಕದ್ದು. ಯಾವ ಸಂಸ್ಥೆಗೂ ವಿದಾಯಿತಿಯನ್ನು ಕೊಡಬಾರದು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ ಇದೆ. ಧಾರ್ಮಿಕ ಸಂಸ್ಥೆಗಳಿಗೆ ವಿನಾಯಿತಿಯನ್ನು ಕೊಟ್ಟಾಕ್ಷಣಕ್ಕೆ ಭಗವಂತನಿಗೆ ತೃಪ್ತಿಯಾಗುವುದಿಲ್ಲ. ಭಗವಂತನು ಮೆಚ್ಚುವ ಹಾಗೆ ನಡೆದುಕೊಳ್ಳಬೇಕು. ಸರ್ವವ್ಯಾಪಿಯಾದಭಗವಂತನು ರೈತನ ಹೃದಯದಲ್ಲೂ ಇದ್ದಾನೆ; ಗೇಣಿ ದಾರನ ಹೃದಯದಲ್ಲೂ ಇದ್ದಾನೆ. ಆದ್ದರಿಂದ ರೈತನ ಹೃದಯದಲ್ಲಿರುವ ಭಗವಂತನನ್ನು ತೃಪ್ತಿ ಮಾಡುವುದಕ್ಕಾಗಿ ಆ ಭೂಮಿಯನು

ರೈತನಿಗೇ ಕೊಟ್ಟು ಭಗವಂತನನ್ನು ತೃಪ್ತನಾಗುವಂತೆ ಮಾಡತಕ್ಕದ್ದು ಸರ್ಕಾರದವರ ಕರ್ತವ್ಯ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸೆಕ್ಷನ್ 106ರ ಪ್ರಕಾರ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನುಗಳನ್ನು ಸರ್ಕಾರ ದವರು ವಶಪಡಿಸಿಕೊಂಡಾಗ ಅದಕ್ಕೆ ಯಾವರೀತಿಯ ಪರಿಹಾರವನ್ನು ಕೊಡಬೇಕೆಂಬುದನ್ನು ನಾವು ಮೂಲ ವಿಧೇಯಕದಲ್ಲಿ ಅಡಕ ಮಾಡಿದ್ದೆವು. ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನುಗಳು ಗೇಣಿದಾರರಿಗೆ ಹೋದಾಗ ಧಾರ್ಮಿಕ ಸಂಸ್ಥೆಗಳಗೆ ಹೆಚ್ಚು ನಷ್ಟವಾಗುವುದಿಲ್ಲ. ಧಾರ್ಮಿಕ ಸಂಸ್ಥೆಗಳಿಗೆ ಕಾನೂನು ಪ್ರಕಾರ ಎಷ್ಟು ಗೇಣಿ ಬರಬೇಕಾಗಿತ್ತೋ ಆ ಗೇಣಿಯ ಕಿಮ್ಮತ್ತನ್ನು ಧಾರ್ಮಿಕ ಸಂಸ್ಥೆಗಳಿಗೆ ಪ್ರತಿ ವರ್ಷವೂ ಕೊಡತಕ್ಕದ್ದು ಎಂದು ವಿಧೇಯಕದಲ್ಲಿ ನಮೂದು ಆಗಿದೆ. ಆದ್ದರಿಂದ ಧಾರ್ಮಿಕ ಸಂಸ್ಥೆಗಳಿಗೆ ಅಥವ ದೇವಸ್ಥಾನಗಳಿಗೆ ಯಾವ ತೊಂದರೆಯೂ ಆಗುವುದಿಲ್ಲ. ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ವೇಳೆ ದೇವಸ್ಥಾನದ ಜಮೀನುಗಳನ್ನು ತೆಗೆದುಕೊಂಡು ಅದನ್ನು ಸರ್ಕಾರದವರು ಹರಾಜು ಹಾಕುವುದಾದರೂ ಕೂಡ ಅದು ದಳ್ಳಾಳಿ ಇಸ್ಮುಗಳಿಗೇ ಹೋಗುತ್ತದೆ. ಅದು ಬಡವರಿಗೆ ಸಿಕ್ಕುವುದಿಲ್ಲ. ಆದ್ದರಿಂದ ಜಮೀನನ್ನು ಹೆಚ್ಚು ಹೆಚ್ಚಾಗಿ ಶ್ರೀಮಂತರೇ ತೆಗೆದುಕೊಳ್ಳಲಿ ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೆಲವು ಮಾನ್ಯ ಸದಸ್ಯರು ಈ ವಾದವನ್ನು ಮಾಡುತ್ತಿದ್ದಾರೆಂದು ಕಾಣುತ್ತದೆ. ಆದ್ದರಿಂದ ಯಾವ ಸಂಸ್ಥೆ ಗಳಿಗೂ ಕೂಡ ವಿನಾಯ್ತಿ ಬೇಕಾಗಿಲ್ಲ ಎಂದು ನನ್ನ ಅಭಿಪ್ರಾಯ.

ಆಮೇಲೆ ಶ್ರೀಮಾನ್ ಟಿ. ಎಚ್. ಮಾದಪ್ಪಗೌಡರು ಮತ್ತು ಶ್ರೀಮಾನ್ ಆರ್. ಎಸ್. ಹೆಗ್ಗಡೆ ಯವರು ಮಾತನಾಡುವಾಗ ತೆಂಗು ಮತ್ತು ಅಡಿಕೆ ತೋಟಗಳಿಗೆ ವಿನಾಯ್ತಿಯನ್ನು ಕೊಡಬೇಕೆಂದು ಅವರು ವಾದ ಮಾಡಿದ್ದಾರೆ. ಆದರೆ ಮೂಲ ವಿಧೇಯಕದಲ್ಲಿ ಇವುಗಳನ್ನು ಪ್ಲಾಂಟೇಷನ್ ಎಂಬ ಪದದ ಅರ್ಥ ವಿವರಣೆಯಲ್ಲಿ ಸೇರಿಸಲಾಗಿತ್ತು. ತೆಂಗಿನ ತೋಟಗಳಿಗೆ ಮತ್ತು ಅಡಿಕೆಯ ತೋಟ ಗಳಿಗೆ ವಿನಾಯ್ತಿಯನ್ನು ಕೊಡಬೇಕೆಂದು 1958ನೇ ಇಸವಿಯಲ್ಲಿ ಈ ಮಾನ್ಯ ಸಭೆಯಮುಂದೆ ಮಂಡಿ ಸಿದ ವಿಧೇಯಕದಲ್ಲಿ ನಮೂದು ಆಗಿತ್ತು. ಆದರೆ ಸೆಲೆಕ್ಟ್ ಕಮಿಟಿಯವರು ಮತ್ತು ಈ ಮಾನ್ಯ ಸಭೆಯವರು ಅದನ್ನು ವಿಮರ್ಶೆ ಮಾಡಿ ಅವುಗಳಿಗೆ ವಿನಾಯ್ತಿಯನ್ನು ಕೊಡತಕ್ಕದ್ದು ಅನಾವಶ್ಯಕ ವೆಂದು ಹೇಳಿದ್ದಾರೆ. ಈಗ ಅವುಗಳಿಗೆ ಕೊಟ್ಟಿರತಕ್ಕ ಸೀಲಿಂಗ್ ಲಿಮಿಟ್ ಏನೂ ಕಡಿಮೆ ಇಲ್ಲ. ಅವುಗಳಿಗೆ ಮುಗಿಲು ಮುಟ್ಟುವಷ್ಟು ಸೀಲಿಂಗ್ ಲಿಮಿಟ್ ಕೊಟ್ಟಿದ್ದಾರೆ. ಅಡಿಕೆ ಮತ್ತು ತೆಂಗಿನ ತೋಟ ಗಳಿಗೆ ಈಗಿರುವಂತಹ ಕಾನೂನು ಪ್ರಕಾರ 54 ಎಕರೆಯಿಂದ ಹಿಡಿದು 216 ಎಕರೆಯವರೆಗೂ ಪರ ಮಾವಧಿ ಮಿತಿ ಇದೆಯೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಈ ಕಾನೂನು ಪ್ರಕಾರ ನಮ್ಮ ಕಡೆ ಮಲೆನಾಡಿನಲ್ಲಿ ಒಂದು ಕುಟುಂಬದವರು 54 ಎಕರೆಯವರೆಗೆ ಅಡಿಕೆ ತೋಟವನ್ನು ಇಟ್ಟು ಕೊಳ್ಳುವುದಕ್ಕೆ ಅವಕಾಶವಿದೆ. ನನಗೂ ಅಡಿಕೆ ತೋಟ ಕೆಲವು ಎಕರೆಗಳಿವೆ. ಶಾಶ್ವತವಾದ ನೀರಾವರಿ ಪ್ರಯೋಜನವನ್ನು ಹೊಂದಿದ ತೋಟವಾದರೆ, 27 ಎಕರೆ ಇಟ್ಟುಕೊಳ್ಳುವುದಕ್ಕೆ ಅವಕಾಶ ವಿದೆ. ಬೇರೆ ಡ್ರೈಗಾರ್ಡನ್ ಆದರೆ 108 ರಿಂದ 216 ಎಕರೆವರೆಗೆ ಇಟ್ಟುಕೊಳ್ಳುವುದಕ್ಕೆ ಅವಕಾಶ ವಿದೆ. ಕಾನೂನನ್ನು ಬೇಕಾದರೆ ಆಮೇಲೆ ಹೇಳುತ್ತೇನೆ. ಆದ್ದರಿಂದ ಈ ಪರಮಾವಧಿ ಹಿಡುವಳಿ ಬಹಳ ಕಡಿಮೆ ಇದೆಯೆಂದು ಮಾನ್ಯ ಸದಸ್ಯರು ಯಾರು ತಿಳಿದುಕೊಳ್ಳಬೇಕಾಗಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ದ್ರಾಕ್ಷಿಯಂತೆ ಇದಕ್ಕೂ ವಿನಾಯಿತಿ ಕೊಟ್ಟಿದ್ದರೆ ಏನಾಗುತ್ತಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯೆಯರು ಆಗಲೂ ಕೂಡ ಶಾಸನ ಸಭಾಸದಸ್ಯೆಯಾಗಿ ದ್ದರು. ಈ ವಿಷಯ ಕೂಲಂಕಷವಾಗಿ ಚರ್ಚೆಯಾಗಿ, ಸಭೆಯ ತೀರ್ಮಾನದಂತೆ ಸರಕಾರದವರು ನಡೆದುಕೊಂಡಿದ್ದಾರೆ. ನಾನು ಈಗ ತಾನೆ ಅರಿಕೆ ಮಾಡಿಕೊಂಡೆ : ನಾನು ಮೂಲ ವಿಧೇಯಕದಲ್ಲಿ ಈ ಬಾಬುಗಳಿಗೆ ವಿನಾಯಿತಿ ಕೊಡಬೇಕು ಎಂದು ನಮೂದು ಮಾಡಿದ್ದೆ ; ಆದರೆ ಶಾಸನ ಸಭಾ ಸದಸ್ಯರು ಒಪ್ಪಲಿಲ್ಲ ಅನ್ನುವುದನ್ನು ಮಾನ್ಯ ಸದಸ್ಯರು ನೆನಪು ಮಾಡಿಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏನೇನೊ ಅಮೆಂಡುಮೆಂಟು ತರುತ್ತೀರಿ, ಇದನ್ನು ಏಕೆ ತರಲಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸರಿ. ಆಮೇಲೆ 1961ರಿಂದ ಆಗಿರತಕ್ಕ ಪರಾಧೀನಗ ಳನ್ನು ಗೇಣೀದಾರರಿಂದ ಬಿಡಿಸಿಕೊಳ್ಳುವಾಗ ಪ್ರತ್ಯೇಕ ಹಿಡುವಳಿಯನ್ನು ನಿಗದಿಮಾಡಿ ಗಣನೆಗೆ ತೆಗೆದುಕೊಳ್ಳಬಾರದು ಅಂತ ಹೇಳಿ ತಿದ್ದುಪಡಿ ವಿಧೇಯಕದಲ್ಲಿ ನಮೂದಾಗಿದೆ. ಕ್ಲಾಸು 16ರಲ್ಲಿ ಇರತಕ್ಕ ತಿದ್ದುಪಡಿ ನ್ಯಾಯವಾದುದು. ಭೂಮಾಲಿಕನಾದವನು 1961ನೇ ಇಸವಿಯಿಂದ ಭೂಮಿ ಯನ್ನು ಪರಾಧೀನ ಮಾಡುವುದಕ್ಕೆ, ಕಾಯಿದೆ ಜಾರಿಗೆ ಬಂದನಂತರ ಗೇಣೀದಾರನಿಂದ ಪುನಃ : ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕೆ ಆಸ್ಪದವಿರಬಾರದು. ಇದು ಅವಶ್ಯಕವಾಗಿದೆ.

(ಶ್ರೀ ಕಡಿದಾಳ್ ಮಂಜಪ್ಪ)

ಇನ್ನು 30ನೇ ಕ್ಲಾಸಿನಲ್ಲಿ ಅದೇ ವಿಧವಾದ ಒಂದು ನಿಬಂಧನೆ ಇದೆ. ಕೆಲವು ಸಂದರ್ಭಗಳಲ್ಲಿ ಭೂಮಾಲೀಕರಿಂದ ಭೂಮಿಯನ್ನು ಗೇಣೀದಾರರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ. ಅಂಥ ಸಂದರ್ಭಗಳಲ್ಲಿ ಭೂಮಾಲಿಕರಿಗೆ ತೊಂದರೆ ಆಗದೆ ಇದ್ದಹಾಗೆ ಏನಾದರೂ ತಿದ್ದುಪಡಿ ಮಾಡುವುದು ಅವಶ್ಯಕವೆಂದು ನನ್ನ ಅಭಿಪ್ರಾಯ.

ಇಷ್ಟನ್ನು ಹೇಳಿ, ಈ ಮಸೂದೆಯನ್ನು ಸ್ವಾಗತಿಸುತ್ತೇನೆ ಸ್ವಾಮಿ.

Mr. SPEAKER.—Before I call upon any other Member, I have to settle the details. Now, I am suggesting and the House will kindly agree that we will sit for one hour more to-day only. As the Hon'ble Minister stands committed for some other work, we will excuse him. His reply will not be to-day, but there will be other Ministers who will attend to the work. That will give an opportunity to more Members to participate. Regarding the agreement, I do not know what to say and what not to say. Therefore, we came to some conclusion and the information was circularised. It was put in the shape of Business Advisory Committee Report. There is a change, but an uncertain change. So, I will call another Business Advisory Committee tomorrow and we will settle it. So far as this Bill is concerned, we will have the reply tomorrow and finish it before Lunch. I will also say that we meet at Twelve noon tomorrow rather than at One p.m. That will give one hour more, which means as good as sitting in the morning for two hours.

Sri M. R. PATIL (Hubli).—Tomorrow we shall meet at One.

Mr. SPEAKER.—How to find time ? I am not here to concede to the request of everyone. If the Hon'ble Member finds it inconvenient, there are others who will participate.

Sri S. S. KOLKE BAIL (Coondapoor).—We are not having good food also for the last two months.

Mr. SPEAKER.—Why do individual Members carry their opinion in their own mind and not convey it to the Whips. Then I will dissolve the Business Advisory Committee and I will put it on the Floor of the House. Do you want to make me a Dictator ?

Sri SIDDAIAH KASIMATH (Shirahatti).—The Minister has also agreed that tomorrow also we will sit up to 6 O'clock.

Mr. SPEAKER.—Then what should happen to the Amending Bill, the Resolution and the Panchayat Raj Bill ?

Sri SIDDAIAH KASIMATH.—We will finish all the work before the 22nd.

Mr. SPEAKER.—That is what is called talking with the Hat in the hand. Please analyse and tell me. I have an unprecise labelling. We have allotted two days for non-official business, 23rd and 24th, and how are we going to finish all the work ? What is all this unpractical things ? What time will the Hon'ble Minister require for his reply ?

Sri M. V. KRISHNAPPA.—About an hour, Sir.

Mr. SPEAKER.—There are twelve amendments put. Each amendment means a minimum of five minutes ; the Minister must reply and I will put it to the Vote of the House. Therefore, half-an-hour to forty minutes will be required for that stage.

Sri SIDDIAH KASIMATH.—I have also sent my amendments.

Mr. SPEAKER.—I do not know it. I have got twelve amendments. Are there any amendments from Sri V. S. Patil ? Yes, there are. Is it included in twelve ? My difficulty comes in when every Member or any Member gets up and says that this is the only thing. When I suggest that we may drop the Question Hour, Members say : 'No, No'. When I suggest that we may extend the time by sitting late, Members say : 'no'. All these things should be resolved and presented to me.

Sri SIDDIAH KASIMATH.—I have sent my amendments on Saturday only.

Mr. SPEAKER.—Are the amendments at least over ? I suppose there are no more amendments. I may say that the number of amendments has gone up to 16. Will Sri Keshava Murthy tell me how many amendments he has sent ?

Sri H. R. KESHAVA MURTHY (Gandasi).—I have sent about eight amendments, Sir.

Mr. SPEAKER.—Still we are receiving amendments. I really dissolve into your hands. We will have about 20 amendments.

Sri M. R. PATIL.—It appears that the Government have also sent some amendments.

Mr. SPEAKER.—Are there Government amendments ?

Sri M. V. KRISHNAPPA.—Yes, Sir, there are.

Sri V. M. DEO (Gubbi).—We can spend one more day for this Bill, Sir.

Mr. SPEAKER.—Suppose we spend the whole of tomorrow and one more day, how should the other business be finished ?

Sri C. J. MUCKANNAPPA.—This is a very important and complicated matter. Let us finish this by tomorrow and it will be a sort of leisure to you also.

Mr. SPEAKER.—I have got enough leisure. Do not worry about me. I have told the Hon'ble members that it will be taken up immediately and finished and nobody should ask for extension of time. We have got Panchayat Raj Bill and Resolution. We must finish all these by 24th. Nobody should ask for more time. I cannot create more than 24 hours a day. Shall we sit upto 6 p.m. to-day ? In the meanwhile let the Hon'ble members think over it. Now I call up on Sri Gopala Gowda. The Hon'ble member may take not more than 15 minutes.

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಭೂಸುಧಾರಣಾ ತಿದ್ದುಪಡಿ ಮಸೂದೆ ಸ್ವಾತಂತ್ರ್ಯಾನಂತರ ಭಾರತದಲ್ಲಿ ನಮ್ಮ ದೇಶದ ಹೊಲ, ಗದ್ದೆ ಹಾಗೂ ತೋಟಗಳಿಗೆ ಅನ್ವಯವಾಗುವುದರಲ್ಲಿ ನಡೆದಿರುವ ಒಂದು ದೊಡ್ಡ ದುರಂತ ನಾಟಕದ ಚಿತ್ರ ಇದ್ದಂತೆ ಇದೆ. 1947 ನೇ ಇಸವಿಯಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯ ಬಂತು. 17 ವರ್ಷಗಳು ಕಳೆದು ಹೋದವು. ಆದಾಗ್ಯೂ ಉಳುಮೆ ಮಾಡತಕ್ಕ ರೈತನಿಗೆ ಸ್ವಾತಂತ್ರ್ಯ ದೊರೆಯಲಿಲ್ಲ, ಅವನು ಬಂಧನದಿಂದ ಪಾರಾಗಲು ಸಾಧ್ಯವಾಗಿಲ್ಲ. ಹಾಗೂ ಹೀಗೂ ಭೂಸುಧಾರಣೆಯನ್ನು ತರುತ್ತೇವೆ,

(ಶ್ರೀ ಎಸ್. ಗೋಪಾಲಗೌಡ)

ಅಗೋ ತಂದೆವು, ಇಗೋ ತಂದೆವು ಇನ್ನೇನು ಮಸೂದೆ ಬರುವುದರಲ್ಲಿದೆ, ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೆ ಹೋಗಿ ವಾಪಸು ಬರುವುದರಲ್ಲಿದೆ, ತಿದ್ದುಪಡಿ ತರುತ್ತೇವೆ ಎನ್ನುವ ಒಂದೇ ರಾಗವನ್ನು ಹಾಡುತ್ತಾ 17 ವರ್ಷಗಳನ್ನು ಕಳೆದಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಗೂ ಗೊತ್ತಿರುವ ಹಾಗೆ ಅನೇಕ ಸಂಸಾರಗಳು ಅಥವಾ ಈ ಮಸೂದೆಯ ಸೂತ್ರವನ್ನು ಹೊತ್ತಿರುವ ನಾಟಕದ ನಾಯಕ ನಾಯಕಿಯರುಗಳು ಮಸಣದ ಹಾದಿಯಲ್ಲಿ ಹೋಗಿದ್ದಾರೆ. ರಾಷ್ಟ್ರದಲ್ಲಿ ಬೆಳೆಯನ್ನು ಮಾಡುತ್ತಿದ್ದ ಅನೇಕ ಸಂಸಾರಗಳು ಸ್ಮಶಾನಕ್ಕೆ ಹೊರಟು ಹೋಗಿದ್ದಾರೆ ಎಂದು ಹೇಳಲು ಬಹಳ ದುಃಖ ಪಡುತ್ತೇನೆ. ಆದಾಗ್ಯೂ ಇಂತಹ ಒಂದು ಸನ್ನಿವೇಶದಲ್ಲಿ ಯಾವ ರೈತರು ಹಗಲೂ ಇರುಳೂ ಹಂದಿ ಅಥವಾ ನಾಯಿ ಇಂತಹ ಪ್ರಾಣಿಗಳಿಗಿಂತ ಕೀಳಾಗಿ ತಮ್ಮ ಯೋಜನೆಗಳನ್ನು ಮಾಡುವುದರಲ್ಲಿ ದೇಶದಲ್ಲಿ ದುಡಿಯುತ್ತಿದ್ದಾರೆ, ಅವರಿಗೆ ರಕ್ಷಣೆ ಕೊಡುವುದಕ್ಕೆ ಈ ರಾಜ್ಯಕ್ಕೆ ಆಗಲಿಲ್ಲ. ಅಂತಹ ಒಂದು ಸನ್ನಿವೇಶ ಇವೊತ್ತು ಕೂಡ ಇದೆ. ಈಗಲೂ ಕಾಂಗ್ರೆಸ್ಸು ಪಕ್ಷದವರು ಉಳುಮೆ ಮಾಡತಕ್ಕ ರೈತನಿಗೆ ಅವನು ಉಳುಮೆ ಮಾಡತಕ್ಕ ಜಮೀನಿನ ಪಟ್ಟೆ ಕೊಡದಂತೆ ಮಾಡುತ್ತಿದ್ದಾರೆ. ಏನೋ ಒಂದು ದೊಡ್ಡ ಉಪಕಾರ ಮಾಡುತ್ತೇವೇನೋ ಎಂದು ಭಾವಿಸಿದ್ದಾರೆ. ಇದು ಬಹಳ ವಿಷಾದದ ಸಂಗತಿ. ಒಂದು ಕಡೆ ಆಹಾರದ ಉತ್ಪತ್ತಿಯನ್ನು ಹೆಚ್ಚು ಮಾಡಬೇಕು ಎನ್ನುವ ಕೂಗು ಎದ್ದಿದೆ. ಲಕ್ಷಗಟ್ಟಲೆ ಹಣ ಸೊಸೈಟಿಗಳಲ್ಲಿ ಕೊಟ್ಟು ಹೆಚ್ಚು ಆಹಾರ ಬೆಳೆಯಬೇಕು ಎಂದು ಹಳ್ಳಿಗಳ ಕಡೆ ಹೇಳುತ್ತಿದ್ದಾರೆ. ಇದರ ಮೇಲೆ ಉಳುವವನೇ ಹೊಲದೊಡೆಯನಾಗಬೇಕು ಎನ್ನುವ ಮಾತನ್ನು ಕಾಂಗ್ರೆಸ್ಸಿನವರು ತತ್ವಶಃ ಒಪ್ಪಿಕೊಂಡು ಅದನ್ನು ಕಾರ್ಯಗತ ಮಾಡಿಲ್ಲ. ಈ ವಿಳಂಬ ಹಾಗೂ ಅನಿಶ್ಚಿತತೆ ಕಳೆದ 17 ವರ್ಷಗಳಿಂದಲೂ ಈ ದೇಶದಲ್ಲಿ ಇದೆ. ಇದರೊಳಗೆ ದೇಶದಲ್ಲಿ ಆಹಾರದ ಉತ್ಪಾದನೆ ಹೆಚ್ಚಾಗಿಲ್ಲ. ರೈತನ ಆರ್ಥಿಕ ಸ್ಥಿತಿ ಸುಧಾರಣೆಯಾಗಲಿಲ್ಲ. ಈ ದೇಶದಲ್ಲಿ ಮೂರು ಯೋಜನೆಗಳನ್ನು ಮಾಡಿದರೂ ಕೂಡ ಇವೊತ್ತಿನ ಸ್ಥಿತಿಯಲ್ಲಿ ಇನ್ನೂ ಆಹಾರದ ಅಭಾವದ ಪರಿಸ್ಥಿತಿ ಇದೆ. ಮತ್ತು ನಮ್ಮ ರೈತನ ಆದಾಯ, ಜೀವನ ಮಟ್ಟ ಹಿಂದಕ್ಕೆ ಹೋಗಿತ್ತೋ ಈಗಲೂ ಹಾಗೇ ಇದೆ. ಇದನ್ನು ನಾವು ನೋಡುತ್ತಿದ್ದೇವೆ. ಈ ಸುಧಾರಣೆಗಳಲ್ಲಿರುವ ಕಲಮುಗಳನ್ನು ಚರ್ಚಿಸುವುದರಲ್ಲೇ ಆನಂದವಾಗುತ್ತಿದೆ.

ಸ್ವಾಮೀ, ಮಾನ್ಯ ಸದಸ್ಯರಾದ ಶ್ರೀಮಾನ್ ರಾಮೇಗೌಡರು ಹೇಳಿದ ಹಾಗೆ ನಂಬಿದ ಕೋಣ ಕರು ಹಾಕುವ ಹೊತ್ತು ಬಂದಿದೆ. 1959 ನೇ ಇಸವಿಯಲ್ಲಿ ನಡೆದಂತಹ ನಾಗಪುರದ ಅಧಿವೇಶನದಲ್ಲಿ ಆಳುವ ಪಕ್ಷವಾದ ಕಾಂಗ್ರೆಸ್ಸು ಈ ಭೂಮಿಗೆ ಸಂಬಂಧಪಟ್ಟ ಸುಧಾರಣೆಯ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿತು. ಆ ನಿರ್ಣಯದಲ್ಲಿ ಅವರು ಈ ರೀತಿ ಹೇಳಿದ್ದಾರೆ:

> "The organisation of the Village should be based on the Village Panchayats and Village Co-operatives, both of which should have adequate powers and resources to discharge the functions allotted to them."

> "The future agrarian pattern should be that of Co-operative joint farming, in which the land will be pooled for joint cultivation, the farmers continuing to retain their property rights and getting a share from the net produce in proportion to their land".

ಇದನ್ನು ಹೇಳುತ್ತಾ:

> "The ceilings should be fixed on existing and future holdings and legislation to this effect as well as for the abolition of intermediaries should be completed in all States by the end of 1959".

ಈ ಎಲ್ಲ ಕಾರ್ಯಗಳನ್ನೂ ಮಾಡುವುದರ ಸಲುವಾಗಿ ಈ ಮಸೂದೆಯನ್ನು ತರಬೇಕು, ಉಳುಮೆ ಮಾಡತಕ್ಕ ಹಾಗೂ ಒಕ್ಕಲು ಮಾಡುವವರನ್ನು ಭೂಮಿಯಿಂದ ಎಬ್ಬಿಸಿದಂತೆ ನೋಡಿಕೊಳ್ಳಬೇಕು ಇತ್ಯಾದಿ ಇತ್ಯಾದಿಗಳನ್ನು ಮಾಡಬೇಕೆಂದು ಇದರಲ್ಲಿ ಹೇಳಿದ್ದಾರೆ. ಆದರೆ 61ನೇ ಇಸವಿಯಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಕೂಡ ಇಂತಹ ಒಂದು ಮಸೂದೆಯನ್ನು

ತರುವುದಕ್ಕೆ ತಮ್ಮ ಕಾಂಗ್ರೆಸ್ಸು ಪಕ್ಷದವರುಗಳಿಂದಲೇ ಎಷ್ಟೋ ಅರೋಪಣೆಗಳನ್ನು ಕೇಳಬೇಕಾಯಿತು ಮತ್ತು ಯಾವ ಯಾವ ರೀತಿಯಲ್ಲಿ ಇದಕ್ಕೆ ಅಡಚಣೆಯಾಯಿತು ಎನ್ನುವುದನ್ನು ಹೇಳಿಕೊಂಡಿದ್ದಾರೆ. ಇಂತಹ ಒಂದು ಕಾನೂನು ಕೂಡ ಕಾರ್ಯಗತವಾಗುವುದಕ್ಕೆ ಕಾಲ ಬರಲಿಲ್ಲ. ಭೂಮಾಲೀಕರು ನಮಗೆ ಅನ್ಯಾಯವಾಯಿತು ಎಂದು ಹೇಳುತ್ತಾ ಅವರುಗಳು ಕೋರ್ಟಿಗೆ ಹೋಗಿ ಇಂಜಂಕ್ಷನ್ನು ಆರ್ಡರು ತಂದು ತಡೆ ಮಾಡಿದರು ಎಂದು ರಾಜ್ಯದ ಕಂದಾಯ ಮಂತ್ರಿಗಳು ಕೋರ್ಟಿಗೆ ಹೋಗಿರತಕ್ಕ ವಿವಾದಾಸ್ಪದವಾದ ವಿಧಿಗಳನ್ನು ಕೈಬಿಟ್ಟು ಎಲ್ಲಿ ಈ ವ್ಯವಸ್ಥೆ ಜಾರಿಯಲ್ಲಿಲ್ಲವೋ ಅಲ್ಲಿ ಕೂಡ ಇದು ಜಾರಿಗೆ ಬರುವಂತೆ ಮಾಡಲಿಲ್ಲ, ಮತ್ತು ಇನ್ನೇನೋ ಕಷ್ಟಗಳು ಬಂದವು ಎಂದು ಇದನ್ನು ಮುಂದೂಡುತ್ತಾ ಕಾಲಹರಣ ಮಾಡಿಕೊಂಡು ಬಂದರು.

[MR. DEPUTY SPEAKER in the Chair]

4-30 P.M.

ಬೊಂಬಾಯಿ ರಾಜ್ಯದಲ್ಲಿ ಇರತಕ್ಕ ರೈತರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ವಿ. ಎಸ್. ಪಾಟೀಲರವರು ಹೇಳಿದ್ದಾರೆ. 1956ನೇ ಇಸವಿಯಲ್ಲಿ ಈ ರಾಜ್ಯಕ್ಕೆ ಬೊಂಬಾಯಿ ಕರ್ಣಾಟಕ ಪ್ರದೇಶ ಬಂದ ಮೇಲೆ ಅಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಉಳಿದಿರತಕ್ಕಂಥ ಕಾನೂನು ಆಧಾರದ ಮೇಲೆ ರೈತರು ಭೂಮಾಲೀಕರು ಆದರು. ಆಗ್ಗೆ ಶ್ರೀ ಎಂ. ಪಿ. ಪಾಟೀಲರು ರೈತರ ಹಿತ ದೃಷ್ಟಿಯಿಂದ ಕಲಮು ರದ್ದು ಮಾಡುತ್ತೇವೆ ಜಾರಿಗೆ ಕೊಡುವುದಿಲ್ಲ ಎಂದು ಹೇಳಿದರು. 1956ನೇ ಇಸವಿಯಿಂದ ಕರ್ನಾಟಕ ಆದ ಮೇಲೆ ಆ ಭಾಗದ ರೈತರಿಗೆ ಇದರಿಂದ ಅಪಾರ ಹಾನಿ ನಷ್ಟ ಆಯಿತು. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಒಂದು ಪ್ರೊಜೆಕ್ಟಿನಲ್ಲಿ ಮಹಾರಾಷ್ಟ್ರ ಪ್ರದೇಶಕ್ಕೆ ಸೇರಿರತಕ್ಕಂಥ ಗೇಣಿದಾರರಿಗೆ ಭೂಮಿ ಮುಳುಗಡೆಯಾದ ಬಗ್ಗೆ ಪರಿಹಾರ ಕೊಡುವ ನೀತಿ ಇದೆ. ಆದರೆ ಕರ್ನಾಟಕ ಭಾಗದಲ್ಲಿ ಮಾತ್ರ ಪರಿಹಾರ ಸಿಕ್ಕುವುದಿಲ್ಲ. ಇಂಥ ಏಕರೂಪತೆಯ ಕಾನೂನು ತರುತ್ತಾರೆ. ಕರ್ನಾಟಕ ಏಕೀಕರಣವಾದ ಮೇಲೆ ಎಷ್ಟು ಕಾನೂನುಗಳನ್ನು ಜಾರಿಗೆ ಕೊಟ್ಟಿದ್ದೀರಿ ? ಏಕರೂಪತೆಯಾಗಲು ನಿಜವಾಗಿಯೂ ರೂಲ್ಸು ಮಾಡಿ ಕಾರ್ಯಗತ ಮಾಡಿದ್ದೀರಾ ? ಈ ರೀತಿ ಸುಧಾರಣೆ ಮಾಡುವ ನಾಟಕವಾಡುತ್ತಿದ್ದೀರಿ. ಇದೊಂದು ದುರಂತ ನಾಟಕ ನಡೆಯುತ್ತಿದೆ ಎಂದು ಹೇಳಬಹುದು. ದುರದೃಷ್ಟವಶಾತ್ ಇಂದು ರೈತರಲ್ಲಿ ಸಂಘಟನೆಯಿಲ್ಲ ಜಾಗ್ರತಿಯಿಲ್ಲ. ಸರಕಾರದ ವಿರೋಧವಾಗಿ ಹೋರಾಡಿ ಹಕ್ಕು ಸ್ಥಿರೀಕರಿಸುವ ಶಕ್ತಿ ಅವರಲ್ಲಿ ಇಲ್ಲ. ಇಂಥ ಸನ್ನಿವೇಶದಲ್ಲಿ ಈ ತಿದ್ದುಪಡಿಯನ್ನು ಮಾನ್ಯ ಕಂದಾಯ ಸಚಿವರು ನಮ್ಮ ಮುಂದೆ ಇಟ್ಟಿದ್ದಾರೆ. 1947ನೇ ಇಸವಿಯಿಂದ ಈಚೆಗೆ ಭೂಮಾಲೀಕರಿಗೆ ಹೊರಲಾರದಷ್ಟು ಗೇಣಿ ತೆತ್ತಿದ್ದಾರೆ. ಅಂಥ ರೈತನನ್ನು ಇಂದು ಮುಕ್ತ ಮಾಡಬೇಕು. ಸ್ವಾತಂತ್ರ್ಯ ಬಂದ ಮೇಲೆ ರಾಜಕೀಯ ಸಂತ್ರಸ್ಥರಿಗೆ ಐದು, ಹತ್ತು ಎಕರೆ ಜಮೀನು ಕೊಟ್ಟಿದ್ದೀರಿ. ಇದಲ್ಲದೆ ಅನೇಕ ಲಕ್ಷ ಎಕರೆ ಜಮೀನು ಹಂಚಿದ್ದೀರಿ. ಜೀವನದಲ್ಲಿ ಬೇರೆ ಏನೂ ಮಾರ್ಗವಿಲ್ಲದೆ, ಬೇರೆ ಯಾವ ಕಸಬೂ ಗೊತ್ತಿಲ್ಲದೆ ಭೂಮಿಯನ್ನೇ ನೆಚ್ಚಿಕೊಂಡು ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಕಾರಣಾಂತರದಿಂದ ಗೇಣೀದಾರನಾಗಿ ಭೂಮಿಯಲ್ಲಿ ಇರತಕ್ಕಂಥ ಮನುಷ್ಯನಿಗೆ ಸರಕಾರದವರೇ ಖಾತೆ ಮಾಡಿ ಕೊಡುವುದಕ್ಕೆ ಸಾಧ್ಯವಿಲ್ಲವೇ ? ಇನ್ನೂ 20 ವರ್ಷ ಪ್ರೀಮಿಯಂ ಕೊಡಿ ಎಂದು ಹೇಳುತ್ತೀರಲ್ಲಾ ? ಇದುವರೆಗೆ 17 ವರ್ಷ ಪ್ರೀಮಿಯಂ ಕೊಟ್ಟಿದ್ದಾರೆ. ಇನ್ನೂ 20 ವರ್ಷ ಏತಕ್ಕೆ ಕೇಳುತ್ತೀರಿ ? 48ನೇ ಕಲಮಿನ 4ನೇ ಸಬ್-ಕ್ಲಾಜನ್ನು ಹೊಡೆದು ಹಾಕಬೇಕು ಎಂದು ಮಾನ್ಯ ಕಂದಾಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಇದರಿಂದ ಸರಕಾರಕ್ಕೆ ಲುಕ್ಸಾನಾಗುವುದಿಲ್ಲ. ಸರಕಾರವೇನೂ ಮುಳುಗಿ ಹೋಗುವುದಿಲ್ಲ. ಸರಕಾರದ ಆರ್ಥಿಕ ವ್ಯವಸ್ಥೆ ಕುಸಿದು ಬೀಳುವುದಿಲ್ಲ. ರೈತನಿಗೆ ಪ್ರೀಮಿಯಂ ಬಾಧಕ ತಂದೊಡ್ಡಿದೆ. "Where any tenant makes a statement that he is not willing to be registered as an occupant" ಭೂಮಿ ಬೇಡ ಎಂದು ಹೇಳುವವರು ಯಾರೋ ಇರಬಹುದು. ಆದರೆ ಇವತ್ತಿನ ದಿವಸ ನಿಜವಾಗಿಯೂ ದುಡಿಯುತಕ್ಕಂಥ, ರೈತಾಪಿ ಕೆಲಸ ಮಾಡತಕ್ಕಂಥ ಯಾವ ರೈತನೂ ತನಗೆ ಖಾತೆ ಹಾಕಿ ಕೊಡಬೇಡಿ ಎಂದು ಹೇಳುತ್ತಾನೆ ? ಅದನ್ನು ಊಹಿಸುವುದಕ್ಕೂ ಸಾಧ್ಯವಿಲ್ಲ. ಕೆಲವು ಕಡೆ ಆಗದೇ ಇರಬಹುದು, ಇನ್ನಿತರ ಅನನುಕೂಲವಿರಬಹುದು. ಇದನ್ನು ಟ್ರಿಬ್ಯೂನಲ್ ವಿಚಾರ ಮಾಡಬೇಕು. ಅವನು ರಿಜಿಸ್ಟರ್ ಮಾಡಿಸಿ ಹೇಳಿಕೆ ಕೊಟ್ಟರೆ ಅವನ ಹೆಸರಿನಲ್ಲಿ ರಿಜಿಸ್ಟರ್ ಆಗತಕ್ಕದ್ದು ಎಂದು ಬರೆದು ಕೊಂಡಿದ್ದೀರಿ. ಇದು ಆಗಬಾರದು. All tenants entitled to be registered as occupants shall be registered. Such lands shall be registered in their names. ಹೀಗೆ ಸ್ಪಷ್ಟವಾಗಿ ಬರೆಯಬೇಕು. ಯಾರು ಯಾರಿಗೆ ಸೆಕ್ಷನ್ 45ರ ಪ್ರಕಾರ ಪಟ್ಟಾ

(ಶ್ರೀ ಎಸ್. ಗೋಪಾಲಗೌಡ)

ಪಡೆಯುತಕ್ಕ ಅಧಿಕಾರ ಬರುತ್ತದೆಯೋ ಅವರೆಲ್ಲರಿಗೂ ಪಟ್ಟಾ ಹಾಕಿ ಕೊಡತಕ್ಕದ್ದು. ಟ್ರಿಬ್ಯೂನಲ್ ಪಟ್ಟಾ ಹಾಕಿಸಿ ಕೊಡಬೇಕು ಎಂದು ನಿರ್ದೇಶನ ಕೊಟ್ಟು ಡೈರೆಕ್ಟ್ ಮಾಡಬೇಕು. ಎಂದು ಬರೆದು ಅಂಥ ಲ್ಯಾಂಡ್ಸ್ ರಿಜಿಸ್ಟರ್ ಮಾಡಿ ಕೊಡಬೇಕು. ಪ್ರೀಮಿಯಂ ತೆಗೆದು ಕೊಳ್ಳಬಾರದು. ಮತ್ತೆ ಮತ್ತೆ ಈ ವಿಷಯವನ್ನು ಹೇಳುತ್ತಿದ್ದೇನೆ. ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಳೆದ 17 ವರ್ಷಗಳಲ್ಲಿ ಅನೇಕ ಕಷ್ಟನಿಷ್ಠೂರಗಳನ್ನು ಅನುಭವಿಸಿ ಗೇಣಿ ವ್ಯವಸ್ಥೆಯಲ್ಲಿ ಸಿಕ್ಕುಬಿದ್ದು ಪಶುಗಿಂತ ಕಡೆಯಾಗಿ ಬದುಕಿದ್ದರೂ ಕೂಡ ಈ ಗೇಣಿ ಹೊಣೆಯಿಂದ ಅವನನ್ನು ಮುಕ್ತ ಮಾಡಿ, ಇನ್ನು ಪ್ರೀಮಿಯಂ ಹೊರೆ ಹೇರಬೇಡಿ ಎಂದು ಸರಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇನ್ನೊಂದು ಮಾತು ಕಾನೂನಿನಲ್ಲಿ ಇದೆ. ಸೆಕ್ಷನ್ 44ನೇ ವಿಧಿಯಲ್ಲಿ ....

ಡೆಪ್ಯೂಟಿ ಸ್ಪೀಕರ್.—ಮೊದಲಿನ ಆಕ್ಟು ಈಗ ಚರ್ಚೆಗೆ ಇಲ್ಲ. ಈಗ ಸಭೆಯ ಮುಂದೆ ತಿದ್ದುಪಡಿ ಮಸೂದೆ ಎಷ್ಟು ಇದೆ ಅಷ್ಟಕ್ಕೆ ಮಾತನಾಡಬೇಕು.

ಶ್ರೀ ಎಸ್. ಗೋಪಾಲ ಗೌಡ.—ಆಕ್ಟನ್ನು ತಿದ್ದುಪಡಿ ಮಾಡಬೇಕು ಎಂದು ಸೂಚಿಸುತ್ತೇನೆ.

ಡೆಪ್ಯೂಟಿ ಸ್ಪೀಕರ್.—ಅದು ಇದರಲ್ಲಿ ಬರುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—48ನೇ ತಿದ್ದುಪಡಿಯಲ್ಲಿ ಬರುತ್ತದೆ. 44ನೇ ಸೆಕ್ಷನ್‌ನಲ್ಲಿ

"As soon as may be after the determination of the non-resumable lands under sub-section (4) of section 14, by each Tribunal, the State Government may by notification declare that with effect from such date as may be specified in such notification............"

ಈ ಒಂದು ಮಾತು ಇದೆ. ಇದನ್ನು ಅನುಭವಿಸಿದ್ದೇವೆ. ಸರಕಾರ ನೋಟೀಫೈ ಮಾಡುವುದಿಲ್ಲ. ನನಗೆ ಒಂದು ಭಯ ಇದೆ. ಮಂಗಳೂರು ಜಿಲ್ಲೆಯನ್ನು ವಿನಾಯಿತಿ ಮಾಡಿ ಬಿಡಬಹುದು ಎಂದು. ಯಾತಕ್ಕೆಂದರೆ ಮಂಗಳೂರು ಜಿಲ್ಲೆಯೇ ಆಡಳಿತದಲ್ಲಿ ಇರುವುದು. ಆದುದರಿಂದ 5 ವರ್ಷ ಆದರೂ ನೋಟೀಫೈ ಮಾಡದಂತೆ ಅವರು ನೋಡಿಕೊಳ್ಳಬಹುದು. ಟ್ರೈಬ್ಯೂನಲ್ ಸೇರಬಹುದು ಬರವಣಿಗೆಯಲ್ಲಿ ಬರಬಹುದು. ಇದನ್ನು ಚೆಕ್ ಮಾಡುವುದು ಸರಿ. ಆದರೆ ಸರಕಾರವೇ ನೋಟೀಫೈ ಮಾಡದೇ ಹೋದರೆ ಇವರಿಗೆ ಪಟ್ಟಾ ಬರುವುದಿಲ್ಲ. ಪಟ್ಟಾ ಬರುವ ತನಕ ಇದೇ ರೀತಿ ಗೇಣಿದಾರರು ಮುಂದುವರಿಯುತ್ತಾರೆ. ಆದ್ದರಿಂದ ಈ ಭಾಗ ತೆಗೆದು ಹಾಕಿದರೆ ಏನೂ ಅಪಾಯ ಇಲ್ಲ. ಟ್ರೈಬ್ಯೂನಲ್ ಆಯಾಯ ಗ್ರಾಮದಲ್ಲಿ ವಿಚಾರಣೆ ಮಾಡಿ ರಿಕಾರ್ಡ್ ಆದ ತಕ್ಷಣ ಸರಕಾರ ಪಟ್ಟಾ ಕೊಡುವ ಏರ್ಪಾಡು ಮಾಡಬೇಕು. ಈ ವರ್ಷವೇ ಆದರೆ ಬಹಳ ಒಳ್ಳೆಯದು. ಸಾಕಷ್ಟು ನಿಮ್ಮ ಹತ್ತಿರ ಪಹಣ ಇದೆ ರಿಜಿಸ್ಟರ್ ಇದೆ ಎಲ್ಲಾ ಇದೆ. ತಂದಿರುವ ಕೆಲವು ತಿದ್ದುಪಡಿಗಳನ್ನು ಬಿಟ್ಟು ಬಿಡಬೇಕು ಎಂದು ಹೇಳುತ್ತೇನೆ. ನಿಜವಾಗಿಯೂ ಇನ್ನೂ ಕೆಲವು ತಿದ್ದುಪಡಿಗಳನ್ನು ತರಬೇಕಾಗಿತ್ತು. ಕೇಂದ್ರ ಸರಕಾರದವರು ಪ್ಲಾನಿಂಗ್ ಕಮಿಷನ್ ಅವರು ಆದೇಶ ಕೊಟ್ಟಿದ್ದಾರೆ. ಏನೇನು ಆದೇಶ ಕೊಟ್ಟಿದ್ದಾರೆ ಎನ್ನುವುದು ಕೂಡ ಸರಕಾರದ ಮುಂದೆ ಇದೆ. ಅದಕ್ಕೆ ಅನುಗುಣವಾಗಿ ಸರಕಾರದವರು ಸಮಗ್ರವಾದ ತಿದ್ದುಪಡಿ ತಂದಿಲ್ಲ. ಅದಕ್ಕಾಗಿ ಈ ಮಸೂದೆಯನ್ನು ತಾವು ಪುನಃ ಸಾಕಷ್ಟು ವಿಮರ್ಶೆ ಮಾಡಬೇಕೆಂದು ನಾನು ಸರಕಾರದವರನ್ನು ಕೇಳಿಕೊಳ್ಳುತ್ತೇನೆ. ಈ ವಿನಾಯಿತಿಗಳ ವಿಚಾರದಲ್ಲಿ ಶ್ರೀ ಕಡಿದಾಳರು ಹೇಳಿದ್ದಾರೆ. ಈ ವಿನಾಯಿತಿಗಳ ವಿಚಾರವೂ ಹಾಗೆ ಒತ್ತಟ್ಟಿಗಿರಲಿ, ಈ ಭೂಸುಧಾರಣೆಯ ಕಾನೂನೇ ಜಾರಿಗೆ ಬರುತ್ತದೆಯೋ ಇಲ್ಲವೊ ಎನ್ನ ತಕ್ಕ ಅನುಮಾನವೇ ಎಲ್ಲರಲ್ಲೂ ಇದ್ದುದರಿಂದ ಆ ಫಾರಂಗಳು ಯಾವುವೋ, ಅವೆಲ್ಲವೆಯೋ ಅದು ಒಬ್ಬರಿಗೂ ಗೊತ್ತಿಲ್ಲ. ಆದಾಗ್ಗೂ ಇಲ್ಲಿ ಇವರು ಯಾವುದೋ ಒಂದು ವರ್ಗವನ್ನು ತಮ್ಮ ದೃಷ್ಟಿ ಯಲ್ಲಿಟ್ಟುಕೊಂಡು ಇಲ್ಲಿ ಪದಗಳನ್ನು ಮಾತ್ರ ಬಹಳ ಎಚ್ಚರಿಕೆಯಿಂದ ಹಾಕಿಕೊಂಡು ಬಂದಿದ್ದಾರೆ. ಇಲ್ಲಿರತಕ್ಕ ಮುಖ್ಯ ವಿಚಾರ ಅಂದರೆ, ಭೂಮಿಯನ್ನು ಉಳತಕ್ಕವನಿಗೂ ಮತ್ತು ಭೂಮಿಗೂ ಮಧ್ಯೆ ಯಾರೂ ಇರಬಾರದು ಎಂಬುದು ಬಹಳ ಮುಖ್ಯವಾದ ವಿಚಾರ. ಭೂಮಿಯ ಮಾಲೀಕತ್ವ ಯಾವತ್ತೂ ಸರ್ಕಾರದವರಲ್ಲಿರುತ್ತೆ. ಯಾವುದೋ ಒಂದು ಹಳ್ಳಿಯಲ್ಲಿ ಒಬ್ಬ ರೈತ ಕುಗ್ರಾಮಾವಸ್ಥೆ ಯಲ್ಲಿದ್ದುಕೊಂಡು ಅಲ್ಲಿ ಬೇರೆ ನಾಗರೀಕ ಪ್ರಪಂಚದ ಸಂಪರ್ಕ ಹೊಂದಲು ಯಾವ ಒಂದು ರಸ್ತೆ

ಸಾರಿಗೇ ಅನುಕೂಲವೂ ಇಲ್ಲದೆ, ಅಂಥ ಕಡೆಯಲ್ಲಿದ್ದುಕೊಂಡು ಉಳುಮೆ ಮಾಡುತ್ತಿದ್ದರೆ ನನ್ನ ದೃಷ್ಟಿಯಲ್ಲಿ ಅಂಥ ಮನುಷ್ಯನಿಗೆ ತಿಂಗಳೊಂದಕ್ಕೆ 200 ರೂಪಾಯಿನ್ನಾದರೂ ಕೊಡಲೇಬೇಕು ಅಂತ ಹೇಳುತ್ತೇನೆ. ನಮಗೆ ಯಾವುದಾದರೊಂದು ಅಂಥ ಹೊಣಗಾರಿಕೆ ಇದ್ದರೆ ನಾವು ಅಷ್ಟು ದುಡ್ಡನ್ನು ಕೊಟ್ಟೇ ಕೊಡಬೇಕಾಗುವುದು. ಈ ಕಸುಬು ಅಂಥಾದ್ದು. ಈ ದಿವಸ ಇಲ್ಲಿ ಪೇಟೆಯಲ್ಲಿ ಷೋಕಿ ಮಾಡಿಕೊಂಡು ತಿರುಗುತ್ತಿರುವ ಒಬ್ಬ ಮನುಷ್ಯನಿಗೆ ಆ ಶೃಂಗೇರಿಯ ಹತ್ತಿರ ಎಲ್ಲಿಯೋ ಒಂದು ಕಡೆಯಲ್ಲಿ ಮಾಫಿಯಾಗೇ ಇಂತಿಷ್ಟು ಜಮೀನನ್ನು ಕೊಡುತ್ತೇವೆಂದು ಹೇಳಿ ನೋಡಿ ಆತನು ಅಲ್ಲಿಗೆ ಹೋಗುತ್ತಾನೇನೋ. ಅಂಥ ಕಡೆಗೆ ಹೋಗಿ ಕೆಲಸ ಮಾಡುವುದಕ್ಕೆ ಯಾರೂ ತಯಾರಿಲ್ಲ. ಆಗ ತಮಗೇ ಗೊತ್ತಾಗುತ್ತದೆ ಈ ಭೂಮಾಲೀಕತ್ವ ಯಾರಲ್ಲಿರಬೇಕು ಎಂಬುದು. ಅದರೆ ಇಲ್ಲಿ ಜಮೀನ್ದಾರನಿಗೆ ಯಾವ ರಕ್ಷಣೆ ಕೊಡಬೇಕು ಎನ್ನತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇಲ್ಲಿ ನಾವೆಲ್ಲರೂ ಮುಖ್ಯವಾಗಿ ಗಮನಿಸಬೇಕಾದ್ದು ಜಮೀನು ಉಳತಕ್ಕ ಮನುಷ್ಯನಿಗೆ ನಾವು ಯಾವ ಯಾವ ರಕ್ಷಣೆಗಳನ್ನು ಕೊಡಬೇಕು ಎಂಬುದೇ ಇಂದಿನ ಮುಖ್ಯ ಪ್ರಶ್ನೆ. ಅದನ್ನು ನಾವು ಈ ದಿವಸ ಕೈಬಿಟ್ಟು ಭೂಮಾಲೀಕ ಯಾರಿರಬೇಕು ಸರ್ಕಾರವೇ, ಸಾಹುಕಾರನೇ ಅಥವಾ ಸಕ್ಕರೆ ಕಂಪೆನಿಯವರೇ ಅಥವಾ ಮಠದವರೇ ಎಂಬುದನ್ನು ಆಲೋಚಿಸತಕ್ಕದ್ದು ಅನುಚಿತ. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಹೇಳಿದರು ಎಲ್ಲಿಯೋ ಹಗ್ಗ ತಿನ್ನತಕ್ಕ ಹನುಮಂತರಾಯ ದೇವರಿದ್ದಾನೆ ಎಂದು. ಇನ್ನು ಶ್ರೀಮಾನ್ ಪಾಟೀಲ್‌ರವರು ಆ ಶ್ರೀರಂಗಪಟ್ಟಣದ ದೇವರ ವಿಚಾರವನ್ನೂ ಹೇಳಿದರು. ಆದರೆ ಈ ಒಂದು ನೆಪದಲ್ಲಿ ಯಾರೊಬ್ಬರಿಗೂ ತೊಂದರೆಯಾಗಬಾರದು. ಯಾವುದಕ್ಕೆ ಬೇಕಾದರೂ ಕೊಡೋಣ. ಅದರೆ ಯಾವುದೋ ಒಂದು ವಿಚಾರವನ್ನು ಸರ್ಕಾರದವರು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಇಡೀ ರಾಜ್ಯದಲ್ಲಿರತಕ್ಕ ದೇವಸ್ಥಾನಗಳನ್ನು........

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಅದಕ್ಕೂ ತಿದ್ದುಪಡಿಯನ್ನು ತರಲಾಗುವುದು.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಒಂದಾನೊಂದು ಕಾಲದಲ್ಲಿ ದೇವರು, ಗೋವು ಬ್ರಾಹ್ಮಣ ಎಂಬ ಭಾವನೆಯಿತ್ತು ಜನರಲ್ಲಿ. ಈ ದಿವಸ ಅದು ಹೋಗಿ ಮೊದಲು ಭೂಮಿ ಆನಂತರ ರೈತ ಇವರಿಬ್ಬರೂ ಅದಮೇಲೆ ಇನ್ನುಳಿದವರೆಲ್ಲರೂ ಬರುತ್ತಾರೆ. ರೈತನಿಗೆ ನಾವು ಈ ದಿನ ಸಾಕಷ್ಟು ಭೂಮಿಯನ್ನು ಉಳುವುದಕ್ಕೆ ಒದಗಿಸಿಕೊಡತಕ್ಕ ಕಾಲ ಬಂದಿದೆ. ಆದ್ದರಿಂದ ಇಂಥ ರೈತನಿಗೂ ಮತ್ತು ಭೂಮಿಗೂ ಮಧ್ಯೆ ಯಾರು, ಬಂಧನಕಾರರು ಇರಬಾರದು. ಭೂಮಿಯನ್ನು ಉಳತಕ್ಕವ ಇದು ನನ್ನ ಭೂಮಿ, ನಾನು ಇದರ ಮಾಲೀಕ, ಎಂಬ ವಿಶ್ವಾಸ ಅವನಲ್ಲಿ ಬೆಳೆಯಬೇಕು ಆಗಲೇ ಅದರಲ್ಲಿ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವನಲ್ಲಿ ಶ್ರದ್ಧೆ ಹುಟ್ಟುತ್ತದೆ. ಆದರೆ ಈ ಹಿಂದೆ ಮಾತನಾಡಿದ ಮಳೆಯನ್ನು ತರತಕ್ಕ ದೇವೇಂದ್ರಪ್ಪ ಯಾರಾದರೂ ಶಾಲೆಯನ್ನು ನಡೆಸುತ್ತಿದ್ದರೆ ಅಂಥವರ ಜಮೀನಿಗೇನು ಮಾಡುವುದು ಎಂದು ಕೇಳಿದರು. ನಾವು ಈ ಹಿಂದೆ ಆ ಶೃಂಗೇರಿ ಇನಾಮನ್ನು ರದ್ದುಮಾಡತಕ್ಕ ಕಾಲದಲ್ಲಿ ಆ ದಿವಸ ಗೇಣೀ ಮೂಲಕ ಆ ಸಂಸ್ಥೆಗೇನು ಒಂದು ಉತ್ಪತ್ತಿ ಬರುತ್ತಾ ಇತ್ತು ಅಷ್ಟನ್ನು ಆ ಇನ್‌ಸ್ಟಿಟ್ಯೂಷನ್ನಿಗೆ ಕೊಟ್ಟುಬಿಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೆ ಯಾರೂ ಈ ದಿವಸ ತಕ್ರಾರನ್ನು ಮಾಡುವ ಹಾಗಿಲ್ಲ. ಹಾಗೆಯೇ ಇಲ್ಲಿಯೂ ಒಪ್ಪಿಕೊಂಡರಾಯಿತು. ಯಾವುದಾದರೂ ಇನ್‌ಸ್ಟಿಟ್ಯೂಷನ್ನು ಈ ದಿವಸ ಗೇಣೀರೂಪದಲ್ಲಿ ಏನಾದರೂ ವರಮಾನ ಪಡೆಯುತ್ತಿದ್ದಲ್ಲಿ ಆ ಜಮೀನನ್ನು ಹಿಂದಕ್ಕೆ ತೆಗೆದುಕೊಂಡು ಅದಕ್ಕೆ ಆ ವರಮಾನವನ್ನು ಕೊಡೋಣ. ಅಷ್ಟು ಉತ್ಪತ್ತಿ ಬಂದಮೇಲೆ ಅದನ್ನು ಬಿಟ್ಟುಕೊಡಲು ತೊಂದರೆಯೇನಿದೆ? ಎಂದಿದ್ದರೂ ಭೂಮಿ ಉಳತಕ್ಕ ರೈತನ ಕೈಲಿರಬೇಕು. ಆದರೆ ಒಂದು ಪಾರುಪತ್ಯ ಇತರರ ಕೈಲಿರುವುದು ಬೇಡ ಎಂದು ಹೇಳುತ್ತೇನೆ. ಇನ್ನು ಕೆಲವು ದೊಡ್ಡ ದೊಡ್ಡ ಹಿಡುವಳಿಗಳ ವಿಚಾರದಲ್ಲಿ ಪ್ಲಾಂಟೇಷನ್‌ಗಳ ವಿಚಾರದಲ್ಲಿ ಬೇರೆ ಬೇರೆ ಕಾನೂನುಗಳಿವೆ. ಅಲ್ಲಿ ಸಹಸ್ರಾರು ಜನರು ಕೂಲಿಮಾಡುತ್ತಿರುತ್ತಾರೆ ಅವುಗಳಿಗೆಲ್ಲಾ ಈ ಕಾನೂನನ್ನು ಅನ್ವಯಿಸುವುದು ಬೇಡ. ಅದರೆ ಇಲ್ಲೀಗ ಈ ಇನ್‌ಸ್ಟಿಟ್ಯೂಟುಗಳ ವಿಚಾರ ಬಂದಿರುವುದರಿಂದ ಇಂಥ ಒಂದು ವಿನಾಯಿತಿಯನ್ನು ಕೊಡತಕ್ಕದ್ದು ರೈತನದೃಷ್ಟಿಯಿಂದಲೂ ಹಿತವಲ್ಲ, ಆ ಇನ್‌ಸ್ಟಿಟ್ಯೂಗಳದೃಷ್ಟಿಯಲ್ಲೂ ಹಿತವಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಸೀಲಿಂಗಿನ ವಿಚಾರದಲ್ಲಿ ಕೆಲವರು ಇದು ಬಹಳ ಕಡಮೆಯಾಯಿತು ಎಂಬುದಾಗಿ ಒಂದು ಅನುಮಾನಪಡುತ್ತಿರುವಂತೆ ಕಾಣುತ್ತದೆ. ಭೂಮಿಯ ಬಗ್ಗೆ ಯಾರಿಗೆತಾನೆ ಆಶೆಯಿಲ್ಲ? ಕೇವಲ 2 ಕುಂಟೆ ಜಮೀನಿಟ್ಟುಕೊಂಡಿರತಕ್ಕವನೂ ಸಹಾ ಲೆಟರ್‌ಹೆಡ್ಡಿನಲ್ಲಿ ತಾನೊಬ್ಬ ಲ್ಯಾಂಡ್ ಲಾರ್ಡ್ ಎಂದು ಹಾಕಿಸಿಕೊಂಡಿರುತ್ತಾನೆ. ಅಷ್ಟು ಜಮೀನಿದ್ದರೂ ಅದರಲ್ಲೇ ತೃಪ್ತಿಪಟ್ಟುಕೊಂಡಿರತಕ್ಕ ಜನರೂ ಇದ್ದಾರೆ. ಇನ್ನು ಕೆಲವರಲ್ಲಿ ಭೂಮಿ ವ್ಯಾಮೋಹ ಜಾಸ್ತಿ ಇರುತ್ತದೆ. ಕೆಲವರಿಗೆ 200 ಎಕರೆ ಇದ್ದರೂ ಸಾಲದು, ಇನ್ನು ಕೆಲವರಿಗೆ 2000 ಎಕರೆಗಳಿದ್ದರೂ ಸಾಲದು. ಇದು ಅಂಥ

(ಶ್ರೀ ಎಸ್. ಗೋಪಾಲಗೌಡ)

ವಿಚಾರ ಸಾಲದ್ದಕ್ಕೆ ಈ ಭೂಮಾಲೀಕನಾಗತಕ್ಕ ವ್ಯಕ್ತಿ ಎಲ್ಲಿದ್ದರೂ ಇರಬಹುದು ಎಂಬುದಾಗಿ ಶ್ರೀ ಕಡಿದಾಳ್ ಮಂಜಪ್ಪನವರು ಬೇರೆ ತೀರ್ಮಾನ ಮಾಡಿದ್ದಾರೆ. ಅಂದರೆ ಪರ್ಸನಲ್ಲಾಗಿ ಕಲ್ಟಿವೇಟ್ ಮಾಡತಕ್ಕ ವ್ಯಕ್ತಿ........

ಶ್ರೀ ಕಡಿದಾಳ್ ಮಂಜಪ್ಪ.—ನಾನಲ್ಲ ಮಾಡಿದ್ದು, ಸಭೆಯವರು ಆ ರೀತಿ ತೀರ್ಮಾನ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಆ ಜಮೀನಿರತಕ್ಕ ಗ್ರಾಮದಲ್ಲೇ ನೆಲಸಿದ್ದರೂ ಆ ಕೆಲಸವನ್ನು ನಿರ್ವಹಿಸುವುದು ಬಹಳ ಕಷ್ಟ ಎನ್ನುತ್ತಿರುವಾಗ, ಈ ದಿವಸ ಮತ್ತೆ ಇದಕ್ಕೆ ಒಂದು ಅವಕಾಶ ಕೊಟ್ಟಲ್ಲಿ ಈ ಬೆಂಗಳೂರಿನಲ್ಲಿರತಕ್ಕವರೂ ಭೂಸ್ವಾಮಿಗಳಾಗಿ ಆ ಹಿಂದಿದ್ದ ಆ ಗೇಣೀದಾರರನ್ನೇ ಪುನಹ ತಿಂಗಳಿಗೆ 40 ರೂಪಾಯಿಗಳ ಪ್ರಕಾರ ಕೊಡುತ್ತ ಅವರನ್ನ ಕೂಲಿಯಾಳುಗಳೋಪಾದಿಯಲ್ಲಿ ಇಟ್ಟು ಕೊಂಡು ಅದರಿಂದಲೇ ದುಡಿಸಿ ಅವರ ಹಕ್ಕಿಗೆ ಧಕ್ಕೆ ತರಲು ಇದರಿಂದ ಅವಕಾಶವಾಗುತ್ತದೆ. ಆದುದರಿಂದ ಇಂಥ ಕೆಲವಾರು ಲೋಪದೋಷಗಳನ್ನು ಜಾಗ್ರತೆ ಸುಧಾರಣೆಮಾಡಿ ಈ ಕಾನೂನನ್ನು ಬೇಗ ಜಾರಿಗೆ ತಂದು ಭೂರಹಿತರಾದ ರೈತರಿಗೆ ಭೂಮಿಯನ್ನು ಹಂಚಿ ತನ್ಮೂಲಕ ದೇಶದಲ್ಲಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ಈಗ ನಮ್ಮ ಸಭೆಯ ಮುಂದೆ ಇರತಕ್ಕ ಮೈಸೂರು ಲ್ಯಾಂಡ್ ರಿಫಾರಂಸ್ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ.

ಈಗಾಗಲೇ ಅನೇಕ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಇನ್ನು ಕೆಲವರು ಇದರಲ್ಲಿರತಕ್ಕ ಲೋಪದೋಷಗಳನ್ನು ಪ್ರಸ್ತಾಪಮಾಡಿದ್ದಾರೆ. ಆದರೆ ಎಲ್ಲರೂ ಆದಷ್ಟು ಬೇಗ ಭೂಸುಧಾರಣೆಯಾಗಬೇಕು, ಉಳತಕ್ಕವನೇ ಭೂಮಿಗೆ ಒಡೆಯನಾಗಬೇಕು ಎಂದು ಏನು ಒಂದು ಮೂಲ ಭೂತ ಪ್ರಶ್ನೆಯನ್ನು ಪ್ರಸ್ತಾಪಮಾಡಿದ್ದಾರೋ ಅದನ್ನು ನಾವು ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲಿಂದಲೂ ಹೇಳುತ್ತಲೇ ಇದ್ದೇವೆ, ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೂ ನಾವು ಈ ವಿಚಾರದಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದೇವೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಾವು ಈ ಹಿಂದೆ ಗೇಣೀದಾರರ ಅನುಕೂಲಕ್ಕಾಗಿ ಟೆನೆನ್ಸಿ ಕಾನೂನನ್ನೂ ದೊಡ್ಡ ದೊಡ್ಡ ಇನಾಂ ರದ್ದಿಯಾತಿ ಕಾನೂನುಗಳನ್ನೂ ಜಾರಿಗೆ ತಂದಿದ್ದೇವೆ. ಈ ಮಸೂದೆಗಳನ್ನು 1961ರಲ್ಲೇ ಪಾಸ್ ಮಾಡಿ ಸದರಿ ಕಾನೂನುಗಳಿಂದ ದೇಶಕ್ಕೆ ಅನುಕೂಲವಾಗಿದೆಯೋ ಅಥವಾ ಪ್ರತಿಕೂಲವಾಗಿದೆಯೋ ಎಂಬುದನ್ನು ವೀಕ್ಷಿಸುತ್ತಿದ್ದೇವೆ. ನಾವು ಇಲ್ಲಿಯವರೆಗೂ ಇಲ್ಲಿ ಎಷ್ಟೇ ಕಾನೂನುಗಳನ್ನು ಪಾಸ್ ಮಾಡಿದ್ದರೂ ರೈತನಾದವನಿಗೆ ಈ ದಿವಸ ಒಂದು ಸರಿಯಾದ ನಿಲುವಿಲ್ಲದೆ ಬಹಳ ಕಷ್ಟಕ್ಕೆ ಸಿಕ್ಕಿ ಬಿದ್ದಿದ್ದಾನೆ. ಅಂಥ ರೈತರುಗಳಿಗೆಲ್ಲಾ ನಾವು ಈ ದಿವಸ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾದ್ದು ಅವಶ್ಯಕ. ಉದಾಹರಣೆಗಾಗಿ ಹೇಳುವುದಾದರೆ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇನಾಂ ರದ್ದಿಯಾತಿ ಕಾನೂನು ಜಾರಿಗೆ ಬಂದಿದ್ದರೂ ಅಲ್ಲಿ ಬೂದನಿಕೆ, ಕನ್ನಾಪುರ ಮತ್ತು ನಾಗಲಾಪುರ ಎಂಬ ಇನಾಂ ಗ್ರಾಮಗಳಲ್ಲಿರತಕ್ಕ ರೈತರು ಬಹಳ ಕಷ್ಟಕ್ಕೆ ಸಿಕ್ಕಿದ್ದಾರೆ. ಆದುದರಿಂದ ನಾವು ಇಲ್ಲಿಯವರೆಗೂ ಮಾಡಿರತಕ್ಕ ಕಾನೂನುಗಳು ರೈತರಿಗೇನಾದರೂ ರಕ್ಷಣೆ ಮಾಡಿವೆಯೋ, ಅವರಿಗೇನಾದರೂ ಅನುಕೂಲವಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ನಾವು ಇಂದು ಪರಿಶೀಲಿಸಬೇಕಾದ್ದು ಅವಶ್ಯಕ.

ಈ ತಿದ್ದುಪಡಿ ಮಸೂದೆ ಪಾಸ್ ಆದನಂತರ ಭೂಮಾಲೀಕರಿಗೆ ಹಾಗೂ ರೈತರಿಗೆ ಮತ್ತು ಲಾಯರುಗಳಿಗೆ ಆಗತಕ್ಕ ಅನುಕೂಲ ಅನಾನುಕೂಲಗಳ ಬಗ್ಗೆ ಮೊದಲು ಸರ್ಕಾರ ದೃಷ್ಟಿಯಲ್ಲಿಡುವುದು ತುಂಬಾ ಅವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯನ್ನಿಟ್ಟು ಇದನ್ನು ಪಾಸ್ ಮಾಡಿದರೆ ನಿಜವಾಗಿಯೂ ಸಹ ಸರ್ಕಾರದ ಉದ್ದೇಶ ಸಾಧನೆಯಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಈ ತಿದ್ದುಪಡಿಯಲ್ಲಿ ದೇವಸ್ಥಾನಗಳಿಗೆ ಸಂಬಂಧಪಟ್ಟ ಜಮೀನುಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪೂರ್ವ ಕಾಲದಿಂದಲೂ ಸಹ ನಮ್ಮ ದೇಶದಲ್ಲಿ ದೇವಸ್ಥಾನಗಳು ಅಭಿವೃದ್ಧಿಯಾಗಬೇಕಾದರೆ ದೇವಸ್ಥಾನಗಳನ್ನು ಜೀರ್ಣೋದ್ಧಾರವಾಗಿ ನಡೆಸಿಕೊಂಡು ಬರಬೇಕಾದರೆ ಅವಕ್ಕೆ ಒಳ್ಳೆಯ ಭೂಮಿ ಬೇಕು ಎನ್ನತಕ್ಕ ಉದಾತ್ತವಾದ ಒಂದು ತತ್ವವನ್ನು ಇಟ್ಟುಕೊಂಡು ಈ ದೇಶದಲ್ಲಿ ಇಂಗ್ಲೀಷ್‌ನವರ ಮತ್ತು ಮೊಗಲರ ಕಾಲದಿಂದಲೂ ಜಮೀನುಗಳನ್ನು ಅವುಗಳಿಗೆ ಉಳಿಸಿಕೊಂಡು ಬಂದಿದ್ದಾರೆ. ಅದು ನಮ್ಮ ದೇಶದ ಸಂಸ್ಕೃತಿಗೆ ಒಂದು ಬುನಾದಿ ಎಂದು ತಿಳಿದುಕೊಂಡು ಬಂದಿದ್ದೇವೆ. ಈಗ ದೇವಸ್ಥಾನಗಳಿಗೆ ಸಂಬಂಧಪಟ್ಟ ಜಮೀನುಗಳು ಹಾಗೆಯೇ ಇರಬೇಕೆಂಬ ದೃಷ್ಟಿಯಿಂದ ಈ

ತಿದ್ದುಪಡಿಯನ್ನು ಮಾಡಿದ್ದಾರೆ. ಅದರಿಂದ ರೈತನಿಗೂ ಕೂಡ ಅನುಕೂಲವಾಗುತ್ತದೆ. ಆದ್ದರಿಂದ ದೇವಸ್ಥಾನಗಳ ಜಮೀನನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಹೋಗುವುದಕ್ಕೆ ಈ ಒಂದು ಅವಕಾಶವನ್ನು ಮಾಡಿಕೊಡುವುದು ಬಹಳ ಅವಶ್ಯಕ. ಇದರಲ್ಲಿ ಕಾಫೀ ಜಮೀನಿಗೆ ವಿನಾಯಿತಿಯನ್ನು ನೀಡಿದ್ದಾರೆ. ಪರದೇಶಗಳಿಗೆ ಇದನ್ನು ಕಳುಹಿಸಿ ವಿದೇಶೀವಿನಿಮಯವನ್ನು ಸಂಪಾದನೆ ಮಾಡುವುದಕ್ಕೆ ಇದು ಬಹಳ ಅವಶ್ಯಕ. ಅಲ್ಲದೆ ಕೂಲಿಗಾರರ ಹಿತದೃಷ್ಟಿಯಿಂದ ಕಾಫಿ ಬೆಳೆಗೆ ಪ್ರೋತ್ಸಾಹ ಕೊಟ್ಟಿದ್ದೀರಿ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಒಂದು ಎಕರೆಗೆ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಸಾವಿರಾರು ಜನ ಕೂಲಿಗಾರರಿಗೆ ಅನುಕೂಲ ಮಾಡಿಕೊಡತಕ್ಕ ದೃಷ್ಟಿಯಿಂದ ಇದನ್ನು ಮಾಡಿದ್ದೀರ ಎಂದು ನಾನು ಅಂದುಕೊಂಡಿದ್ದೇನೆ. ಇದರಿಂದ ಭೂಮಾಲೀಕರಿಗೂ ಕೂಡ ಅನುಕೂಲವಾಗತಕ್ಕ ದೃಷ್ಟಿಯಿಂದ ಅಲ್ಲದೇ ದೇಶದ ಆರ್ಥಿಕಾಭಿವೃದ್ಧಿ ಮತ್ತು ಕೂಲಿಗಾರರಿಗೆ ಅನುಕೂಲವಾಗತಕ್ಕ ದೃಷ್ಟಿಯಿಂದ ಮುಂದಾಲೋಚನೆ ಮಾಡಿ ಮಾಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಈ ಕಾನೂನಿನಿಂದ ಹಳೇ ಮೈಸೂರಿನಲ್ಲಿ ಅಷ್ಟು ಕಾಣುವುದಿಲ್ಲ ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕದಲ್ಲಿ ಅನೇಕ ಕಡೆ ಭೂಮಾಲೀಕರು 10—20 ಸಾವಿರ ಎಕರೆ ಜಮೀನನ್ನು ಹೊಂದಿರುವವರು ಇದ್ದಾರೆ ಎಂದು ಕೇಳುತ್ತಾ ಇದ್ದೇವೆ, ಮೈಸೂರಿನಲ್ಲಿ ಅಂತಹ ಜನ ಬಹಳ ಕಡಿಮೆ ಇದ್ದಾರೆ, 1961ನೇ ಇಸವಿಯಿಂದ, ಈ ಕಾನೂನು ಬಂದ ನಂತರ ಅನೇಕ ಜನ ಭೂಮಾಲೀಕರು ತಮ್ಮ ಜಮೀನನ್ನು ಮಾರಿ ಕೊಂಡಿದ್ದಾರೆ ಎಂದು ಕೆಲವರು ಹೇಳುತ್ತಾ ಇದ್ದಾರೆ. ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕಾದರೆ ಸಣ್ಣ ಪುಟ್ಟ ಹೋಲ್ಡಿಂಗ್ ಇಂದ ಬೆಳೆಯುವುದಕ್ಕೆ ಆಗುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ರೈತನೇ ಭೂಮಾಲೀಕನಾದ ಪಕ್ಷದಲ್ಲಿ ಆಗಬಹುದೇ ಹೊರತು ಇತರ ಸಂದರ್ಭಗಳಲ್ಲಿ ಹೆಚ್ಚಿನ ಉತ್ಪನ್ನವನ್ನು ಮಾಡಬೇಕಾದರೆ ಹೆಚ್ಚು ಹೋಲ್ಡಿಂಗ್ ಇರುವುದರಿಂದಲೇ ಸಾಧ್ಯ ಎಂದು ನಾನು ತಿಳಿದುಕೊಂಡಿದ್ದೇವೆ. ಸುಮ್ಮನೆ ಎರಡು ನಾಲ್ಕು ಎಕರೆ ಜಮೀನನ್ನು ಕೊಟ್ಟರೆ ಸಾಲದು ಅದಕ್ಕೆ ಬೇಕಾದ ನೆರವನ್ನು ಕೊಟ್ಟರೆ ಪ್ರಾರಂಭದಲ್ಲಿ ವ್ಯವಸಾಯ ಮಾಡಬಹುದೇ ಹೊರತು, ವ್ಯವಸಾಯದ ಕಸಬನ್ನೆ ಅವಲಂಬಿಸಿರತಕ್ಕವರು 50—100 ಎಕರೆಗಳಿದ್ದ ಪಕ್ಷದಲ್ಲಿ ಸುಲಭವಾಗಿ ಹೆಚ್ಚು ಆಹಾರ ಉತ್ಪಾದನೆ ಮಾಡಬಲ್ಲರು. ಹೊಸದಾಗಿ ಜಮೀನನ್ನು ಕೊಟ್ಟು ಜನರಿಂದ ಅಷ್ಟುಮಟ್ಟಿಗೆ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ ಎಂಬುದನ್ನು ಖಂಡಿತವಾಗಿಯೂ ತಾವು ತಿಳಿದುಕೊಳ್ಳಬೇಕು. ಆದ್ದರಿಂದ ಭೂಮಿಯನ್ನು ಬಹಳ ಚಿಕ್ಕಚಿಕ್ಕದಾಗಿ ಒಂದು ಎಕರೆ ಎರಡು ಎಕರೆಯಂತೆ ಹಂಚಿಕೆ ಮಾಡುವುದರಿಂದ ಹೆಚ್ಚು ಆಹಾರದ ಉತ್ಪನ್ನವಾಗುವುದಿಲ್ಲ. ಒಂದು ಪೇಳೆ ಆ ರೀತಿ ಮಾಡಬೇಕೆಂದು ಇದ್ದರೆ ಈ ದೇಶದ ಆಡಳಿತದ ಪರಿಸ್ಥಿತಿಯೇ ಬದಲಾಗಬೇಕು, ಆಗ ಮಾಡಬಹುದೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ ವ್ಯವಸಾಯ ಮಾಡತಕ್ಕವನಿಗೆ ಯಾವ ರೀತಿ ಒಂದು ಸ್ಟಾಂಡರ್ಡ್ ಏಕರ್ ಎಂದು ಮಾಡುತ್ತ ಇದ್ದೀರೋ ಅದೇ ರೀತಿ ಪಟ್ಟಣಗಳಲ್ಲಿ ವಾಸ ಮಾಡತಕ್ಕ ಮನೆಗಳನ್ನು ಕಟ್ಟಿಕೊಂಡಿರತಕ್ಕವರಿಗೆ ಮತ್ತು ಬ್ಯಾಂಕುಗಳಲ್ಲಿ ಷೇರುಗಳನ್ನು ಹಾಕಿಕೊಂಡಿರತಕ್ಕವರಿಗೂ ಒಂದು ನಿಗದಿಯನ್ನು ಹಾಕದೇ ಹೋದರೆ ಸರಿಯಾಗುವುದಿಲ್ಲ. ಅವರನ್ನು ಬಿಟ್ಟು ರೈತನ ಮೇಲೆ ಮಾತ್ರ ಏಕೆ ಕಣ್ಣು ಹಾಕುತ್ತಾ ಇದ್ದೀರಿ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಅಂಥ ಒಂದು ಪ್ರಭುತ್ವ ದೇಶದಲ್ಲಿ ಜಾರಿಗೆ ಬರಬಹುದು, ಅಂತಹವರ ಮೇಲೆ ಕಣ್ಣು ಬಿಟ್ಟು ನೋಡಬಹುದು. ಬಡ ರೈತ ಎಷ್ಟು ಕಂದಾಯ ಹಾಕಿದರೂ ಕೊಡುತ್ತಾನೆ, ಎಷ್ಟು ಸಾರಿ ತಾಲ್ಲೂಕು ಆಫೀಸಿಗೆ ಅಡ್ಡಾಡು ಎಂದರೂ ಅಡ್ಡಾಡುತ್ತಾನೆ. ಇಂತಹ ಜನಗಳ ವಿಷಯದಲ್ಲಿ ಹೆಚ್ಚಿನ ನಿಗಾ ಕೊಡುವುದು ಅಗತ್ಯ ಎಂದು ನಾನು ತಿಳಿದುಕೊಂಡಿದ್ದೇನೆ.

ಮತ್ತು ನಮ್ಮ ಸರ್ಕಾರದವರು ಈ ತಿದ್ದುಪಡಿಯನ್ನು ಮಾಡುವಾಗ ಯುದ್ಧಕ್ಕೆ ಹೋದವರು, ಎಂದರೆ, ಹಡಗಿನ ಸೈನ್ಯದಲ್ಲಿ, ಭೂಸೈನ್ಯದಲ್ಲಿ ಅಥವಾ ವಾಯುಸೈನ್ಯದಲ್ಲಿ, ಕೆಲಸ ಮಾಡುತ್ತಾ ಇರುವವರಿಗೆ ಅಲ್ಲದೇ ವಿಧವೆಯರಿಗೆ ಅನುಕೂಲ ಮಾಡಬೇಕೆಂದು ಹೇಳಿದ್ದಾರೆ. ದೇಶದ ರಕ್ಷಣೆಯ ದೃಷ್ಟಿಯಿಂದ ಮತ್ತು ಶ್ರಮಜೀವಿಗಳ ದೃಷ್ಟಿಯಿಂದ ಇದು ಸ್ವಾಗತಾರ್ಹ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಎಲ್ಲಾ ಜಮೀನುಗಳಿಗೆ ರಿಯಾಯಿತಿಯನ್ನು ಕೊಟ್ಟು ಉಪಕಾರ ಮಾಡಿದ್ದಾರೆ. ಆದರೆ ಅಡಿಕೆ, ತೆಂಗಿನ ಬಗ್ಗೆ ಸರ್ಕಾರದವರು ಯಾವುದೇ ರಿಯಾಯಿತಿಯನ್ನೂ ತೋರಿಸಿಲ್ಲ ಎಂಬ ಮಾತನ್ನು ಈ ಶಾಸನ ಸಭೆಯಲ್ಲಿ ಕೇಳುತ್ತಾ ಇದ್ದೇವೆ. ಅಡಕೆ, ತೆಂಗು ಬಹಳ ಕಷ್ಟಪಟ್ಟು ಬೆಳೆಯತಕ್ಕ ಬೆಳೆ. 15-20 ವರ್ಷ ವ್ಯವಸಾಯ ಮಾಡಿದ ರೈತ, ತಾನೇ ಖುದ್ದು ವ್ಯವಸಾಯ ಮಾಡಿ ಆ ಬೆಳೆಯನ್ನು ಪಡೆಯುತ್ತಾ ಇದ್ದಾನೆ. ಅಡಕೆ, ತೆಂಗು ಬೆಳೆಯತಕ್ಕ ಜಮೀನಿನ ವಿಸ್ತಾರ ಎಷ್ಟು ಎಕರೆ ಇರಬೇಕೆಂಬುದು ನಿಖರವಾಗಿ ಇನ್ನೂ ಗೊತ್ತಾಗಿಲ್ಲ, ಇದರ ಬಗ್ಗೆ ರಿಯಾಯಿತಿ ತೋರಿಸಿದರೆ ಒಳ್ಳೆಯದಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮಾಜಿ ಮಂತ್ರಿಗಳಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಅಡಕೆ ತೆಂಗಿನ ಮೇಲೆ ಹೆಚ್ಚು ಪರಿಣಾಮವಾಗಲಾರದು ಎಂದು ಹೇಳಿದರು.

(ಶ್ರೀಮತಿ ಬಿ. ಎರ್. ಸುಬ್ಬಮ್ಮ)

ಸ್ಟ್ಯಾಂಡರ್ಡ್ ಏಕರ್ ಇಷ್ಟೇ ಎಂದು ಗೊತ್ತಾದರೆ ಆಗ ಹೆಚ್ಚಿನ ವ್ಯವಸಾಯ ಮಾಡತಕ್ಕ ಮನೋವೃತ್ತಿ ಇರತಕ್ಕ ರೈತನ ಮೇಲೆ ಇದರ ಪರಿಣಾಮವಾಗುತ್ತದೆ. ಆ ರೀತಿ ಆದರೆ ಸರ್ಕಾರದವರ ಉದ್ದೇಶ ಸಾಧನೆಯಾಗುತ್ತದೆಯೇ ಎಂಬುದನ್ನು ನೋಡಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಭೂ ಸುಧಾರಣೆಯನ್ನು ಮಾಡಿದಿರಿ, ಇದರಿಂದ ನಿಜವಾಗಿಯೂ ಅನುಕೂಲವಾಗುತ್ತದೆ ಎಂದು ಭಾವಿಸಿದ್ದ ಜನಕ್ಕೆ ಬೇಸರವಾಗಿದೆ. ಆದ್ದರಿಂದ ಈ ಕಾನೂನಿನಲ್ಲಿ ಏನು ಅನಾನುಕೂಲವಿದೆ ಎಂಬುದನ್ನು ಯೋಚನೆ ಮಾಡಿ ಇದನ್ನು ಜಾರಿಗೆ ತರುವುದು ಬಹಳ ಅವಶ್ಯಕ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಸಕ್ಕರೆ ಕಂಪೆನಿಗಳಿಗೆ ರಿಯಾಯಿತಿ ಕೊಡಬೇಕೆಂದು ಹೇಳಿದ್ದೀರಿ, ದೊಡ್ಡ ದೊಡ್ಡ ಸಕ್ಕರೆ ಕಂಪೆನಿಗಳು ಇರುವಾಗ ಒಂದು ಎರಡು ಎಕರೆಗಳನ್ನು ನಿಗದಿ ಮಾಡಿದರೆ ಅವರಿಗೆ ಪ್ರಯೋಜನವಾಗುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಈ ಭೂ ಸುಧಾರಣೆ ತಿದ್ದುಪಡಿ ಮಸೂದೆ ಬಂದಿವೆ. ಈ ತಿದ್ದುಪಡಿಯಿಂದ ನಿಜವಾಗಿಯೂ ಇಷ್ಟು ವರ್ಷಗಳಿಂದಲೂ ವ್ಯವಸಾಯವನ್ನು ಮಾಡಿಕೊಂಡು ಬಂದಿರತಕ್ಕ ರೈತರ ಎಂದರೆ ಭೂ ಮಾಲೀಕರಾಗಿರಲಿ, ಕಾಫಿ ವ್ಯವಸಾಯ ಮಾಡುವವರಾಗಿರಲಿ ಯಾರೇ ಆಗಲಿ ಎಲ್ಲರ ಹಿತದೃಷ್ಟಿಯಿಂದಲೂ ಅವರವರ ಹಿತವನ್ನು ಕಾಪಾಡಬೇಕಾಗಿದೆ. ಒಂದು ಭಾಗದವರಿಗೆ ತೊಂದರೆ ಕೊಟ್ಟು ಇನ್ನೊಂದು ಭಾಗದವರಿಗೆ ಸುಖವನ್ನುಂಟುಮಾಡುವುದು ಸರಿಯಾದ ನೀತಿಯಲ್ಲ, ಆ ನೀತಿ ಕಾರ್ಯಗತವಾಗುವುದಿಲ್ಲ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ),—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರುವ ಭೂಸುಧಾರಣಾ ವಿಧೇಯಕದ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತ ಈ ಸನ್ನಿವೇಶದಲ್ಲಿ ನನಗೆ ತಿಳಿದ ಒಂದೆರಡು ಸಲಹೆಗಳನ್ನು ಹೇಳಬಯಸುತ್ತೇನೆ. ಈ ಭೂಸುಧಾರಣಾ ವಿಧೇಯಕ ಜಾರಿಗೆ ಬರಬೇಕು ಎಂದು ಬಹಳ ದಿವಸಗಳಿಂದ ನಮ್ಮ ಕಾಂಗ್ರೆಸ್ ಸಂಸ್ಥೆಯವರು ಆಸೆಯನ್ನು ಇಟ್ಟುಕೊಂಡಿದ್ದರು. ಅದನ್ನು ಇವತ್ತು ನೆರವೇರಿಸುವುದಕ್ಕೆ ಈ ಸಭೆ ಚರ್ಚೆಮಾಡುತ್ತಿದೆ. ಅನೇಕ ಕಾರಣಗಳಿಂದ ಇದು ಜಾರಿಗೆ ಬರುವುದಕ್ಕೆ ತಡವಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುವುದಾದರೂ ಕೂಡ ನಾವು ಈಗ ಪರಿಶೀಲನೆ ಮಾಡುವಾಗ ಯಾವ ಒಂದು ನೀತಿಯನ್ನು ಇಟ್ಟುಕೊಂಡು ಈ ಕಾನೂನನ್ನು ತರಬೇಕು ಮತ್ತು ಭೂ ಮಾಲೀಕತ್ವವನ್ನು ಉಳುವವನಿಗೇ ಕೊಡಬೇಕು ಎನ್ನುವ ಆಸೆಯನ್ನು ನೆರವೇರಿಸಬೇಕೆನ್ನುವ ಧ್ಯೇಯವನ್ನು ಇಟ್ಟುಕೊಂಡಿದ್ದೇವೆಯೋ ಅದು ಈ ವಿಧೇಯಕದಿಂದ ಆಗುತ್ತದೆಯೋ ಇಲ್ಲವೋ ಎನ್ನುವುದನ್ನು ವಿಚಾರ ಮಾಡತಕ್ಕದ್ದು ಬಹಳ ಆವಶ್ಯಕವಿದೆ. ಈ ಒಂದು ತಿದ್ದುಪಡಿಯಲ್ಲಿ ನಾವು ನೋಡುವುದಾದರೆ 1961ನೇ ಭೂಸುಧಾರಣಾ ವಿಧೇಯಕಕ್ಕೆ ಕೆಲವು ತಿದ್ದುಪಡಿಗಳನ್ನು ತರುವುದರಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಇದರಲ್ಲಿ ತೋರಿಸುವುದಕ್ಕೆ ಹೊರಟಂತಾಗಿದೆ. 1961ನೇ ವಿಧೇಯಕವನ್ನು ನೋಡುವುದಾದರೆ, ಈ ಭೂ ಸುಧಾರಣೆಯನ್ನು ತಂದು, ಉಳುವವನಿಗೆ ಜಮೀನು ಕೊಡಬೇಕು, ಅವನು ಜಮೀನು ತನ್ನದೇ ಎಂದು ಭಾವಿಸಿ ಹೆಚ್ಚಿನ ಮಟ್ಟದಲ್ಲಿ ಆಸಕ್ತಿಯನ್ನು ವಹಿಸಿ ತನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದರ ಜೊತೆಗೆ ದೇಶದ ಅನ್ನ ಪರಿಸ್ಥಿತಿಯನ್ನೂ ಉತ್ತಮಪಡಿಸುವುದಕ್ಕೆ ಅವಕಾಶವಾಗಬೇಕು ಎನ್ನುವ ಉದ್ದೇಶ ನಮ್ಮಲ್ಲಿತ್ತು. ಅದನ್ನು ಸಾಧಿಸಬೇಕಾದರೆ ಸಾಕಷ್ಟು ಪ್ರಮಾಣದಲ್ಲಿ ಹಂಚುವುದಕ್ಕೆ ನಮ್ಮಲ್ಲಿ ಭೂಮಿ ಇದೆಯೇ, ಈ ರೀತಿಯಲ್ಲಿ ವಿನಾಯಿತಿಗಳನ್ನು ಕೊಡುವುದು ನ್ಯಾಯವಾದುದೇ ಎನ್ನುವುದನ್ನು ಯೋಚನೆ ಮಾಡಬೇಕು. ಲ್ಯಾಂಡ್ ಲಾಸ್ ಕಮಿಟಿಯವರು ಸ್ಥೂಲವಾಗಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ದೇಶದಲ್ಲಿ 71·2 ಭಾಗ ಜನರು ವ್ಯವಸಾಯದ ಮೇಲೆ ಜೀವನವನ್ನು ನಡೆಸಿಕೊಂಡಿರತಕ್ಕ ಜನರಿದ್ದಾರೆ; ಅದರಲ್ಲಿ 47.6 ಭಾಗ ಓನರ್ ಕಲ್ಟಿವೇಟರ್ಸ್, 9·3 ಭಾಗ ಟೆನೆಂಟ್ ಕಲ್ಟಿವೇಟರ್ಸ್, 10.9 ಭಾಗ ವ್ಯವಸಾಯದ ಕಾರ್ಮಿಕರು, 3.4 ಭಾಗ ರೆಂಟ್ ರಿಸೀವರ್ಸ್ ಎಂದು 1951ನೆ ಇಸವಿಯಲ್ಲಿಯೇ ಹೇಳಿದ್ದಾರೆ. ಅಲ್ಲಿಂದ ನಾವು ಈ ಕಾನೂನನ್ನು ತರುವುದಕ್ಕೆ ಪ್ರಯತ್ನ ಪಡುವಾಗ ಎಷ್ಟು ಜನ owner cultivators ಆಗುವುದಕ್ಕೆ ಪ್ರಯತ್ನ ಪಟ್ಟರು ಎಂದು ಯೋಚನೆ ಮಾಡಿದರೆ ನಾವು ಇವತ್ತು ಈ ಕಾನೂನನ್ನು ಜಾರಿಗೆ ತಂದ ತಕ್ಷಣ ಎಷ್ಟು ಅದರಿಂದ ಉಪಯೋಗವಾಗಬಹುದು ಎನ್ನುವ ಉದ್ದೇಶವಿತ್ತೋ ಅದು ಆಗಲಾರದು ಎಂದು ನಾನು ಶಂಕಿಸುತ್ತೇನೆ. ಇದಕ್ಕೆ ಅನೇಕ ಅವಕಾಶಗಳನ್ನು ಕೊಟ್ಟಿದ್ದರಲ್ಲಿ ಮೊದಲನೆಯದಾಗಿ ನನ್ನ ಆಕ್ಷೇಪಣೆ ಇರತಕ್ಕದ್ದು ಕಾಫಿ ಪ್ಲಾಂಟೇಷನಗಳಿಗೆ ಈಗ ಇರತಕ್ಕ ವಿಸ್ತೀರ್ಣದ ಜೊತೆಗೆ ಮುಂದೆ ಬೇಕಾದಷ್ಟು ವಿಸ್ತೀರ್ಣವನ್ನು ಮಾಡಿಕೊಳ್ಳಬಹುದು ಎನ್ನುವ ವಿನಾಯಿತಿಯನ್ನು ತೋರಿಸುವುದಕ್ಕೆ. ಈಗ ಇರತಕ್ಕದ್ದೇ ಜಾಸ್ತಿ. ಇದರ ಜೊತೆಗೆ ಇನ್ನು ಮುಂದೆ ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರೆ ಹೊಸದಾಗಿ ಕಾಫಿ ಪ್ಲಾಂಟೇಷನ್ ಬೇರೆಯವರಿಗೆ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಈ ಬಗ್ಗೆ ಕೆಲವರ ವಾದ ಏನಿದೆ ಎಂದರೆ, ಈ ಉದ್ಯಮ ಬಹಳ ಕಷ್ಟದಾಯಕವಾದುದು, ಫಾರಿನ್ ಎಕ್ಸ್‌ಛೇಂಜ್‌ಗಳಿಸತಕ್ಕ ಬೆಳೆ, ಇದನ್ನು ಬೆಳೆಯ

ವುದಕ್ಕೆ ಹಣ ಹೇರಳವಾಗಿರಬೇಕು ಎಂದು. ಈಗಾಗಲೇ ಈ ಉದ್ಯಮವನ್ನು ಹೊಂದಿರುವವರು ಕೆಲಸ ಮಾಡುತ್ತಿದ್ದಾರೆ. ಹೊಸದಾಗಿ ಅದಕ್ಕೆ ಬರುವವರಿಗೆ ಪ್ರೋತ್ಸಾಹ ಕೊಡಬೇಕು. ನಮ್ಮ ದೇಶದಲ್ಲಿ ಎಲ್ಲರಿಗೂ ಸಮಾನಾವಕಾಶ ದೊರಕಬೇಕಾಗಿದೆ. ಆದ್ದರಿಂದ ಕಾಫಿ ತೋಟಗಳಿಗೆ ಒಂದು ಮಿತಿ ಇಲ್ಲದೆ ಇದ್ದರೆ ಹೊಸಬರು ಬರುವುದಕ್ಕೆ ಅವಕಾಶವಾಗುವುದಿಲ್ಲ. 1961ನೇ ಕಾನೂನಿನಲ್ಲಿ 100 ಎಕರೆವರೆಗೆ ಹೊಂದಿರುವುದಕ್ಕೆ ಅವಕಾಶವಿತ್ತು. ಆದರೆ ನಮ್ಮ ಮುಂದೆ ಬಂದಿರುವ ತಿದ್ದುಪಡಿಯಲ್ಲಿ ಅನಿರ್ಬಂಧವಾಗಿ ಎಷ್ಟು ಪ್ರದೇಶ ಬೇಕಾದರೂ ಹೊಂದಿರಬಹುದು ಎಂದು ಸೂಚಿಸಿದ್ದಾರೆ. ಇದನ್ನು ಸರ್ಕಾರದವರು ಪುನಃ ಪರ್ಯಾಲೋಚಿಸಿ ಮೊದಲದ್ದಂತೆ ನಿರ್ಬಂಧ ಇರಬೇಕು, ಆ ರೀತಿಯಾಗಿ ಮಾಡಬೇಕು ಎಂದು ಸೂಚಿಸುತ್ತೇನೆ.

ಹಣ್ಣಿನ ತೋಟಗಳಿಗೆ ವಿನಾಯಿತಿಯನ್ನು ಕೊಟ್ಟಿದ್ದಾರೆ. ಅಡಕೆ ಮತ್ತು ತೆಂಗಿನ ತೋಟಗಳಿಗೆ ವಿನಾಯಿತಿಯನ್ನು ಕೊಟ್ಟಿಲ್ಲ. ಕೆಲವರು ಈ ಎರಡು ತರಹ ತೋಟಗಳಿಗೂ ವಿನಾಯಿತಿಬೇಕು ಎಂದು ಕೇಳುತ್ತಿದ್ದಾರೆ. ಆದರೆ ನಾನು ವಿನಾಯಿತಿಬೇಕು ಎಂದು ಕೇಳುವುದಿಲ್ಲ. ಅದು ಸಾಧುವಾದುದಲ್ಲ. ಅಡಕೆ ತೋಟವಾಗಲೀ, ತೆಂಗಿನ ತೋಟವಾಗಲೀ ಕಾನೂನಿನಲ್ಲಿ ವಿಧಿಸಿರುವ ಸೀಲಿಂಗ್ ಲಿಮಿಟ್ ಏನಿದೆ ಅದು ಸಾಕಷ್ಟು ಇರುತ್ತದೆ. ಅದರಲ್ಲಿಯೂ ನಮ್ಮ ದೇಶದಲ್ಲಿ ಭೂಮಿಯ ಮೇಲೆಯೇ ಆಶ್ರಯಿಸಿರತಕ್ಕ ಭೂಹೀನರಿಗೆ ಸಾಕಷ್ಟು ಭೂಮಿಯನ್ನು ಹಂಚುವುದಕ್ಕೆ ಅವಕಾಶವಿಲ್ಲದೆ ಇರುವ ಈ ಸನ್ನಿವೇಶದಲ್ಲಿ ವಿನಾಯಿತಿಯನ್ನು ತೋರಿಸುವುದಕ್ಕೆ ಹೋಗದೆ ಆದಷ್ಟೂ ವಿನಾಯಿತಿಯನ್ನು ಕಡಮೆ ಮಾಡಬೇಕೆಂದು ಹೇಳುತ್ತೇನೆ.

ಸಕ್ಕರೆ ಕಾರ್ಖಾನೆಗಳಿಗೆ ವಿನಾಯಿತಿಯನ್ನು ಕೊಟ್ಟು ಅವರು ಸಾವಿರಾರು ಎಕರೆ ಜಮೀನನ್ನು ಹೊಂದಿರುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ಕಾರ್ಖಾನೆಯವರಿಗೆ ಅವರದೇ ಆದ ಜಮೀನು ಇರಬೇಕು; ಅವರಿಗೆ ಜಮೀನು ಇದ್ದರೆ ಮಾತ್ರ ಕಾರ್ಖಾನೆಯನ್ನು ನಡೆಸಬಹುದು ಎಂದು ತಿಳಿದು ಕೊಂಡಿರುವ ಹಾಗೆ ಕಾಣುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಮೊನ್ನೆಯ ದಿನ ಪತ್ರಿಕೆಗಳಲ್ಲಿ ಓದುವಾಗ ಅಲ್ಲಿ ಏನು ಪರಿಸ್ಥಿತಿ ಇದೆ ಎಂದು ತಿಳಿದುಕೊಂಡೆ. ಕಾರ್ಖಾನೆಗಳಿಗೆ ಕೊಟ್ಟಿರತಕ್ಕ ಜಮೀನಿನಲ್ಲಿ ಬೆಳೆದಂಥ ಕಬ್ಬನ್ನು ಅವರು ಉಪಯೋಗಿಸಿಕೊಳ್ಳುತ್ತಾರೆ ರೈತರು ಹೋಗಿ ಕೇಳಿದಾಗ ರೈತರು ಕಬ್ಬನ್ನು ತೆಗೆದುಕೊಳ್ಳುವುದಕ್ಕೆ ಇಷ್ಟ ಪಡದೆ, ರೈತರಿಗೆ ಪ್ರೋತ್ಸಾಹ ಸಿಕ್ಕದೆ ತೊಂದರೆಯಾಗುತ್ತಿದೆ. ಯಾವ ಉದ್ದೇಶಕ್ಕಾಗಿ ರೈತನಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವುದಕ್ಕಾಗಿ ಕಾನೂನು ಮಾಡುತ್ತಿದ್ದೇವೆಯೋ ಅದರಿಂದಲೇ ರೈತನಿಗೆ ಅನ್ಯಾಯವಾಗುತ್ತದೆ ಎನ್ನುವುದನ್ನು ನಾವು ಕಾಣುತ್ತಿದ್ದೇವೆ. ಲ್ಯಾಂಡ ಲಾಸ್ ಕಮಿಷನ್ ಅವರು ಸಹ ತಮ್ಮ ವರದಿಯಲ್ಲಿ ಕಾರ್ಖಾನೆಗೆ ಕಬ್ಬನ್ನು ಒದಗಿಸಲು ಬೇಕಾಗುವಷ್ಟು ಜಮೀನಿನಲ್ಲಿ ಅರನೇ ಒಂದು ಭಾಗ ಕಾರ್ಖಾನೆ ಹೊಂದಿರಬೇಕು ಎಂದು ಹೇಳುತ್ತಾರೆ. ಆದರೆ ಹೆಚ್ಚಿಗೆ ಜಮೀನು ಕೊಡುವುದರಿಂದ ಬಹಳ ಅನಾನುಕೂಲವಾಗುತ್ತದೆ. ಅವರು ಡೆಮಾನ್‌ಸ್ಟ್ರೇಷನ್ ಪ್ಲಾಟುಗಳನ್ನು ಮಾಡುವುದಕ್ಕೆ, ಕಬ್ಬನ್ನು ಬೆಳೆದು ಪ್ರಯೋಗ ಮಾಡುವುದಕ್ಕೆ ಎಷ್ಟು ಭೂಮಿ ಬೇಕೋ ಅಷ್ಟನ್ನು ಮಾತ್ರ ಕೊಡಬಹುದು. ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಜಮೀನು ಕಾರ್ಖಾನೆಗಳಿಗೆ ಇದ್ದರೆ ರೈತರಿಗೆ ಕಬ್ಬು ಬೆಳೆಯುವುದಕ್ಕೆ ಪ್ರೋತ್ಸಾಹ ಸಿಕ್ಕುವುದಿಲ್ಲ. ರೈತರು ಬೆಳೆಯುವ ಕಬ್ಬಿಗೆ ಸರಿಯಾದ ಬೆಲೆ ಸಿಕ್ಕದೆ ತೊಂದರೆಯಾಗ ಬಹುದು ಎಂದು ಕಮಿಷನ್ ಅವರು ಹೇಳಿದ್ದಾರೆ. ನಮ್ಮ ಅನುಭವದಲ್ಲಿ ಕೂಡ ಸಕ್ಕರೆ ಕಾರ್ಖಾನೆ ಗಳಿಗೆ ಹೆಚ್ಚು ಜಮೀನು ಕೊಟ್ಟಿರುವುದರಿಂದ ರೈತ ತನ್ನ ಜಮೀನಿನಲ್ಲಿ ಬೆಳೆಯುವುದಕ್ಕೆ ಸರಿಯಾದ ಕಾಲದಲ್ಲಿ ಬೆಳೆಯನ್ನು ಪಡೆಯುತ್ತಿಲ್ಲ. ಇಂಥ ಮಿತಿಯನ್ನು ಕಡಮೆ ಮಾಡುವುದರಿಂದ ರೈತನಿಗೆ ಹೆಚ್ಚಿಗೆ ಸಿಕ್ಕುವುದಕ್ಕೆ ಅವಕಾಶವಾಗುತ್ತದೆ. ಕಾರ್ಖಾನೆಗಳಿಗೆ ಕೊಟ್ಟಿರುವ ವಿನಾಯಿತಿ ನ್ಯಾಯವಾದುದಲ್ಲ, ಅದನ್ನು ತೆಗೆದು ಹಾಕಿ ಕಾರ್ಖಾನೆಗಳವರಿಗೂ ಸಹ ಮಿತಿಯನ್ನು ಅನ್ವಯಿಸುವಂತೆ ಕಾನೂನನ್ನು ತರಬೇಕು ಎಂದು ಹೇಳುತ್ತೇನೆ. ಹೋದ ವರ್ಷ ಬೆಲ್ಲದ ಬೆಲೆ ಜಾಸ್ತಿಯಾಗಿ, ಕಬ್ಬಿನಿಂದ ಬೆಲ್ಲವನ್ನು ರೈತರು ಮಾಡಿಕೊಳ್ಳುವುದಕ್ಕೆ ಹೊರಟಾಗ ಸರ್ಕಾರ ಒಂದು ಕಾನೂನು ತಂದು ಸಕ್ಕರೆ ಕಾರ್ಖಾನೆಗೆ ಇಷ್ಟು ಕಬ್ಬನ್ನು ಕೊಡಲೇ ಬೇಕು ಎಂದು ಮಾಡಿದರು. ಸರ್ಕಾರಕ್ಕೆ ಇಂಥ ಅಧಿಕಾರವಿರುವಾಗ ರೈತರು ಕಾರ್ಖಾನೆಗಳಿಗೆ ಕಬ್ಬನ್ನು ಒದಗಿಸುವುದರಲ್ಲಿ ತೊಂದರೆ ಆಗುತ್ತದೆ ಎನ್ನುವುದಕ್ಕೆ ಅವಕಾಶವಿಲ್ಲ. ಸಕ್ಕರೆ ಕಾರ್ಖಾನೆಗಳವರಿಗೆ ಭೂ ಮಾಲೀಕತ್ವ ಕೊಡತಕ್ಕದ್ದು ಸರಿಯಲ್ಲ. ಇದರಿಂದ ಭೂಹೀನರಿಗೆ ಇರತಕ್ಕ ಜಮೀನೂ ಸಿಕ್ಕದೆ ಇರುವ ಸನ್ನಿವೇಶ ಇರುವುದರಿಂದ ಇಂಥದ್ದಕ್ಕೆ ವಿನಾಯಿತಿ ಕೊಡುವುದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮುಜರಾಯಿ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಮೈಸೂರಿನಲ್ಲಿರತಕ್ಕ ಜಮೀನುಗಳನ್ನು ಸರ್ಕಾರ ತೆಗೆದುಕೊಂಡು ರೈತರಿಗೆ ಕೊಡದೆ ಇರತಕ್ಕ ತಿದ್ದುಪಡಿ ನಮ್ಮ ಮುಂದೆ ಬಂದಿದೆ. ಅದಕ್ಕೆ ಮಾನ್ಯ ಸರ್ಕಾರದವರು ಕೆಲವೊಂದು ತಿದ್ದುಪಡಿ ತಂದು ಕೆಲವೊಂದು ದೇವಸ್ಥಾನಗಳಿಗೆ ಮಾಡಿದ್ದಾರೆ ಎಂದು ತಿಳಿದುಬಂದಿದೆ.

(ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ)

ನಮ್ಮ ಹಳೇಯ ಮೈಸೂರಿನಲ್ಲಿ ಈ ರೀತಿ ಇದ್ದರೆ, ಹೊಸ ಮೈಸೂರಿನಲ್ಲಿಯೂ ಅನೇಕ ದೇವಸ್ಥಾನಗಳು ಇವೆ. ಇದರಲ್ಲಿ ಸಣ್ಣ ಸಣ್ಣ ಹಿಡುವಳಿದಾರರು ಪೂಜಾರಿಗಳಿಗೆ, ಎಣ್ಣೆ ಹಾಕುವವರಿಗೆ, ಅಲ್ಲಿ ಸಣ್ಣ ಪುಟ್ಟ ಕೆಲಸಮಾಡುವವರಿಗೆ ತಮ್ಮ ಜಮೀನಿನ ಪೈಕಿ 30–40–50 ಎಕರೆಗಳನ್ನು ಕೊಟ್ಟಿದ್ದಾರೆ. ಅವರು ಅದರ ಉಪಯೋಗವನ್ನು ಹೊಂದಿ ಅಲ್ಲ ಸೇವೆಸಲ್ಲಿಸುತ್ತಿದ್ದಾರೆ. ಅಲ್ಲಿರುವ ರೈತರಿಗೆ ಆ ಹಕ್ಕನ್ನು ಕೊಡದೇ ಇದ್ದರೆ ಅಲ್ಲಿನ ರೈತರನ್ನು ಕಾನೂನಿಗೆ ಒಳಪಡಿಸಿದರೆ ಅವರಿಗೆ ಅನ್ಯಾಯಮಾಡಿದಂತಾಗುತ್ತದೆ. ಅದಕ್ಕಾಗಿ ಅಂತಹ ಎಲ್ಲಾ ಸ್ಥಳಗಳಲ್ಲಿ ಪೂಜಾರಿಗಳಿಗೆ, ಇತರ ಸಿಬ್ಬಂದಿವರ್ಗದವರನ್ನು ಬಿಟ್ಟು ರೈತರ ಜಮೀನಿನಲ್ಲಿ ಯಾರು ಭೂಮಿ ಉಳುತ್ತಾರೋ ಅವರಿಗೆ ಈ ಹಕ್ಕಿನ ಅವಕಾಶವಾಗಬೇಕು. ಸೇವೆ ಸಲ್ಲಿಸುವವರಿಗೆ ಅದರ ಉತ್ಪನ್ನವನ್ನು ಹಾಗೂ ನಿಗದಿಯಾದ ಸಂಬಳವನ್ನು ಅವರಿಗೆ ಕೊಡುವುದಕ್ಕೆ ಅನುಕೂಲವಾಗುತ್ತದೆ. ಇಂತಹ ವ್ಯವಸ್ಥೆಯನ್ನು ಮಾಡಿ ನಮ್ಮ ಭೂಹೀನರಿಗೆ ಹೆಚ್ಚಿನಮಟ್ಟದಲ್ಲಿ ಭೂಮಿ ಸಿಗುವಂತೆ ಮಾಡಬೇಕು. ಅದನ್ನು ಟ್ರಿಬ್ಯೂನಲ್ ನಿರ್ಧರಿಸಬೇಕು. ಜಮೀನುಗಳ ಬಗ್ಗೆ ಅಕ್ಯುಪೆನ್ಸಿ ರೈಟ್ಸ್ ಕೊಡಬೇಕೆಂದು ಕಾನೂನಿನಲ್ಲಿರುವುದರಿಂದ ನಮ್ಮ ಅನುಭವದಲ್ಲಿ ತೊಂದರೆಯಾಗಿರುವುದನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇನಾಂ ಅಬಾಲಿಷನ್ ಆಕ್ಟ್ ಬಂತು. ಸುಮಾರು 7-8-10 ವರ್ಷಗಳಾದರೂ ಕೂಡ ಇವತ್ತು ಅದಕ್ಕಾಗಿ ನೇಮಿಸಿರತಕ್ಕ ಅಧಿಕಾರಿಗಳು ಅಲ್ಲಿರತಕ್ಕ ಅರ್ಜಿಗಳನ್ನು ಇನ್ನೂ ಇತ್ಯರ್ಥಮಾಡಲಿಲ್ಲ. ನಾಳೆಯೂ ಅದೇ ಸನ್ನಿವೇಶ ಬರುತ್ತದೆ. ಅಕ್ಯುಪೆನ್ಸಿ ರೈಟ್ಸನ್ನು ಟ್ರಿಬ್ಯೂನಲ್ ತೀರ್ಮಾನ ಮಾಡಿದರೆ ಇನ್ನು 10 ವರ್ಷಗಳಾದರೂ ಇದರಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕಾಗುವುದಿಲ್ಲ. ಹೀಗಾಗದಂತೆ ಟ್ರಿಬ್ಯೂನಲ್ ಅವರಿಗೆ ನ್ಯಾಯ ಖಾತೆ ಇಷ್ಟೇ ಕಾಲದಲ್ಲಿ ತೀರ್ಮಾನ ಮಾಡಬೇಕೆಂಬ ನಿರ್ಬಂಧವಿಡಬೇಕು. ಅದನ್ನು ಮಾಡುವ ವ್ಯವಸ್ಥೆ ಬಹಳ ನಿರ್ದಿಷ್ಟವಾಗಿ ಗೊತ್ತುಪಡಿಸಿ ಕಾರ್ಯಗತ ಮಾಡಬೇಕು. ಕೊನೆಯದಾಗಿ, ಈ ಕಾನೂನಿನ ಉಪಯೋಗ ಎಲ್ಲರಿಗೂ ತಕ್ಷಣ ಆಗುವಂತೆ ವ್ಯವಸ್ಥೆಯಾಗಬೇಕೆಂದು ಈ ಸನ್ನಿವೇಶದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್.—ಸ್ವಾಮಿ, ಸರ್ಕಾರ ಈ ದಿನ ಅನುಸರಿಸಿಕೊಂಡು ಹೋಗುತ್ತಿರುವ ದಾರಿ ನಿಜವಾಗಿ ಅತಿ ತೀವ್ರವಾದ ಕಳವಳಕ್ಕೆ ಕಾರಣವಾಗಿದೆಯೆಂದು ಹೇಳಬಯಸುತ್ತೇನೆ. ಏಕೆಂದರೆ, ಈ ಪ್ರಪಂಚದಲ್ಲಿ ಮನುಷ್ಯನಲ್ಲಿರುವ ನಡವಳಿಕೆ ದೃಷ್ಟಿಯಿಂದ ನೋಡುವುದಾದರೆ, ಸಮಾಜದಲ್ಲಿ ನ್ಯಾಯ ಅಥವಾ ನೀತಿ ಯಾವುದೂ ಇಲ್ಲವೆಂದು ನನಗನ್ನಿಸುತ್ತದೆ. ಇದಕ್ಕೆ ಒಂದು ಕಾರಣವಿದೆ. ಕಾಫಿಗೆ ಮೊದಲು ಅಷ್ಟೋ ಇಷ್ಟೋ ಸೀಲಿಂಗ್ ಇತ್ತು. ಅದನ್ನು ತೆಗೆದು ಹಾಕಿದರು. ಜೊತೆಗೆ ಪ್ಲಾಂಟರ್ಸ್ ಗದ್ದೆಗಳನ್ನು ಎಷ್ಟಾದರೂ ಇಟ್ಟುಕೊಳ್ಳಬಹುದು, ಸೀಲಿಂಗ್ ಇಲ್ಲ, ಕಾಫಿ ತೋಟದ ಮಧ್ಯದಲ್ಲಿ ಗದ್ದೆ ಇರುತ್ತದೆಂದು ಹೇಳಿದರು. ಕಾಫಿ ತೋಟ ಯಾವಾಗಲೂ ಬೆಟ್ಟಗಳಮೇಲೆ ಮತ್ತು ಅವುಗಳ ಮಧ್ಯೆ ಅಥವಾ ವ್ಯಾಲಿಗಳಲ್ಲಿರುತ್ತದೆ. ಇದಕ್ಕೂ ಅನ್ಯಾಯವಾಗುತ್ತದೆಂದು ಹೇಳುವುದು ಸತ್ಯಕ್ಕೆ ಬಹಳ ದೂರವಾದಂಥ ಮಾತು. ಇದರಲ್ಲಿ ಹುರುಳಿಲ್ಲ. ಒಟ್ಟಿನಲ್ಲಿ ಇವರು ನೀತಿಗೆಟ್ಟಿದ್ದಾರೆಂದು ಖಡಾಖಂಡಿತವಾಗಿ ಗೊತ್ತಾಗುತ್ತದೆ. ಅದರ ಜೊತೆಗೆ ದೇವಸ್ಥಾನಕ್ಕೆ ಈ ವಿನಾಯಿತಿ ಇಲ್ಲವೆಂದು ಒಬ್ಬರು ಹೇಳಿದರು. ಇದುವರೆಗೆ ಕೇಳಿದ್ದರಲ್ಲಿ ಶ್ರೀಮಾನ್ ಮಾದೇಗೌಡರು, ಕಡಿದಾಳ್ ಮಂಜಪ್ಪನವರು ಕೆಲವು ವಿಚಾರಗಳನ್ನು ಹೇಳುವಾಗ ಮೂಲಕ್ಕೆ ಹೋಗಿ ಮಾತನಾಡಿದ್ದಾರೆ. ಸೆಕ್ಯುಲರ್ ಸ್ಟೇಟ್ ಎಂಬುದನ್ನು ನಾನು ಖಂಡಿತ ಒಪ್ಪುತ್ತೇನೆ. ಆದರೆ ಕೆಲವರು ಸ್ಕೂಲ್ ವಿದ್ಯಾಸಂಸ್ಥೆಗಳು ಇವೆಲ್ಲವನ್ನೂ ನಡೆಸುತ್ತಾರೆ. ಆ ಸಂಸ್ಥೆಗಳಿಗೆ ಆಸ್ತಿ ಇಲ್ಲದಿದ್ದರೆ ಅವನ್ನು ನಡೆಸುವುದು ಕಷ್ಟ. ಅದನ್ನು ಆಳವಾಗಿ ಯೋಚನೆ ಮಾಡಿ ಇದರಲ್ಲಿ ಏನಾದರೂ ಮಾಡಲು ಸಾಧ್ಯವೇ ಎಂಬುದನ್ನು ನೋಡಬೇಕಾಗುತ್ತದೆ. ರೆವಿನ್ಯೂ ಸೆಟಲ್‌ಮೆಂಟ್ ವಿಷಯದಲ್ಲಿ ನಿಮ್ಮ ಪಕ್ಷದಲ್ಲೇ ಭಿನ್ನಾಭಿಪ್ರಾಯವಿದೆಯೆಂದು ಕೇಳಿದ್ದೇನೆ. ಅದನ್ನು ನೋಡಿದರೆ ಕಣ್ಣಿಗೆ ಮಣ್ಣು ಎರಚುವ ಹಾಗೆ ಇದೆ. ಈ ನಡವಳಿಕೆ ಸರಿಯಲ್ಲ. ಖಡಾಖಂಡಿತವಾಗಿ ಇಂತಹ ಆಡಳಿತದಲ್ಲಿ ಜನರು ಹೋರಾಟವನ್ನು ಹೂಡಿ ಆಡಳಿತ ಮುರಿದು ಕ್ರಾಂತಿಗೆ ಖಂಡಿತವಾಗಿ ದಾರಿ ಆಗುತ್ತದೆ. ಸಾಮಾನ್ಯವಾಗಿ ನಮ್ಮ ಹಳ್ಳಿಯಲ್ಲಿ ಇಂತಿಂಥ ತೋಟಗಳಿಗೆ ಇಷ್ಟಿಷ್ಟು ಕಂದಾಯ ಬೀಳುತ್ತದೆಂಬುದು ಗೊತ್ತಾಗುತ್ತದೆ. ಹೇಗೆಂದರೆ, ಶ್ಯಾನುಭೋಗರು ಬಂದು ಇಷ್ಟಿಷ್ಟು ಜಾಸ್ತಿ ಕಂದಾಯವಾಗುತ್ತದೆಂದು ಹೇಳುತ್ತಿದ್ದಾರೆ. ಒಂದು ರೂಪಾಯಿಗೆ ಬದಲಾಗಿ 5 ರೂಪಾಯಿಗಳನ್ನು ಹಾಕಿ ಸಣ್ಣ ಹಿಡುವಳಿದಾರರ ಹಿಡುವಳಿ ಕೇವಲ 3-4 ಎಕರೆಗಳು. ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಸಿರಾ ಬಾರ್ಡರಿನಲ್ಲಿ ಯಾವನೋ ಒಬ್ಬ ಉಪಾಧ್ಯಾಯನಿಗೆ ಸ್ವಲ್ಪ ಡ್ರೈಲ್ಯಾಂಡ್ ಇತ್ತು ಎನ್ನೋಣ. ಅವನಿಗೆ ತೋಟವೂ ಸ್ವಲ್ಪ ಇರುತ್ತದೆ. ಅವನ ತೋಟದ

ಕರ್ನಾಟಕ ವಿಧಾನಮಂಡಲ

ಮೇಲೆ ಒಂದು ನ್ಯಾಯವಾದ ಮತ್ತು ನಿಖರವಾದ ಕಂದಾಯವನ್ನು ಹಾಕಿದ್ದಾರೆ. ಹಾಗೂ ಅವನು ಎಲ್ಲಾ ವರ್ಷಗಳೂ ಕಂದಾಯ ಕೊಟ್ಟಿಲ್ಲ. ಈಗ ಅವನಿಗೆ ಕಂದಾಯ ಒಂದು ರೂಪಾಯಿಗೆ ಬದಲಾಗಿ 5 ರೂಪಾಯಿ ಬೀಳುತ್ತದೆ. ಈಗಲೂ ಕೊಡುವುದಿಲ್ಲ. ಆಗ ಏನು ಮಾಡುತ್ತೀರಿ? ಆ ಕಂದಾಯವನ್ನು ಕೂಲಿ ಮಾಡಿ ಕೊಡುತ್ತೇನೆ. ಎಂದು ಹೇಳುತ್ತಾನೆ. ಅಂತಹವನಮೇಲೆ ಲೆಕ್ಕಚಾರವಾಗಿ ಇಷ್ಟು ಕಂದಾಯ ಹಾಕಿದ್ದೇನೆಂದರೆ, ಅದರೊಳಗೆ ಏನು ನ್ಯಾಯವಿದೆ? ಸರ್ಕಾರದವರು ಕಾಫಿ ಪ್ಲಾಂಟರ್ಸ್ ಬಲೆಗೆ ಬಿದ್ದು ನಮ್ಮನ್ನು ಬಲಿ ಹಾಕಬೇಕೆಂದು ಹೊರಟಿದ್ದಾರೆ. ಮೊದಲನಿಂದಲೂ ಈ ರಿಸೆಟಲ್‌ಮೆಂಟ್ ವಿಚಾರ ಬಹಳ ಅಪಾಯಕಾರಿಯಾಗಿತ್ತು. ಗದ್ದೆ ಮೈದಾನ ಪ್ರದೇಶದಮೇಲೆ ಮಾಡುವುದರಿಂದ ಕಂದಾಯ ಜಾಸ್ತಿ ಹಾಕಬೇಕೆಂದು ಮಾಡಿದ್ದಾರೆ. ಅದರಿಂದ ಇವರಿಗೆ ತೊಂದರೆಯಾಗುತ್ತದೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಆದ್ದರಿಂದ ಈಗ ವಂಚನೆಮಾಡಿ ಮುಂದಿನ ಸಾರಿ ಓಟು ಕಿತ್ತುಕೊಳ್ಳಬೇಕೆಂದು ಮಾಡಿದ್ದಾರೆ. ಇನ್ನೇನು ಇಲ್ಲ. ಇದರಲ್ಲಿ ನೂರಕ್ಕೆ ನೂರರಷ್ಟು ನಿಜವಿದೆ. ನಾನಾ ರೂಪವಾಗಿ ಇವರು ಮೋಸಮಾಡಿ ಓಟು ಗಳಿಸುವುದು ಆಗಿದೆ. ಇದಕ್ಕೆ ಬುದ್ಧಿಪೂರ್ವಕವಾಗಿ ನನ್ನ ಒಪ್ಪಿಗೆ ಇಲ್ಲ. ಇದು ಆನೆಸ್ಟ್ ಡಿಮ್ಯಾಂಡ್ ಅಲ್ಲ. ಇನ್ನೊಂದು ಮುಖ್ಯವಾದ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ 30ನೇ ಕ್ಲಾಜ್ ಮಾಡಿದ್ದಾರೆ. ಒಬ್ಬ ರೈತನಿಗೆ 100 ಎಕರೆ ಜಮೀನು ಇರುತ್ತದೆ. ಅವನು 27 ಎಕರೆಯನ್ನು ಸ್ವಂತ ಸಾಗುವಳಿಗೆ ಇಟ್ಟುಕೊಳ್ಳುತ್ತಾನೆ. ಅವನು ಈಗ ಏನು ಮಾಡಿರುತ್ತಾನೆ, ಇದನ್ನು ಜಾರಿಗೆ ಕೊಡುವುದರೊಳಗೆ 100 ಎಕರೆಯಲ್ಲಿ 50 ಎಕರೆ ಜಮೀನನ್ನು ಮಾರಿರುತ್ತಾನೆ. ಸುಮಾರು 15 ವರ್ಷಗಳ ಕಾಲ ಎಲ್ಲಾ ಕಾಲದಲ್ಲೂ ದುಡಿದಿರುತ್ತಾನೆ. ಅಂತಹವನನ್ನು ಒಕ್ಕಲೆಬ್ಬಿಸಬೇಕೆಂದು ಭೂಸುಧಾರಣೆಯನ್ನು ತಂದರೇನು ಪ್ರಯೋಜನ? ಹಿಂದೆ ಇವರು ಸೀಲಿಂಗ್ ಲಿಮಿಟ್ಟನ್ನು ನಿರ್ಧಾರ ಮಾಡುವಾಗ ನವಂಬರ್‌ನಿಂದ ಈಚೆಗೆ ಇಂತಹ ಕೇಸುಗಳನ್ನು ಸೀಲಿಂಗ್ ಲಿಮಿಟ್ಟಿನೊಳಗೆ ಸೇರಿಸುತ್ತೇವೆಂದು ಹೇಳಿದ್ದರೂ ಆ ರೀತಿ ಮಾಡಲಿಲ್ಲ. ಆದ್ದರಿಂದ ಇದನ್ನು ಇಲ್ಲಿ ಏಕೆ ತಂದಿರಿ, ಒಕ್ಕಲೆಬ್ಬಿಸಲಿಕ್ಕೆ ತಂದಿದ್ದೀರೋ ಎಂದು ನಾನು ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ. ಒಬ್ಬೊಬ್ಬ ಮನುಷ್ಯ ಒಂದೊಂದು ರೀತಿಯಲ್ಲಿ ಜೀವನ ಮಾಡುತ್ತಾನೆ. 4 ಮನೆಗಳು ಇರುತ್ತವೆ, ಆ 4 ಮನೆಯೊಳಗೆ 2 ಮನೆಗಳನ್ನು ಮಾರಿರುತ್ತಾನೆ.

5-30 P.M.

ಆಗ ಅವನು ವ್ಯಾಪಾರವನ್ನು ಮಾಡುವುದಕ್ಕೆ ಹೋಗುತ್ತಾನೆ. ಆಮೇಲೆ ಅವನು ಅದರಲ್ಲಿ ನಷ್ಟ ಆಗಿ ಕುಳಿತುಕೊಳ್ಳುತ್ತಾನೆ. ಅಂಥಾ ಸಂದರ್ಭದಲ್ಲಿ ನೀವು ಒಂದು ಲಾ ತೆಗೆದುಕೊಂಡು ಬರುತ್ತೀರಿ, ಯಾರಿಗೂ ಎರಡು ಮನೆಗಳ ಮೇಲೆ ಇರಕೂಡದು ಎಂದು ಮಾಡುತ್ತೀರಿ. ಅದರಲ್ಲಿಯೂ ಎರಡು ಮನೆಗಳನ್ನು ಮಾರಿದರೂ ಕೂಡ ಸೀಲಿಂಗ್ ಲಿಮಿಟ್ಟಿಗೆ ತೆಗೆದುಕೊಳ್ಳುತ್ತೇವೆ ಎಂದರೆ ಏನಾಗುತ್ತದೆ ಎಂದರೆ, ನೀವು ಎರಡು ಮನೆಗಳ ಸೀಲಿಂಗನ್ನು ಈಚೆಗೆ ಹಾಕಿದ್ದು ಎಂದು ಹೇಳುತ್ತಾನೆ. ಒಟ್ಟಿನಲ್ಲಿ ಏನಾಯಿತು? ಅವನು ತನ್ನಲ್ಲಿ ಇದ್ದದ್ದನ್ನು ಎರಡು ಭಾಗಮಾಡಿ ಆ ಕಾನೂನಿನಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾನೆ. ಆಗ ಅದು will it not be bad in law? ಈಗ 17th amendment to Constitution ಪ್ರಕಾರ ಒಬ್ಬನ ಆಸ್ತಿಯನ್ನು ಇನ್ನೊಬ್ಬನಿಗೆ ಕೊಡಬೇಕು ಎಂದು ಅವನಲ್ಲಿರತಕ್ಕ ಪೂರ್ತಿ ಆಸ್ತಿಯನ್ನು ಕಿತ್ತುಕೊಳ್ಳುವುದಕ್ಕಾಗುವುದಿಲ್ಲ. ಒಬ್ಬ ಮನುಷ್ಯನ ಒಕ್ಕಲೆಬ್ಬಿಸಬೇಕು ಎನ್ನುವುದಕ್ಕೆ ನಿಮ್ಮ ಪಾರ್ಟಿಯಲ್ಲೇ ನಿಮಗೆ ಬೆಂಬಲ ಸಿಕ್ಕಲ್ಲ. ಈಗ ಆ ವಿಷಯವನ್ನು ಇಲ್ಲಿ ಆಲೋಚನೆ ಮಾಡೋಣ ಎಂದು ಮಾಡುತ್ತಿದ್ದೀರಿ. ಈಗ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ಅದೇನೆಂದರೆ, ಈಗ್ಗೆ ಕೆಲವು ತಿಂಗಳ ಹಿಂದೆ ನಮ್ಮ ವಿರೋಧ ಪಕ್ಷದಲ್ಲಿ ಇದ್ದ ಕೆಲವು ಸದಸ್ಯರು ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಹಣವನ್ನು ತಿಂದು ವಿರೋಧ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾರೆ. ಇವರ ವಿಷಯದಲ್ಲಿ ಜನಗಳು ಏನು ಅಭಿಪ್ರಾಯವನ್ನು ಹೊಂದಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಸರ್ಕಾರದವರು ಏನಾದರೂ ಮಾಡಬೇಕಾಗಿದ್ದರೆ, ರೈತನಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಮಾಡಬೇಕು. ಸರ್ಕಾರದವರು ಮಾಡತಕ್ಕ ಕಾರ್ಯದಲ್ಲಿ ಒಂದು ನ್ಯಾಯ ನೀತಿಯನ್ನು ಇಟ್ಟುಕೊಂಡು ಅದನ್ನು ಮಾಡಿದ್ದರೆ ಈ ರೀತಿ ಜನಗಳು ಹಲವಾರು ತರಹ ಮಾತನಾಡುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಈ ಭೂಸುಧಾರಣಾ ಕಾನೂನನ್ನು ಈ ರೀತಿ ಸರ್ಕಾರದವರು ಮಾಡುತ್ತಾರೆಂದು ನಮಗೆ ಗೊತ್ತಿರಲಿಲ್ಲ ಎಂದು ಅನೇಕ ಜನಗಳು ಹೇಳುತ್ತಾರೆ. ಒಂದು ಒಕ್ಕಲೆಬ್ಬಿಸಿದ ಮೇಲೆ, ಒಬ್ಬ ಮನುಷ್ಯ ನಿರುದ್ಯೋಗಿ ಆದರೆ ಅವನಿಗೆ ಜೀವನ ಮಾಡಲು ಸರ್ಕಾರದವರು ಕೆಲಸವನ್ನು ಕೊಡುತ್ತಾರೆಯೇ? ಆ ಒಂದು ಪಾಯಿಂಟನ್ನು ಸರ್ಕಾರದವರು ಇದರಲ್ಲಿ ನಮೂದು ಮಾಡಿಲ್ಲ. ಕಾನ್‌ಸ್ಟಿಟ್ಯೂಷನ್ನಿಗೆ ತಂದಿರತಕ್ಕ

(ಶ್ರೀ ವಿ. ಎಂ. ದೇವ್)

17ನೇ ಅಮೆಂಡ್‌ಮೆಂಟ್ ಪ್ರಕಾರ ಒಬ್ಬ ಮನುಷ್ಯನಿಗೆ ಜೀವನಾಧಾರವಾಗಿರುವುದನ್ನು ಪೂರ್ತಿಯಾಗಿ ತೆಗೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದೂ ಒಂದು ಅಂಶ ಇದರಲ್ಲಿ ಬರುತ್ತದೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಈ ಭೂಸುಧಾರಣೆಯ ಕಾನೂನನ್ನು ಮಾಡುವಾಗ ಯಾವುದಾದರೂ ಒಂದು ಮೂಲತತ್ವವನ್ನು ಇಟ್ಟುಕೊಂಡು ಅದನ್ನು ಮಾಡಬೇಕಾಗಿತ್ತು.

ಇನ್ನೊಂದು ವಿಚಾರ ಏನೆಂದರೆ, ಲಿಫ್ಟ್ ಇರಿಗೇಷನ್ ಪಂಪುಗಳನ್ನು ಮ್ಯಾನುಫ್ಯಾಕ್ಚರ್ ಮಾಡತಕ್ಕ ಕಂಪೆನಿಗಳನ್ನು ಬೆಂಗಳೂರಿನಲ್ಲಿಯೇ ಅಥವಾ ಹೈದರಾಬಾದಿನಲ್ಲಿಯೇ ಸ್ಥಾಪನೆ ಮಾಡುತ್ತಾರೆ, technologically it is backward. ಆಗ ಏನಾಗುತ್ತದೆ ಎಂದರೆ, ಅದಕ್ಕೆ ಜಾಸ್ತಿ ಹಣವನ್ನು ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಅದನ್ನು ಲೇಟೆಸ್ಟ್ ಟೆಕ್ನಲಾಜಿಕಲ್ ಲೆವೆಲ್ಲಿಗೆ ತರಬೇಕಾಗುತ್ತದೆ. ಅದೇ ರೀತಿ ಜಮೀನಿಗೂ ಕೂಡ ರೈತ ಹಣವನ್ನು ಇನ್‌ವೆಸ್ಟ್ ಮಾಡಬೇಕು. ಬುದ್ಧಿಶಕ್ತಿಯನ್ನು ಇನ್‌ವೆಸ್ಟ್ ಮಾಡಬೇಕು. ರಟ್ಟೆಬಲವನ್ನು ಇನ್‌ವೆಸ್ಟ್ ಮಾಡಬೇಕು. ಅದರ ಜೊತೆಗೆ ಜಮೀನಿಗೆ ಬೇಕಾದ ಫರ್ಟಿಲೈಜರ್ ಹಾಕಬೇಕಾಗುತ್ತದೆ. ಮತ್ತು ರೈತ ಭೂಮಿಯನ್ನು ಆಳವಾಗಿ ಉಳಬೇಕಾದರೆ ಟ್ರಾಕ್ಟರ್ ಬೇರೆ ಬೇಕಾಗುತ್ತದೆ, ಅವನು ವ್ಯವಸಾಯವನ್ನು ಮಾಡಬೇಕಾದರೆ ಅನೇಕ ಉಪಕರಣಗಳೂ ಬೇಕಾಗುತ್ತದೆ. ಇದನ್ನೆಲ್ಲಾ ರೈತ ಒದಗಿಸಿಕೊಳ್ಳಬೇಕಾದರೆ ಎಷ್ಟು ಕಷ್ಟವಿದೆ ಎಂಬುದನ್ನು ಸಹ ಸರ್ಕಾರದವರು ಯೋಚನೆ ಮಾಡಬೇಕಾಗಿದೆ. I want to bring to your notice the process of peasant life which I have seen in villages. ಅದಕ್ಕೋಸ್ಕರ ನನಗೆ ಸ್ವಲ್ಪ ಹೆಚ್ಚು ಕಾಲಾವಕಾಶವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈಗ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯ, ಮತ್ತು ಕೈಗಾರಿಕೆಗಳ ಅಭಿವೃದ್ಧಿ ಅಷ್ಟು ಹೆಚ್ಚಿನಮಟ್ಟದಲ್ಲಿ ಆಗಿಲ್ಲ. ಹಾಗೆಯೇ ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿಯೂ ಸಹ ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ. ಹಾಗೇನೇ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಈಗ ಒಕ್ಕಲನ್ನು ಎಬ್ಬಿಸಬೇಕಾದರೆ immediate effect on industry ಮೇಲಕ್ಕೆ ಬರುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಮಾಡಬೇಕಾಗಿತ್ತು. ಮತ್ತು ಮೊದಲನೆಯದಾಗಿ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ತಕ್ಷಣ ಮಾಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಚಾರ. ಶರಾವತಿ ಪ್ರಾಜೆಕ್ಟ್ ಪೂರ್ತಿ ಆದಮೇಲೆ ಈಗ ಎರಡು ಕೋಟಿ ಜನಗಳು ನಮ್ಮ ದೇಶದಲ್ಲಿ ಎಷ್ಟು ಕೆಲಸವನ್ನು ಮಾಡುತ್ತಿದ್ದಾರೆಯೋ ಅಷ್ಟು ಕೆಲಸವನ್ನು ಶರಾವತಿ ಪ್ರಾಜೆಕ್ಟಿನಲ್ಲಿ ಉತ್ಪಾದನೆಯಾಗತಕ್ಕಂಥ ವಿದ್ಯುಚ್ಛಕ್ತಿಯಿಂದ ಮಾಡಬಹುದು ಎಂದು ಎಕ್ಸ್‌ಪರ್ಟ್‌ಗಳು ಹೇಳುತ್ತಿದ್ದರು. ನನ್ನ ಹತ್ತಿರ ಒಂದು ಟ್ರಾಕ್ಟರು ಇತ್ತು. ಅದು 37 ಅಶ್ವಶಕ್ತಿ ಉಳ್ಳದ್ದು. ಅದು ನಾಲ್ಕು ಆಳುಗಳ ಕೆಲಸವನ್ನು ಮಾಡುತ್ತಿತ್ತು. ನಾನು ಈಗ ಅದನ್ನು ಮಾರಿಬಿಟ್ಟೆ. ಏತಕ್ಕೆಂದರೆ, ಮೊದಲು ನಾನು ನನ್ನ ಸ್ವಂತ ಜಮೀನನ್ನು 8-9 ಎಕರೆ ಸಾಗುವಾಡಿ ನನ್ನ ಅಣ್ಣನ ಜಮೀನನ್ನು ಸುಮಾರು 10 ಎಕರೆ ಜಮೀನನ್ನು ಟೆನೆಂಟಾಗಿ ಸಾಗು ಮಾಡುತ್ತಿದ್ದೆ. ಈ ವರ್ಷ ನಮ್ಮ ಅಣ್ಣನ ಜಮೀನನ್ನು ಬಿಟ್ಟುಬಿಟ್ಟೆ. ಅದಕ್ಕೆ ಇನ್ನೊಂದು ಕಾರಣವೇನೆಂದರೆ, ನನಗೆ ವಯಸ್ಸಾಯಿತು, ಟ್ರಾಕ್ಟರಿನಲ್ಲಿ ಉಳಬೇಕಾದರೆ ಅದು ಶರೀರವನ್ನೇ ಅಲ್ಲಾಡಿಸುತ್ತದೆ. ನನಗೆ ರೊಮ್ಯಾಟಿಕ್ ಪೈನ್ ಬೇರೆ ಇದೆ. ಮೂಳೆಗಳೆಲ್ಲಾ ನೋಯುತ್ತಿವೆ. ಆದ್ದರಿಂದ ಈಗ ನನ್ನ ಕೈಯ್ಯಿನಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನೀವು ಟ್ರಾಕ್ಟರನ್ನು ಏತಕ್ಕೆ ಮಾರಿದಿರಿ ?

ಶ್ರೀ ವಿ. ಎಂ. ದೇವ್.—ನಾನು ಆಗಲೇ ಹೇಳಿದೆ. ನನಗೆ ರೊಮ್ಯಾಟಿಕ್ ಪೈನ್ ಇದೆ. ನನ್ನ ಕೈಯ್ಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಒಂದು ದಿವಸ ಕೆಲಸ ಮಾಡಿದರೆ 15 ದಿವಸ ಸುಧಾರಿಸಿಕೊಳ್ಳಬೇಕು. ಅದಕ್ಕೋಸ್ಕರ ನಾನು ಟ್ರಾಕ್ಟರನ್ನು ಮಾರಿದೆನು, ಅಷ್ಟೆ. ಈಗ ನೀವು ಏನು ಈ ಕಾನೂನಿನಲ್ಲಿ ಮಾಡಿದ್ದೀರೋ ಅದರಲ್ಲಿ ಸಮತಾವಾದ ಸಮಾಜವನ್ನು ರಚನೆ ಮಾಡತಕ್ಕ ಅಂಶಗಳು ಖಂಡಿತ ಇಲ್ಲ. ಈಗ ನೀವು ಈ ಒಂದು ಕಾನೂನನ್ನು ಜಾರಿಗೆ ತರುವುದರಿಂದ ಸುಮಾರು 5 ಲಕ್ಷ ಜನಗಳು ನಿರುದ್ಯೋಗಿಗಳಾಗುತ್ತಾರೆ. ಈಗ ನಮ್ಮ ರಾಜ್ಯದಲ್ಲಿ ಪಬ್ಲಿಕ್ ಫಂಡಿನಿಂದ ನಡೆಯತಕ್ಕ ಕೈಗಾರಿಕೆಗಳು ಏನಿದೆ ಅವುಗಳೆಲ್ಲವೂ ಭೋಗಸ್ ಇಂಡಸ್ಟ್ರೀಸ್. ಈಗ ಸರ್ಕಾರದಲ್ಲಿ ಹಣವಿಲ್ಲ. ಆದರೂ ಸಹ ಸರ್ಕಾರದವರು ಆ ಕೈಗಾರಿಕೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈಗ ದೇಶದ ವ್ಯವಹಾರವನ್ನು ಮಾಡುವುದಕ್ಕೆ ದುಡ್ಡು ಇಲ್ಲ ಎಂದು ರೈತರಿಗೆ ಹೆಚ್ಚು ಕಂದಾಯವನ್ನು ವಿಧಿಸುತ್ತಿದ್ದಾರೆ. "The highest, the fastest, the immediately investiable capital formation takes place

in public sector industries only'' ಸರ್ಕಾರದ ಕೈಗಾರಿಕೆಯಾಗಿದ್ದರೆ, ಸಾಮಾನ್ಯವಾಗಿ ಅದರಲ್ಲಿ ಲಾಭ ಬರುವುದಿಲ್ಲ. ಅದರಲ್ಲಿ ನಷ್ಟವಾಗುತ್ತದೆ. ಏತಕ್ಕೆಂದರೆ ಅದರಲ್ಲಿ ಜಾಸ್ತಿ ಸಿಬ್ಬಂದಿ ವರ್ಗದವರನ್ನು ನೇಮಿಸಿಕೊಳ್ಳುತ್ತಾರೆ, ಸರಿಯಾದಂತಹ ಮ್ಯಾನೇಜ್‌ಮೆಂಟ್ ಇರುವುದಿಲ್ಲ. ಆದ್ದರಿಂದ ಅಲ್ಲಿ ನಾನಾ ರೀತಿಯಲ್ಲಿ ಮೋಸಗಳು ನಡೆಯುತ್ತವೆ. ಇದಕ್ಕೆ ಮುಖ್ಯವಾಗಿ ಇನ್ನೊಂದು ಕಾರಣವೇನೆಂದರೆ, ಇವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕ ಮಂತ್ರಿಗಳೂ ಸಹ ಒಳ್ಳೆಯ ಬುದ್ಧಿವಂತರು ಮತ್ತು ದಕ್ಷರು ಆಗಿರಬೇಕು. ಈಗ ನಮ್ಮ ರಾಜ್ಯದಲ್ಲಿರತಕ್ಕ ಮಂತ್ರಿಮಂಡಲದವರಿಗೆ ಈ ಲೆಜಿಸ್ಲೆಟೀವ್ ಅಸೆಂಬ್ಲಿಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಹಾಗೆ ಒಂದು ಸರಿಯಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಇವರಿಗೆ ಗೊತ್ತಿಲ್ಲ. It is an orderless thing. For this, we have got unfortunately for our State an irrelevent Ministry which we will have to bear for the next two years. ಮುಖ್ಯವಾಗಿ ಇದು ಒಂದು ಅಸಮರ್ಪಕವಾದ ಸರ್ಕಾರ ಎಂದು ಹೇಳಬಹುದು. ಆಹಾರ ಅಭಾವಕ್ಕೆ ಇದು ಮುಖ್ಯವಾಗಿ ನಾಂದಿಯಾಗುತ್ತದೆ. ಪೇಜ್ 13ರಲ್ಲಿ ಒಂದು ಕಡೆ ಹೇಳುತ್ತಾರೆ: ಮರಮುಟ್ಟು, ಮೆಶಿನರಿ ಪ್ಲಾಂಟ್ಸು ಏನಾದರೂ ಇದ್ದರೆ, ಅವನ್ನು ತೆಗೆಯಕೂಡದು ಎಂದು ಹೇಳಿದ್ದಾರೆ. ನಾನು ಕೇಳುವುದು ಇಷ್ಟು : ಈಗ ನಾನು ಒಂದು ಸರ್ವೆ ತೋಪು ಬೆಳೆಸಿದರೆ ಏಕೆ ಬೆಳೆಸುತ್ತೇನೆ ? ಸಾಮಾನ್ಯವಾಗಿ ಲಾಭ ಪಡೆಯುವುದಕ್ಕೆ. ಅದನ್ನು ಕಟ್ ಮಾಡಬಾರದು ಎಂದರೆ ಹೇಗೆ ? ಅಲ್ಲಿ ಲಫ್ಟ್ ಇರ್ರಿಗೇಶನ್ನಿಂದ ಸಾಗುವಳಿಯಾಗುವ ಭೂಮಿ ಇರುತ್ತದೆ. ಅದಕ್ಕೆ 5 ಎಚ್. ಪಿ. ಎಲೆಕ್ಟ್ರಿಕ್ ಮೋಟಾರ್ ಇರುತ್ತದೆ. ಹಾರಿಸಾಂಟಲ್ ಇಂಜಿನ್ ಇರುತ್ತದೆ. 5 ಎಚ್. ಪಿ. ಇದ್ದರೆ ಜಾಸ್ತಿ ಕೆಲಸ ಮಾಡುತ್ತವೆ. ಅಂಥದ್ದನ್ನು ಬಿಟ್ಟು ಹೋಗಿ, ತೆಗೆದುಕೊಂಡು ಹೋಗುವುದು ಬೇಡ ಅಂದರೆ ಏನು ಮಾಡುವುದು ! ಅದನ್ನು ಇಂಡಸ್ಟ್ರಿಯಲ್ ಉಪಯೋಗಕ್ಕೂ ಇಟ್ಟುಕೊಳ್ಳಬಹುದು. ಅದನ್ನು ತೆಗೆದುಕೊಂಡು ಹೋಗಿ ಬೇರೆ ಫ್ಯಾಕ್ಟರಿಗಳಿಗೆ ಉಪಯೋಗಿಸಬಹುದು ಈ ಕಾನೂನಿನಲ್ಲಿರುವ ಪ್ರಾವಿಶನ್ನುಗಳನ್ನು ಕಾಂಟ್ರವೀನ್ ಮಾಡಿದರೆ, ಅದಕ್ಕೆ ಪನಿಶ್‌ಮೆಂಟುಗಳನ್ನು ಹೇಳುತ್ತೀರಿ. ಒಬ್ಬ ಮನುಷ್ಯನನ್ನು ಒಕ್ಕಲೆಬ್ಬಿಸುವಾಗ, ಅವನ ಜೀವನಾಧಾರವನ್ನು ಬೇರೆಯವರು ಕಿತ್ತು ಕೊಳ್ಳುವಾಗ, ಶೂಟ್ ಮಾಡುತ್ತೇವೆ, ಸಾವಿರಾರು ರೂಪಾಯಿ ದಂಡ ಹಾಕುತ್ತೇವೆಂದು ಹೇಳುವುದು ಸರಿಯಲ್ಲ, ಇಂಥ ಲಾ ಕೊಟ್ಟವರು ಸರಿಯಾದ ಮಿನಿಷ್ಟರಲ್ಲ. ಈ ಮಾತು ನಾನು ಹೇಳುವುದಲ್ಲ, ಇದು ಜನಜೀವನದಲ್ಲಿ ಬಂದಿದೆ. ನೀವು ಹೀಗೆಯೇ ಮಾಡುತ್ತಿದ್ದರೆ, ನಾವು ನಮ್ಮ ಕರ್ತವ್ಯ ಮಾಡುತ್ತೇವೆ. ಜನಗಳಿಗೆ ಹೇಳುತ್ತೇವೆ : ನಮಗೆ ಪೂರ್ಣ ಸ್ವಾತಂತ್ರ್ಯ ಇನ್ನೂ ಬರಲಿಲ್ಲವೆಂದು. ಇನ್ನುಮೇಲೆ ಜನವರಿ 26 ನೇ ತಾರೀಖಿನಿಂದ ಪೂರ್ಣ ಸ್ವಾತಂತ್ರ್ಯಕ್ಕೆ ಹೋರಾಡೋಣ, ಪೂರ್ಣ ಸ್ವಾತಂತ್ರ್ಯವಿದ್ದರೆ ಎಲ್ಲರಿಗೂ ಕೆಲಸ ಸಿಗುತ್ತದೆ, ವ್ಯವಹಾರ ಚೆನ್ನಾಗಿ ನಡೆಯುತ್ತದೆ, ಹೆಚ್ಚು ಭೂಮಿ ಉಳುವವನಿಗೆ ಇರುತ್ತದೆ ಎಂದು ಹೇಳುತ್ತೇವೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಮೈಸೂರು ಲ್ಯಾಂಡ್ ರಿಫಾರಮ್ಸ್ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತೇನೆ. ಲ್ಯಾಂಡ್ ರಿಫಾರಂ ಕೆಲಸ ಯಾವಾಗಲೋ ಆಗಬೇಕಾಗಿತ್ತು. ಏಕೆಂದರೆ ನಮ್ಮ ದೇಶದಲ್ಲಿ 1930ನೇ ಇಸವಿಯಲ್ಲಿ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಭೂಸುಧಾರಣೆ ಘೋಷಣೆ ಮಾಡಲಾಗಿತ್ತು. ಆವಾಗ್ಗೆ ಇಷ್ಟು ಪಕ್ಷಪಂಗಡಗಳು ಇರಲಿಲ್ಲ. ಇದನ್ನು ಸರ್ವಸಾಧಾರಣವಾಗಿ ಎಲ್ಲರೂ ಒಪ್ಪಿಕೊಂಡಹಾಗಿತ್ತು, ಸ್ವಾತಂತ್ರ್ಯ ಬಂದಿರಲಿಲ್ಲದಿದ್ದರೂ ಕಾಂಗ್ರೆಸ್ ಅಧಿವೇಶನದಲ್ಲಿ ಇದನ್ನು ಘೋಷಣೆ ಮಾಡಿದ್ದರು. ಆವಾಗ ಸರ್ವಸಾಧಾರಣವಾಗಿ ಪ್ರಜೆಗಳೆಲ್ಲರೂ ಇದನ್ನು ಒಪ್ಪಿಕೊಂಡಿದ್ದರು. ಆದರೆ ಇದರ ರೂಪರೇಖೆ ಇತ್ತೀಚೆಗೆ ಬಂದಿರಬಹುದು. ಅನಂತರ ಇದಕ್ಕೆ ನಾಂದಿಯಾಗಿ 1947ನೇ ಇಸವಿ ಪರಿಣಮಿಸಿತು ಅನಂತರವಾದರೂ ಇದು ಕೂಡಲೆ ಬರಬೇಕಾಗಿತ್ತು. ಏನೋ ಎಡರುತೊಡರುಗಳಿಂದ ಅಥವ ಕೆಲವು ಹಿತಾಸಕ್ತಿಗಳಿಂದ ಇದು ವಿಳಂಬವಾಗುತ್ತಾ ಬಂದಿತು. ಈಗ ಇದು ಕಾರ್ಯಗತವಾಗುವಂಥ ಸುಮುಹೂರ್ತ ಬಂದಿದೆ. ಇದು ನಿಜವಾಗಿ ಸ್ವಾಗತಾರ್ಹವಾದುದು. ದಿನದಿನಕ್ಕೂ ನಮ್ಮ ಎಡರುತೊಡರುಗಳು, ತೊಂದರೆಗಳು, ಭೂಮಿ ಸಂಬಂಧವಾದ ಸಮಸ್ಯೆಗಳು ಹೆಚ್ಚುತ್ತಾ ಇವೆಯೆ ಹೊರತು, ಏನಾದರೂ ಕಡಿಮೆಯಾಗುತ್ತಾ ಬರಲಿಲ್ಲ. ಇನ್ನೂ ಹೆಚ್ಚಿಗೆ ಹೇಳುವುದಾದರೆ, ಆಹಾರ ಸಮಸ್ಯೆ ಯಾವಾಗಿನಿಂದ ಆಯಿತು ಎಂದು ಹೇಳಿದರ, ನಿಜವಾಗಿ ಕೃಷಿಮಾಡುವ ರೈತನಿಗೆ ಅದರಲ್ಲಿ ಆಸಕ್ತಿ ಇಲ್ಲ, ಅದೇ ಆಹಾರ ಸಮಸ್ಯೆಗೆ ಕಾರಣ. ತಾನು ಕಷ್ಟಪಟ್ಟು ಸಾಗವಳಿ ಮಾಡಿದರೂ ಅದಕ್ಕೆ ಸರಿಯಾದ ಪ್ರತಿಫಲ ಉಳುವವನಿಗೆ ಇಲ್ಲ ; ಆದ್ದರಿಂದ ಸಾಗುವಳಿಯನ್ನು ಯಾರಿಗಾಗಿ ಏಕೆ ಮಾಡ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಬೇಕು ಎಂದು ರೈತನ ಮನಸ್ಸಿನಲ್ಲಿದೆ. ಆದರೆ ಭೂಸುಧಾರಣೆಯು ನಿಜವಾಗಿ, ಒಳ್ಳೆಯ ರೀತಿಯಲ್ಲಿ ಕಾರ್ಯಗತವಾದರೆ, ಆಹಾರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವುಂಟು ಎಂದು ನಾನು ತಿಳಿಯುತ್ತೇನೆ.

ದರಖಾಸ್ತು ಮೂಲಕ ಜಮೀನು ಪಡೆಯಲಿಕ್ಕೆ ಕಷ್ಟ ಇದೆ. ಪಡೆದುದನ್ನು ಅಪಹರಿಸಲು ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತಾರೆ ಅಂತ ಮೊನ್ನೆಮೊನ್ನೆ ನನ್ನ ಕ್ಷೇತ್ರದಲ್ಲಿ ನಡೆದ ಸಂಗ್ತಿ ಏನೆಂದರೆ, ಒಬ್ಬ ಗಿರಿಜನ ವ್ಯಕ್ತಿಗೆ ಒಂದು ಎಕರೆ ಜಾಗವಿತ್ತು. ಅದರಲ್ಲಿ 400 ಅಡಿಕೆ ಮರಗಳನ್ನು ಬೆಳೆಸಿ, 8 ವರ್ಷ ಕಷ್ಟ ಪಟ್ಟಮೇಲೆ, ಅದು ಫಲ ಕೊಡುವ ಸ್ಥಿತಿಗೆ ಬಂದಿತ್ತು. ಅದಕ್ಕೆ ಒಡನೆ ಒಂದು ಕುಂಟು ನೆಪಮಾಡಿ ರೈತನಿಂದ ಒಂದು ಅಗ್ರಿಮೆಂಟ್ ಬರೆಸಿಕೊಂಡರು ನಾನು ವೃದ್ಧನಾದುದರಿಂದ ನನಗೆ ಗೈಯಲು ಆಗುವುದಿಲ್ಲ. ನನ್ನ ದರಕಾಸ್ತು ನೀವು ತೆಗೆದುಕೊಳ್ಳುವುದಕ್ಕೆ ನನ್ನ ಅಡ್ಡಿ ಇಲ್ಲ ಎಂದು ಹೇಳಿಸಿದರು. ಆದರೆ ಆ ಗಿರಿಜನ ವ್ಯಕ್ತಿಗೆ 3 ಮಕ್ಕಳು; ಅವನ ಮನೆಯಲ್ಲಿ 10 ಜನರಿದ್ದಾರೆ. ಅವನು ಆ ಅಡಿಕೆ ತೋಟವನ್ನು ಬಿಟ್ಟು; 5—6 ಮೈಲಿ ದೂರ ಹೋಗಿದ್ದಾನೆ. ಅವನ ಮೇಲೆ ನೀರಿನ ವ್ಯಾಜ್ಯಮಾಡಿ, ತೊಂದರೆ ಮಾಡುತ್ತೇವೆಂದು ಬೆದರಿಕೆ ಹಾಕಿದರು; ಆದ್ದರಿಂದ ಅವನು ಒತ್ತಾಯಪೂರ್ವಕವಾಗಿ ಅಗ್ರಿಮೆಂಟ್ ಬರೆಯಬೇಕಾಯಿತು. ಈ ಸಂದರ್ಭದಲ್ಲಿ ಮಾಡಿರುವ ಅನ್ಯಾಯವನ್ನು ಹೇಳಲಿಕ್ಕೂ ಕೇಳಲಿಕ್ಕೂ ನಾಚಿಕೆಯಾದ ಸಂಗತಿ. ಅದರಲ್ಲಿ ಕೇವಲ ಹೊಣೆ ಸರಕಾರದ್ದ ಅಲ್ಲ, ಪ್ರತಿ ಪಕ್ಷದಲ್ಲಿರುವ ಪ್ರಭಾವಶಾಲಿಗಳೂ ಹೊಣೆಯಾಗಿದ್ದಾರೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಈಗ ನಮ್ಮ ಮುಂದೆ ತಂದಿರುವ ಅಮೆಂಡ್‌ಮೆಂಟನ್ನು ಬಹಳ ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ತಂದಿದ್ದಾರೆ. ಆದರೆ ಭೂಮಿ ಇಲ್ಲದವರಿಗೆ, ಭೂಮಿಯಲ್ಲಿ ದುಡಿಯುವರಿಗೆ ಭೂಮಿ ಸಿಗುತ್ತದೆಯೆ ಅನ್ನುವುದು ಸಮಸ್ಯೆಯಾಗಿದೆ. ಇಲ್ಲಿರುವ ಪಟ್ಟಿ ಪ್ರಕಾರ, ಪ್ಲಾಂಟೇಶನ್ನಿಗೆ ಲಿಮಿಟೇಶನ್ ಇಲ್ಲ, ಅಂದರೆ ಸೀಲಿಂಗ್ ಇಲ್ಲ. ಅದನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದಾರೆ. ಅದರ ವಿಮರ್ಶೆಯನ್ನು ಇತರ ಸದಸ್ಯರು ಮಾಡಿದ್ದಾರೆ. ಮೂಲ ತತ್ವಗಳನ್ನು ನಾನು ಒಪ್ಪಿರುತ್ತೇನೆ. ಅದೇ ರೀತಿಯಾಗಿ ಗೇರುಬೀಜಕ್ಕೂ ಸೀಲಿಂಗ್ ಲಿಮಿಟೇಶನ್ ಇಲ್ಲದಹಾಗೆ ಮಾಡಬಹುದಾಗಿತ್ತು.

ಶ್ರೀ ಎಂ. ವಿ. ಕೃಷ್ಣಪ್ಪ.—ಗೇರುಬೀಜ ಹಣ್ಣೋ, ಬೀಜವೋ ?

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಅದು ಏನೇ ಇದ್ದರೂ, ಅದರ ವಿಂಗಡಣೆಗೆ ಏನೂ ತೊಂದರೆಯಾಗವುದಿಲ್ಲ. ಇದೂ, ಕಾಫಿ, ರಬ್ಬರ್, ಏಲಕ್ಕಿ ಮತ್ತು ಸಾಂಬಾರ ದಿನಸಿ ವಸ್ತುವಿನ ವಿಂಗಡಣೆಯಲ್ಲಿ ಸೇರುತ್ತದೆ. ಅದು ಏನೇ ಇರಲಿ, ಈಗ ಮಾಡಿರುವುದು ತತ್ವಶಃ ಸ್ವಾಗತಾರ್ಹವಾದುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಡಿಕೆ ತೋಟಕ್ಕೆ ಮತ್ತು ತೆಂಗಿನ ತೋಟಕ್ಕೆ ಸೀಲಿಂಗ್ ಲಿಮಿಟ್ ಇರಬೇಕೆ ಅಥವಾ ಅದು ಅನ್‌ಲಿಮಿಟೆಡ್ ಆಗಿ ಇರಬೇಕೆ ಅನ್ನುವುದನ್ನು ಖಚಿತವಾಗಿ ಹೇಳಿ. ಬೇಲಿ ಮೇಲೆ ಕೂತುಕೊಂಡು ಹೇಳಬೇಡಿ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸತ್ಯವಾಗಿ ಹೇಳುತ್ತೇನೆ. ಪ್ಲಾಂಟೇಶನ್ನಿಗೆ ಇತರ ಬೆಳೆಗಳಿಂದ ಮಾಡಿದ ನ್ಯಾಯದೃಷ್ಟಿಯಿಂದ ಬೇಡವೆಂದು ಹೇಳಿದೆ. ತತ್ವಶಃ ಬೇಕು. ಇಲ್ಲಿ ಕೊಟ್ಟಿರುವ ಪಟ್ಟಿ ಪ್ರಕಾರ plantation land used for specialised farms set apart for live-stock breeding... and such allied operations—sugarcane farms operated by sugar factories—land utilised by an efficiently managed farm ...... on which heavy investment or permanent structural improvements have been made—orchard land, Government land, Co-operation land ಇವುಗಳಿಗೆಲ್ಲಾ ಸೀಲಿಂಗ್ ಲಿಮಿಟೇಶನ್ ಇಲ್ಲ. ತತ್ವಶಃ ಹೀಗೆಲ್ಲಾ ನೆಪಮಾಡಿ ವಿನಾಯಿತಿ ಕೊಡುವುದು ಸರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಡಕೆ ಹಾಗೂ ತೆಂಗಿಗೆ ನಿಮ್ಮ ಅಭಿಪ್ರಾಯದಲ್ಲಿ ಎಕ್ಸೆಂಪ್‌ಷನ್ನು ಕೊಡಬೇಕೇ ಬೇಡವೇ ?

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಅದಕ್ಕೆ ಸೀಲಿಂಗು ಲಿಮಿಟ್ಟು ಹಾಕುವುದು ಸರಿ ಎಂದು ತತ್ವಶ: ಹೇಳುತ್ತೇನೆ. 27 ಸ್ಟಾಂಡರ್ಡು ಎಕರೆ ಎಂದು ಹೇಳಿರುವಂತೆ ಡ್ರೈ ಲ್ಯಾಂಡು 216 ಎಕರೆಯವರಿಗೆ ಬರುತ್ತದೆ, ಇದು ಒಂದು ಕುಟುಂಬದಲ್ಲಿ ಐದು ಜನರಿರುವವರಿಗೆ ಸಿಗುತ್ತದೆ. ಆದರೆ ಕುಟುಂಬದಲ್ಲಿ ಆರು ಜನರಿದ್ದ ಅವರಿಗಾಗಿ ಮತ್ತು 6 ಸ್ಟಾಂಡರ್ಡು ಎಕರೆ ಹೆಚ್ಚಾಗುತ್ತದೆ,

ಸುಮಾರು 300 ರಿಂದ 400 ಎಕರೆಗಳಷ್ಟು 6-7 ಜನ ಇರುವ ಕುಟುಂಬವೊಂದಕ್ಕೆ ಭೂಮಿ ಇಟ್ಟುಕೊಳ್ಳಬಹುದು ಇದೇ ಬಹಳ ಮಹತ್ವವಾಯಿತು. ಇನ್ನೂ ಭೂಮಿ ಸಿಗಲಿಕ್ಕಿಲ್ಲ ಎಂದು ಹೇಳುವಂತಿಲ್ಲ. ಅವರಿಗೆ ಬೇಕಾದರೆ ಎಕ್ಸೆಸ್ ಆಗಿರುವ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಇದರಲ್ಲಿ ಅವಕಾಶಗಳಿವೆ. ಇದರಿಂದ ಯಾರ ಮೇಲೆಯೂ ಆರೋಪಣೆಗಳನ್ನು ಮಾಡುವುದು ಅಷ್ಟು ಸರಿಯಲ್ಲ ಎಂದು ನನಗೆ ಕಾಣುತ್ತದೆ.

"Failure to cultivate personally" ಎಂದು ಇದರಲ್ಲಿ ಕೃಷಿ ಮಾಡುವಾಗ ಯಾವ ಉದ್ದೇಶಕ್ಕಾಗಿ ಹಾಕಿದ್ದಾರೆ ಎನ್ನುವುದು ಸರಿಯಾಗಿಲ್ಲ. ಇದರ ಉದ್ದೇಶಗಳು ಸರಿಯಾಗಿ ತಿಳಿಯುವಂತೆ ನಿರ್ದೇಶನ ಕೊಡುವುದು ಒಳ್ಳೆಯದು. ಅನುಕೂಲಸ್ಥರಾದವರು ಹೇಗಾದರೂ ಕೃಷಿ ಮಾಡಬಲ್ಲರು. ಆದರೆ ಸಣ್ಣ ಸಣ್ಣ ಹಿಡುವಳಿದಾರರ ಮೇಲೆ ವ್ಯಾಜ್ಯ ಮಾಡಿ ಅವರನ್ನು ಹೆದರಿಸಿ ಕೃಷಿ ಮಾಡಲಿಲ್ಲ ಎಂದು ಅವರಿಂದ ಭೂಮಿಯನ್ನು ಬಿಡಿಸಿ ಅದರಲ್ಲಿ ಏನೂ ಬೆಳೆಮಾಡದೆ ಬಂಜರು ಬೀಳುವಂತಹ ಸ್ಥಿತಿ ಇರುತ್ತದೆ. ಅಂತಹವನಿಂದ ಭೂಮಿಯನ್ನು ಬಿಡಿಸುವಂತಹ ಪರಿಸ್ಥಿತಿ ಬರಲಾರದು ಎಂದು ಕೆಲವರು ಇಲ್ಲ ಹೇಳಿದರು. ದೊಡ್ಡ ದೊಡ್ಡ ಪ್ರಾಜೆಕ್ಟುಗಳಿರುವ ಕಡೆಗಳಲ್ಲಿ ಭೂಹೀನರು ಹೋಗಿ ನೆಲಸಬಹುದು ಎನುವುದು ಅವಾಸ್ತವ ಮಾತು. ಬರೀ ಅವನ ಹೆಂಡಿರು ಮಕ್ಕಳು ಮತ್ತು ಅವನ ಒಂದಿಷ್ಟು ಸಾಮಾನಿನ ಗಂಟು ಮೂಟೆ ಮಾತ್ರ ಇರುವುದು. ಅಂತಹವರುಗಳು ಬೇರೆ ಪ್ರಾಜೆಕ್ಟುಗಳಲ್ಲಿ ಕೆಲಸಕ್ಕೆ ಹೋಗಿ ಸೇರಿ ಕೆಲಸ ಮಾಡಬಹುದು. ಆದರೂ ಅವರುಗಳು ಬರೀ ಕೈಯ್ಯಲ್ಲಿ ಅಲ್ಲಿಗೆ ಹೋಗಿ ಜೀವನ ಮಾಡುವುದು ಕಷ್ಟ. ಅವರ ಆರ್ಥಿಕ ಸ್ಥಿತಿ ಸರಿಯಾಗಿ ಇಲ್ಲ. ಸರಕಾರದವರು ಅವರಿಗೆ ಆರ್ಥಿಕವಾಗಿ ಸಹಾಯ ಮಾಡಿ ಅವರು ಹೊರಕ್ಕೆ ಹೋಗಿ ನೆಲಸುವಂತೆ ಮಾಡಿಕೊಟ್ಟರೆ ಅವರುಗಳು ಅಲ್ಲಿಗೆ ಹೋಗಿ ನೆಲಸಲು ಸಾಧ್ಯವಾಗಬಹುದು. ಇಲ್ಲದಿದ್ದರೆ ಇಲ್ಲ. ಇದರೊಳಗೆ ಇನ್ನೊಂದು ತಿದ್ದುಪಡಿ ತಂದಿದ್ದಾರೆ. ಅದು ಟ್ರಿಬ್ಯುನಲ್ಲಿನವರೆ ಮುಂದೆ ಪಟ್ಟಿಯನ್ನು ಮಾಡಿಕೊಳ್ಳಬೇಕು ಎಂದು. ಅವನಿಗೆ ಸರ್ವೆ ನಂಬರು ಯಾವುದು ಎನ್ನುವುದೇ ಗೊತ್ತಿರುವುದಿಲ್ಲ. ಅಥವಾ ಅದಕ್ಕಾಗಿ ಯಾರ ಹತ್ತಿರ ಹೋಗಿ ಅರ್ಜಿ ಕೊಡಬೇಕು ಎನ್ನುವುದೂ ಗೊತ್ತಿಲ್ಲ. ಅಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ಅವನಿಗೆದುರುಬೀಳುತ್ತಾರೆ. ಆಗ ಅವನು ಪಟ್ಟೆ ಮಾಡಿಸಿಕೊಳ್ಳಲು ಹೋಗುವುದು ಕಷ್ಟ. ಈಗ ರೈತರು ಸ್ವಲ್ಪಮಟ್ಟಿಗೆ ವಿಚಾರ ತಿಳಿದಿರುವರಾದರೂ ಇಂತಹ ಕಷ್ಟಗಳು ತಪ್ಪಿದ್ದಲ್ಲ ಎಂದು ನಾನು ತಿಳಿಯುತ್ತೇನೆ.

ಈ ಲ್ಯಾಂಡು ರಿಫಾರಂಸ್ ಕಾನೂನಿನಿಂದ ನಮ್ಮ ಜಿಲ್ಲೆಗೆ ಹೆಚ್ಚು ಹಾನಿಯೂ ಹಾಗೂ ಹೆಚ್ಚು ಒಳ್ಳೆಯದೂ ಬರಲಿಕ್ಕೆ ಸಾಧ್ಯವಿದೆ. ನಮ್ಮ ಜಿಲ್ಲೆಯಲ್ಲಿ ಶೇಕಡಾ 10·3 ರಷ್ಟು ಸ್ವಂತ ಸಾಗುವಳಿದಾರರೂ ಇದ್ದಾರೆ. ಬಾಕಿ ಎಲ್ಲ ಕೃಷಿ ಕೂಲಿಗಾರರು ಇಲ್ಲವೇ ವಕ್ಕಲು ಮಾಡುವವರು ಹಾಗೂ ಬೇರೆ ರೈತರು ಇದ್ದಾರೆ. ನಿಜವಾಗಿ ಸ್ವಂತವಾಗಿ ಪ್ರತ್ಯಕ್ಷವಾಗಿ ಕೃಷಿ ಮಾಡುವವನಿಗೆ ರೆಕಾರ್ಡು ಮೂಲಕ ಲ್ಯಾಂಡು ಕೊಡಬೇಕು ಸರಕಾರದವರೂ ಸಹಾನುಭೂತಿಯಿಂದ ಸ್ವಂತ ಬೇಸಾಯ ಮಾಡುವವನ ಕಡೆಗೆ ಗಮನ ಕೊಡಬೇಕು. ಅವನಿಗೆ ಉಪಕಾರವಾಗುತ್ತದೆ. ಅಧಿಕಾರಿಗಳು ಸರಿಯಾಗಿ ಮನಸ್ಸು ಮಾಡದಿದ್ದರೆ ಅದರಿಂದ ಬಡವನಿಗೆ ಹೆಚ್ಚು ಪ್ರಯೋಜನವಾಗಲಿಕ್ಕಿಲ್ಲ, ಅದರಿಂದ ಸಾರ್ಥಕತೆಯೂ ಉಂಟಾಗಲಿಕ್ಕಿಲ್ಲ. ನಮ್ಮಲ್ಲಿ ವಕ್ಕಲು ಮಾಡುವವರೇ ಹೆಚ್ಚಾಗಿರುವಾಗ ಇಂತಹ ಕಾನೂನನ್ನು ಎಷ್ಟು ಬೇಗ ಜಾರಿಗೆ ಕೊಟ್ಟರೆ ಅಷ್ಟು ಆದರಿಂದೇನಾದರೂ ಒಳ್ಳೆಯದಾಗಬಹುದು. ಮತ್ತೊಂದು ನಮ್ಮ ಜಿಲ್ಲೆಯ ವಿಷಯವೇನೆಂದರೆ, ಇಲ್ಲಿ ಸಣ್ಣ ಸಣ್ಣ ಹಿಡುವಳಿದಾರರುಗಳೇ ಹೆಚ್ಚು. ಅವರಿಗೆ ಒಂದು ಕಷ್ಟ ಬರುತ್ತದೆ. ಅವರ ಒಕ್ಕಲನ್ನು ಬಿಡಿಸುವುದಕ್ಕಾಗಿ ಇದರಲ್ಲಿ ಒಂದು ಪ್ರಾವಿಷನ್ನು ಇಟ್ಟಿದ್ದಾರೆ. ಇಷ್ಟು ಬೇಸಿಕ್ ಹೋಲ್ಡಿಂಗ್ ಎಂದು ಇರುವಂತಹವರನ್ನು ಅವರಿಗೆ ಇಟ್ಟು, ಅವರಿಂದ ಭೂಮಿ ಮಾಲೀಕ ತನಗೆ ಬೇಕೆಂದು ಬಿಡಿಸಿಕೊಳ್ಳಲು ಅವಕಾಶವಿದೆ. ಭೂಮಿ ಧಣಿ ತನಗೆ ಬೇಕಾದಷ್ಟು ಭೂಮಿಯನ್ನು ಬಿಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಅವನಿಗೆ ಹೇಳಬಹುದು. ಆದರೂ ಭೂಮಿಯ ಧಣಿಯಾದವನು ಸಾಕಷ್ಟು ಪಾಲನ್ನು ವಕ್ಕಲು ಮಾಡುವವನಿಗೆ ಬಿಟ್ಟು ಕೊಡಲು ಸಾಧ್ಯವಾದಷ್ಟು ಸರಳವಾಗಿ ಈ ಕಾನೂನನ್ನು ಮಾಡಿ ಎಲ್ಲರಿಗೂ ಪ್ರಯೋಜನ ಸಿಗುವಂತೆ ಮಾಡುವುದು ಒಳ್ಳೆಯದು ಎಂದು ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತೇನೆ.

†ಶ್ರೀ ಬಿ. ಭಾಸ್ಕರಶೆಟ್ಟಿ (ಕೌಪ್).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಈಗಾಗಲೇ ತಂದಿರುವ ಈ ಒಕ್ಕಲು ಮಸೂದೆಯ ತಿದ್ದುಪಡಿಯನ್ನು ಹಾಗೂ ಭೂಸುಧಾರಣಾ ಮಸೂದೆಯನ್ನು ಸ್ವಾಗತ ಮಾಡುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ.

ಈ ಭೂಸುಧಾರಣಾ ಮಸೂದೆ, ಶ್ರೀಮಾನ್ ಸುಬ್ಬಯ್ಯನಾಯಕರು ಈಗ ತಾನೇ ಹೇಳಿದಂತೆ, 1930 ರ ಕರಾಚಿ ಕಾಂಗ್ರೆಸ್ಸು ಅಧಿವೇಶನದಲ್ಲಿ ನಮ್ಮ ಕಾಂಗ್ರೆಸ್ಸು ಸರಕಾರ ಅಧಿಕಾರ ವಹಿಸಿಕೊಂಡ ಕೂಡಲೇ, ಅವರು ಅಧಿಕಾರ ವಹಿಸಿಕೊಂಡ ಎರಡು ವರ್ಷಗಳೊಳಗಾಗಿ ಪ್ರಥಮತಃ ಇಂತಹ ಒಂದು

(ಶ್ರೀ ಬಿ. ಭಾಸ್ಕರಶೆಟ್ಟಿ)

ಮಸೂದೆ ತರುತ್ತೇವೆಂದು ಕರಾಚಿಯಲ್ಲಿ ಅಂದು ಒಂದು ನಿರ್ಣಯ ಮಾಡಿದ್ದರು. ಆದರೆ ಕೆಲವು ದುಷ್ಟ ಶಕ್ತಿಗಳ, ಎಂದರೆ, ಭೂ ಮಾಲೀಕರ ಕೃಪಾಕಟಾಕ್ಷಗಳಿಗೆ ಪ್ರಭಾವಕ್ಕೆ ಒಳಗಾಗಿ ಈ ಸರಕಾರ ಭೂಸುಧಾರಣೆಯ ಕಾನೂನನ್ನು ಜಾರಿಗೆ ತರಲು 17 ವರ್ಷಗಳಷ್ಟು ದೀರ್ಘ ಕಾಲ ಹಿಡಿಯಿತು. 1958 ನೇ ಇಸವಿಯಲ್ಲಿ ಈ ಮಸೂದೆಯನ್ನು ಈ ಮಾನ್ಯ ಸಭೆಯ ಮುಂದೆ ಪ್ರಥಮತಃ ಮಂಡಿಸಿದ್ದರು. ಆ ಮೇಲೆ ಸಾಧಾರಣವಾಗಿ 40 ಜನರಿರುವ ಒಂದು ಜಾಯಿಂಟು ಸೆಲೆಕ್ಟು ಕಮಿಟಿಯವರು ಈ ಮಸೂದೆಯನ್ನು ಪರಿಶೀಲನೆ ಮಾಡುವುದಕಾ ಗಿ ಈ ಸರಕಾರಕ್ಕೆ ಮೂರು ವರ್ಷಗಳಷ್ಟು ಕಾಲ ಹಿಡಿಯಿತು. ಅಮೇಲೆ 1961 ನೇ ಇಸವಿಯಲ್ಲಿ ಈ ಮಸೂದೆಯನ್ನು ಪರಿಶೀಲನೆ ಮಾಡಬೇಕೆಂದು ಸಮಿತಿಯವರಿಂದ ಪುನ : ಈ ಸಭೆಯ ಮುಂದ ಬಂದು ಅನಂತರ ಕೇಂದ್ರ ಸರಕಾರದವರು ಇದರಲ್ಲಿ ಏನೋ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಆ ಎಲ್ಲ ತಿದ್ದುಪಡಿಗಳನ್ನೂ ಸೇರಿಸಿ ಇಲ್ಲಿ ಪುನ: ತರಲು ನಾಲ್ಕು ವರ್ಷಗಳ ಕಾಲ ಹಿಡಿಯಿತು. ಇದರಿಂದ ಏನು ಅನಿಸುತ್ತದೆ ಎಂದರೆ, ಈ ಸರಕಾರದ ಪಾರ್ಟಿಯಲ್ಲಿರುವ ದೊಡ್ಡ ಭೂ ಮಾಲೀಕರುಗಳಿಗೆ ಸಹಾಯ ಮಾಡಬೇಕೆಂದು ಅವರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಅಷ್ಟರೊಳಗೆ ತಮ್ಮಲ್ಲಿರುವ ಜಮೀನುಗಳನ್ನು ಬಿಡಿಸಿಕೊಳ್ಳುವ ಅವಕಾಶಗಳನ್ನು ಪಡೆಯುವುದಕ್ಕಾಗಿ ಇಂತಹ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆಂದು ನನಗೆ ಅನ್ನಿಸುತ್ತದೆ.

ಸ್ವಾಮೀ, ಈ ಮಸೂದೆಯಲ್ಲಿ ಸರಕಾರದ ದೇವಾಲಯಗಳಿಗೆ ಮತ್ತು ಸರಕಾರದ ಹಿಡಿತದಲ್ಲಿರುವ ಇನಾಂತಿ ಮಠಗಳಿಗೆ ವಿನಾಯಿತಿ ಕೊಡುತ್ತಾರೆ ಎಂದು ನಮ್ಮ ಮಾನ್ಯ ಕಂದಾಯ ಮಂತ್ರಿಗಳು ಇದರಲ್ಲಿ ಹೇಳಿದ್ದಾರೆ.

(8) " Exemption granted to Government lands under Section 107 will also be granted to lands belonging to or held on lease from religious and charitable institutions managed by or under the control of the Government. "

ಇದನ್ನೆಲ್ಲಾ ಇಲಾಖೆಯವರೇ ಕಂಟ್ರೋಲು ಮಾಡುವಂತೆ ಇದ್ದರೆ ನನಗಾದರೂ ಒಂದು ತರಹದ ಭಯವಾಗುತ್ತದೆ. ಮಠಗಳಿಗೂ ಈ ಕಾನೂನು ಅನ್ವಯವಾಗುವುದಿಲ್ಲ ಎಂದರೆ, ಇದರ ಪರಿಣಾಮ ಹಾಳಾಗುತ್ತದೆ. ಮಠಗಳಿಗೆ ಯಾವ ತರಹದ ವಿನಾಯಿತಿಗಳನ್ನೂ ಕೊಡಬಾರದು.

Mr. DEPUTY SPEAKER.—We will rise now and re-assemble tomorrow at 1 O' clock.

The House adjourned at Six of the Clock to meet again at One of the Clock on Tuesday, the 20th April 1965.

WD 5036—GPB—500—8-9-65